
ಕಲ್ಯಾಣ ಕಿರಣ

ಸೆಪ್ಟೆಂಬರ್ 2003

ಬೆಲೆ ರೂ. 5-00/-



ವೀರ ಗಣಾಚಾರಿ ಮಡಿವಾಳ ಮಾಚಿದೇವರು



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ 34 | ಬಸವ ಶಕೆ 870 | ಆಜೀವ ಸದಸ್ಯತ್ವ 500 ರೂ.

ಸಂಚಿಕೆ 8 | ಸೆಪ್ಟೆಂಬರ್ 2003 | ವಾರ್ಷಿಕ ಚಂದಾ 50/- ರೂ.

ಲಿಂಗಾಯತರ ಧರ್ಮ ಸಂಹಿತೆ ವಚನ ಸಾಹಿತ್ಯ

ಅಯ್ಯಾ ಮಹಾಭಕ್ತರ ಹೃದಯದಲ್ಲಿ ನೀನಿಪ್ಪೆಯಾಗಿ
ಅವರ ವಚನವೆನ್ನ ಕರ್ಣದೊಳಗೆ ತುಂಬಲೊಡನೆ
ವಿರಕ್ತಿ ಬೆದೆಯಾಗಿ, ಭಕ್ತಿ ಮೊಳೆಯಾಗಿ
ನಿಮ್ಮ ಶ್ರೀಪಾದದೊಳಗೆನ್ನ ಸುತ್ತಿತ್ತು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ

ಶಾಸ್ತ್ರವೆಂಬುದು ಮನ್ಮಥ ಶಸ್ತ್ರವಯ್ಯಾ
ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯಾ
ಪುರಾಣವೆಂಬುದು ಮೃತರಾದವರ ಗಿರಾಣವಯ್ಯ
ತರ್ಕವೆಂಬುದು ಮರ್ಕಟಾವಯ್ಯ
ಆಗಮವೆಂಬುದು ಯೋಗದ ಘೋರವಯ್ಯ
ಇತಿಹಾಸವೆಂಬುದು ರಾಜರ ಕಥಾಭಾಗವಯ್ಯ
ಸ್ಮೃತಿಯೆಂಬುದು ಪಾಪ ಪುಣ್ಯ ವಿಚಾರವಯ್ಯ
ಆದ್ಯರ ವಚನವೆಂಬುದು ಬಹುವೇದ್ಯವಯ್ಯ
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ತಿಳಿಯಲಿಕ್ಕೆ

ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೇ ಇಷ್ಟವಯ್ಯ
ಸ್ಮೃತಿಗಳು ಸಮುದ್ರದ ಪಾಲಾಗಲಿ
ಶ್ರುತಿಗಳು ವೈಕುಂಠವ ಸೇರಲಿ
ಪುರಾಣಗಳು ಅಗ್ನಿಯ ಸೇರಲಿ
ಆಗಮಗಳು ವಾಯುವ ಹೊಂದಲಿ
ಎಮ್ಮ ಶರಣರ ನುಡಿ ಕಪಿಲಸಿದ್ಧ ಮಲ್ಲಿಕಾರ್ಜುನ
ಮಹಾಲಿಂಗದ ಹೃದಯದೊಳು ಗ್ರಂಥಿಯಾಗಿರಲಿ

- ಬಸವ ಯೋಗಿ ಶ್ರೀ ಸಿದ್ಧರಾಮೇಶ್ವರರು.

ಕಲ್ಯಾಣ ಕಿರಣ

ಸಂಪುಟ 34	ಬಸವ ಶಕೆ 870	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 9	ಸೆಪ್ಟೆಂಬರ 2003	ವಾರ್ಷಿಕ ಚಂದಾ 50/- ರೂ.

ಲೇಖನಗಳು — ಕಿರಣಗನ್ನಡಿ — ಲೇಖಕರು — ಪುಟ

ರಕ್ಷಾ ಪುಟ - 2 ಅಮೆರಿಕಾದ ಆಸ್ಟಿನ್ ನಗರದಲ್ಲಿ ನಡೆದ ಬಸವ ಪಂಚಮಿ ನಿಮಿತ್ತ ಪೂಜ್ಯ ಮಾತಾಜಿಯವರಿಂದ ವಿಶೇಷ ಪೂಜೆ.

ರಕ್ಷಾ ಪುಟ - 4 ಅಮೆರಿಕಾದ ಟೆಕ್ಸಾಸ್‌ನ ಆಸ್ಟಿನ್ ನಗರದಲ್ಲಿನ ವೆಬ್ ಮಿಡ್ಲ್‌ಸ್ಕೂಲ್ ಆಡಿಟೋರಿಯಂನಲ್ಲಿ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಬಸವ ಪಂಚಮಿ ಆಚರಣೆ. ಶರಣರಾದ ವಿಶ್ವಾಸ್, ಉಮೇಶ್, ಮಾಯಾ, ಸುಚೇತಾರವರುಗಳು ಚಿತ್ರದಲ್ಲಿದ್ದಾರೆ.

* ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ನೈತಿಕ, ಮಾನವೀಯ ಮೌಲ್ಯಗಳನ್ನು ಬಿತ್ತರಿಸುತ್ತಿರುವ ಕಲ್ಯಾಣ ಕಿರಣ ಮಾಸಪತ್ರಿಕೆಗೆ ಚಂದಾದಾರರಾಗಿರಿ ಮತ್ತು ಇತರರನ್ನು ಚಂದಾದಾರರಾಗುವಂತೆ ಪ್ರೇರೇಪಿಸಿರಿ. ವಾರ್ಷಿಕ ಸದಸ್ಯತ್ವ - ರೂ. 50, ಆಜೀವ ಸದಸ್ಯತ್ವ - ರೂ. 500

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ : ದೂರವಾಣಿ : 3325335/3322790

ಬಸವ ಮಂಟಪ, 2035 20ನೇಯ ಮುಖ್ಯರಸ್ತೆ, ಚರವನಿಯ ಪಾರ್ಕು ರಾಜಾಜಿನಗರ, ಬೆಂಗಳೂರು-560010

ಬಸವ ಬೀಡಿನಿಂದ ಅಮೆರಿಕಾ ನಾಡಿಗೆ

ಪ್ರವಾಸ ಕಥನ - ಭಾಗ 2

- ಮಾತಾಜಿ, ಆಸ್ಟಿನ್, ಯು.ಎಸ್.ಎ

ಜುಲೈ 4, ಅಮೆರಿಕಾದ 228 ನೆಯ ಸ್ವಾತಂತ್ರ್ಯೋತ್ಸವದ ದಿವಸ. 1776ನೆಯ ಇಸವಿಯ ಜುಲೈ 4 ರಂದು ಅಮೆರಿಕಾ ದೇಶವು ಬ್ರಿಟಿಷರ ಆಳ್ವಿಕೆಯಿಂದ ಮುಕ್ತವಾಯಿತು. ಈ ರಾಷ್ಟ್ರೀಯ ಹಬ್ಬವನ್ನು ಅಮೆರಿಕನ್ನರು ಉತ್ಸಾಹದಿಂದ ಆಚರಿಸುತ್ತಾರೆ. ಅನೇಕರು ತಮ್ಮ ತಮ್ಮ ಮನೆಗಳ ಮುಂದೆ ದೊಡ್ಡ ಗಾತ್ರದ ಧ್ವಜಗಳನ್ನು ಹಾರಿಸುತ್ತಾರೆ. ಒಂದು ಕಂಪೆನಿ ತನ್ನ ಜಾಹಿರಾತಿಗಾಗಿ ಧ್ವಜಗಳನ್ನು ಮಾಡಿಸಿ ಎಲ್ಲರ ಮನೆಗಳ ಮುಂದೆ ನೆಟ್ಟಿದ್ದರೆ, ಇನ್ನೊಂದು ಕಂಪೆನಿ ಆಸ್ಟಿನ್ ಅಮೆರಿಕನ್ ಸ್ಟೇಟ್ಸ್‌ಮನ್ ಎಂಬ ದಿನಪತ್ರಿಕೆಯನ್ನು ಉಚಿತವಾಗಿ ಎಲ್ಲರ ಮನೆಗೆ ಒದಗಿಸಿತ್ತು. ಜೊತೆಗೆ ಅದಕ್ಕೊಂದು ಪ್ಲಾಸ್ಟಿಕ್ ಕವರ್ ಬೇರೆ. ಅದರಲ್ಲಿ ಹಾಕಿ ಪತ್ರಿಕೆಯನ್ನು ಮನೆಗಳ ಮುಂದೆ ಎಸೆದಿರುತ್ತಾರೆ. ಪತ್ರಿಕೆ ಹಾಕುವವರು ಕಾರಿನಲ್ಲಿ ಕುಳಿತು ಅವನ್ನು ಎಸೆಯುತ್ತ ಹೋಗುತ್ತಾರೆ. ಒಂದು ರಸ್ತೆಯಲ್ಲಿ ಒಂದು ಬದಿಯ ಮನೆಗಳಿಗೆ ಎಸೆಯುತ್ತ ಹೋದರೆ ಪುನಃ ಮತ್ತೊಂದು ದಿಕ್ಕಿನಿಂದ ಬಂದು ಇನ್ನೊಂದು ಬದಿಯ ಮನೆಗಳಿಗೆ ಎಸೆಯುತ್ತಾರೆ. ನಮ್ಮಲ್ಲಿಯಂತೆ ಬಡ ಹುಡುಗರು ನಡೆಯುತ್ತಲೋ ಇಲ್ಲವೇ ಸೈಕಲ್ ಮೇಲೆ ಬಂದು ಕೊಡುತ್ತಲೋ ಹೋಗುವಂತೆ ಇಲ್ಲಿ ಮಾಡದೆ ಎಲ್ಲದಕ್ಕೂ ಕಾರನ್ನು ಬಳಸುವರು. ಕಾರು ಮತ್ತು ಫೋನ್ ಇಲ್ಲದೆ ಇಲ್ಲಿ ಬದುಕಲು ಸಾಧ್ಯವೇ ಇಲ್ಲ ಎಂಬ ವಾತಾವರಣವಿದೆ. ಇನ್ನು ಪತ್ರಿಕೆಗಳ ಪುಟಗಳ ಸಂಖ್ಯೆಗಂತೂ ಲೆಕ್ಕವೇ ಇಲ್ಲ. ವಿಶೇಷ ದಿನಗಳಂದು ನೂರರವರೆಗೂ ಹೋದೀತು. ಹೇಗೆ ಮುದ್ರಿಸುವರೋ ಎಂದು ಆಶ್ಚರ್ಯ ಉಂಟಾಗುತ್ತದೆ.

ಸ್ವಾತಂತ್ರ್ಯೋತ್ಸವದ ನಿಮಿತ್ತ ಕೆಲವರು ತಮ್ಮ ಮನೆಗಳ ಮುಂದೆ ತೋರಣಕಟ್ಟಿ ಅಲಂಕರಿಸಿಕೊಂಡರೆ ಮತ್ತೆ ಕೆಲವರು ವಿಶೇಷವಾದ ಅಲಂಕಾರಿಕ ದೀಪಗಳನ್ನು ಹಚ್ಚಿದ್ದರು. ಅಮೆರಿಕಾದ ವಿವಿಧ ಪಟ್ಟಣಗಳಲ್ಲಿ ಒಂದು ದೊಡ್ಡ ಮೈದಾನದಲ್ಲಿ ದೊಡ್ಡ ಪ್ರಮಾಣದಲ್ಲಿ ಪಟಾಕಿ ಹಚ್ಚುವ ಪ್ರದರ್ಶನ ಇರುತ್ತದೆ. ಇಲ್ಲಿ ಖಾಸಗಿಯಾಗಿ ಪಟಾಕಿ ಹಚ್ಚುವುದಕ್ಕಿಂತ ಸಾರ್ವಜನಿಕವಾಗಿ ಹಚ್ಚಲಾಗುವುದು. ಟಿಕೆಟ್ ಖರೀದಿಸಿ ಜನ ನೋಡುವರು. ಖಾಸಗಿಯಾಗಿಯೂ ಮಕ್ಕಳು, ತರುಣ-ತರುಣಿಯರು ಪಟಾಕಿ ಹಚ್ಚಿದರಾದರೂ ನಮ್ಮಲ್ಲಿಯಷ್ಟು ಗಲಾಟೆ, ದೊಂಬಿ ಕೇಳಿಬರಲಿಲ್ಲ. ದೀಪಾವಳಿ ಹಬ್ಬದ ಮೂರು ದಿನ ನಮ್ಮಲ್ಲಿ ನರಕವೇ ನಿರ್ಮಾಣವಾಗಿರುತ್ತದೆ. ದಮ್ಮು, ಅಲರ್ಜಿ ಮುಂತಾದ ಖಾಯಿಲೆ ಇದ್ದವರ ಯಾತನೆಯಂತೂ ಬೇಡವೇ ಬೇಡ. ಪಟಾಕಿ ಹಚ್ಚುವವರನ್ನು ಪಾಪಿಗಳೆಂದು ಶಪಿಸುತ್ತ, ಮನೆಯೊಳಗೆ ಸೀನುತ್ತ, ಕೆಮ್ಮುತ್ತ ಕುಳಿತುಕೊಳ್ಳುವುದೊಂದೇ ಅವರಿಗೆ ಮಾರ್ಗ.

ಸಾಮಾನ್ಯವಾಗಿ ದೀಪಾವಳಿ ಹಬ್ಬದಲ್ಲಿ ಪಟಾಕಿ ಹಾರಿಸುವ ಹುಂಬತನದಿಂದ ಎಷ್ಟೋ ಮಕ್ಕಳು ಸುಟ್ಟುಕೊಳ್ಳುವುದೊಂದಾದರೆ, ಮೇಲಕ್ಕೆ ಹಾರಿಸುವ ರಾಕೆಟ್ ಮುಂತಾದುವುಗಳಿಂದ ತೆಂಗಿನ ಮರಗಳ ಸುಳಿಗಳೇ ಸುಟ್ಟು ಹೋಗುವುದು ಮತ್ತೊಂದು ಪೀಡೆ. ಇಲ್ಲಿ ಖಾಸಗಿಯಾಗಿ ಅಲ್ಪಸಲ್ಪ ಪಟಾಕಿ ಹಾರಿಸುವುದರಿಂದ ಮನೆಗಳಲ್ಲಿ ಸಾಕಿರುವ ನಾಯಿಗಳು ಬೆದರಿ ಓಡಿ ಹೋಗಿ, ಸಿಕ್ಕಿದವರು ಅದನ್ನು ಸಾರ್ವಜನಿಕ ಪ್ರಾಣಿ ಸಂರಕ್ಷಣಾ ಕೇಂದ್ರಗಳಿಗೆ ಒಪ್ಪಿಸಿದ್ದು ಎಷ್ಟೋ ದಿವಸಗಳವರೆಗೆ ಟಿ.ವಿ. ತೆರೆಗಳಲ್ಲಿ ಸಿಕ್ಕಿರುವ ನಾಯಿಗಳ ಚಿತ್ರ, ಕಳೆದುಕೊಂಡ ಮಾಲಿಕರ ಚಿತ್ರಗಳು ಸತತವಾಗಿ ಬರುತ್ತಿದ್ದವು. ವಿಶಾಲವಾದ

ಮೈದಾನದಲ್ಲಿ ಕೆಲವು ಸಂಸ್ಥೆಗಳು ಪಟಾಕಿಯನ್ನು ವಿವಿಧ ಚಿತ್ತಾರಗಳಲ್ಲಿ ಹಾರಿಸುವುದರಿಂದ ಮಕ್ಕಳು ಸುಟ್ಟುಕೊಳ್ಳುವ, ಸಾರ್ವಜನಿಕ ಆಸ್ತಿಗಳು ನಾಶವಾಗುವ ತೊಂದರೆ ಕಡಿಮೆ. ಪಟಾಕಿಯ ಅನೇಕ ಕಾರ್ಖಾನೆ, ಸಂಗ್ರಹಾಲಯಗಳಲ್ಲಿ ಸ್ಫೋಟ ಸಂಭವಿಸಿ, ಅನೇಕ ರಾಜ್ಯ ಸರ್ಕಾರಗಳು ಪಟಾಕಿಯನ್ನು ನಿರ್ಬಂಧಿಸಲು ಸಹ ಆಲೋಚಿಸುತ್ತಿವೆ.

ನಮ್ಮ ಸರ್ಕಾರಗಳು ಸಾರ್ವಜನಿಕರ ಹಿತಾಸಕ್ತಿಯ ಬಗ್ಗೆಯಾಗಲೀ, ಪರಿಸರ ಮಾಲಿನ್ಯದ ಬಗ್ಗೆಯಾಗಲಿ ಚಿಂತಿಸದೆ ಫ್ಯಾಕ್ಟರಿ ಮಾಲಿಕರ, ವ್ಯಾಪಾರಸ್ಥರ ಹಿತಾಸಕ್ತಿ ಕಾಪಾಡುವ ಬಗ್ಗೆ ಮಾತ್ರ ಆಲೋಚಿಸುವುದರಿಂದ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಉದ್ಯಮಗಳಲ್ಲೊಂದು ಎಂದು ಮಾತ್ರ ಕಾರಣ ಹೇಳುತ್ತದೆ.

ಬ್ರಿಟಿಷ್ ವಸಾಹತುಶಾಹಿಯಿಂದ ಬಿಡುಗಡೆಯಾದಾಗ ದಿ. 4-7-1776 ರಂದು ಅಮೆರಿಕಾ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾದ ಜಾನ್ ಹ್ಯಾನ್‌ಕಾಕ್ ಅವರು ಬಿಡುಗಡೆ ಮಾಡಿದ ಘೋಷಣಾ ಹೇಳಿಕೆಯ ವಿವರ ಮಾರ್ಮಿಕವಾಗಿದೆ. (ಸ್ವಾತಂತ್ರ್ಯ ಘೋಷಣೆಯು ಅಮೆರಿಕಾ ದೇಶದ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದ ಜನನ ಪ್ರಮಾಣ ಪತ್ರದಂತೆ ಇದ್ದು ಅನೇಕ ಮಹತ್ವಪೂರ್ಣ ತತ್ತ್ವಗಳನ್ನು ಬಿಂಬಿಸುತ್ತಿದೆ. ಇದನ್ನು ಆಸ್ಟಿನ್ ಅಮೆರಿಕನ್ ಸ್ಟೇಟ್ಸ್‌ಮನ್ ಪತ್ರಿಕೆಯಿಂದ ಆಯ್ದುಕೊಳ್ಳಲಾಗಿದೆ.

ಜುಲೈ 4, 1776 ರಂದು ಜನರಲ್ ಕಾಂಗ್ರೆಸ್‌ನಲ್ಲಿ ಸಮಾವೇಶವಾದ ಅಮೆರಿಕಾದ ಸಂಯುಕ್ತ ಸಂಸ್ಥಾನದ ಪ್ರತಿನಿಧಿಗಳು ಮಾಡುತ್ತಿರುವ ಘೋಷಣೆ (Declaration)

ಮಾನವ ಜನಾಂಗದ ಹಲವಾರು ಪ್ರಸಂಗಗಳಲ್ಲಿ, ಒಂದು ಸಮುದಾಯಕ್ಕೆ ಇನ್ನೊಂದರೊಡನೆ ಇರುವ ರಾಜಕೀಯ ಬಂಧನವನ್ನು ವಿಸರ್ಜಿಸುವ ಅಗತ್ಯ ಒದಗಿ ಬರುತ್ತದೆ ಮತ್ತು ಭೂಮಿಯು ಕೊಟ್ಟಿರುವ ಅಧಿಕಾರವನ್ನು ಅರಿತು ಕೊಳ್ಳುವ, ನಿಸರ್ಗದ ನಿಯಮಗಳು ಮತ್ತು ನಿಸರ್ಗದ ಒಡೆಯನಾದ ಸೃಷ್ಟಿಕರ್ತನು ಕೊಟ್ಟಿರುವ ಸ್ವತಂತ್ರ ಮತ್ತು ಸಮಾನ ಸ್ಥಾನವನ್ನು ಅರಿತುಕೊಳ್ಳುವ ಅಗತ್ಯವಿರುತ್ತದೆ. ಆದರೆ ಮಾನವ ಜನಾಂಗದ ಅಭಿಪ್ರಾಯಗಳಿಗೆ ಸೂಕ್ತ ಗೌರವ ಕೊಡಲೇಬೇಕಾದಾಗ ಈ ಪ್ರತ್ಯೇಕತೆಯ ಉತ್ಕಟ ಪ್ರಯತ್ನಕ್ಕೆ ಹಿನ್ನೆಲೆಯಾಗಿರುವ ಸೂಕ್ತ ಕಾರಣಗಳನ್ನು ಘೋಷಿಸಬೇಕಾಗುತ್ತದೆ.

ನಾವು ಈ ಸತ್ಯಗಳು ಸ್ವತಃ ಸಿದ್ಧವೆಂದು ಅಭಿಪ್ರಾಯ ಪಡುತ್ತೇವೆ; ಅವೆಂದರೆ, ಎಲ್ಲ ಮಾನವರೂ ಸಮಾನವಾಗಿ ಸೃಷ್ಟಿಯಾಗಿದ್ದಾರೆ. ಅವರುಗಳು ತಮ್ಮ ಸೃಷ್ಟಿಕರ್ತನು ಕೊಟ್ಟಿರುವ ಕೆಲವು ಅನಿರ್ಬಂಧಿತವಾದ ಹಕ್ಕುಗಳನ್ನು ಹೊಂದಿದ್ದಾರೆ. ಆ ಹಕ್ಕುಗಳೆಂದರೆ ಬದುಕು, ಸ್ವಾತಂತ್ರ್ಯ ಮತ್ತು ಸಂತೋಷದ ಅನ್ವೇಷಣೆ. ಈ ಹಕ್ಕುಗಳನ್ನು ಹೊಂದಲು ಅನುಕೂಲವಾಗುವಂತೆ ಮಾನವ ಸಮಾಜದಲ್ಲಿ ಸರ್ಕಾರಗಳು ರೂಪುಗೊಳ್ಳುತ್ತವೆ. ಆಳಿಸಿಕೊಳ್ಳುವ (ಪ್ರಜೆಗಳ) ವರ ಅನುಮತಿಯೊಡನೆ ಸರ್ಕಾರಗಳು ಕೆಲವೊಂದು ಅಧಿಕಾರವನ್ನು ಹೊಂದುತ್ತವೆ. ಆದರೆ ಯಾವಾಗ ಯಾವುದೇ ಸರ್ಕಾರವು ಈ ಉದ್ದೇಶವನ್ನು ಈಡೇರಿಸಲು ಅಸಮರ್ಥವಾಗುತ್ತದೋ ಆಗ ಜನಸಮುದಾಯಕ್ಕೆ ಅಂಥ ಸರ್ಕಾರವನ್ನು ಬದಲಾಯಿಸಲು ಅಥವಾ ಉಚ್ಚಾಟಿಸಲು ಮತ್ತು ತಮಗೆ ಭದ್ರತೆ ಮತ್ತು ಸಂತೋಷವನ್ನು ನೀಡಬಲ್ಲಂತಹ ನೂತನ ಸರ್ಕಾರವನ್ನು ಸ್ಥಾಪಿಸಲು ಹಕ್ಕು ಪ್ರಾಪ್ತಿಯಾಗುತ್ತದೆ.

ಸೌಜನ್ಯ ಅಥವಾ ಶಿಷ್ಟಾಚಾರವು, ದೀರ್ಘಕಾಲದಿಂದಲೂ ಸ್ಥಾಪಿತವಾಗಿರುವ ಸರ್ಕಾರಗಳನ್ನು ಸಾಮಾನ್ಯವಾದ ಮತ್ತು ತೋರಿಕೆಯ ಕಾರಣಗಳಿಗಾಗಿ ಬದಲಾಯಿಸುವುದು ಸರಿಯಲ್ಲ ಎಂಬುದನ್ನು ಆದೇಶಿಸುತ್ತದೆ ಮತ್ತು ಹಾಗೆ ಮಾಡಿದಾಗ ಸಾಕಷ್ಟು ಸಂಕಷ್ಟಗಳನ್ನು ಮಾನವ ಜನಾಂಗವು ಅನುಭವಿಸಿದ ದಾಖಲೆಯೂ ಇದೆ. ಆದರೆ ಆಕ್ರಮಣ ಮತ್ತು ದುರುಪಯೋಗಗಳು ಬಹಳವಾದಾಗ ಅದನ್ನೇ ಅನುಭವಿಸುತ್ತಾ ಹೋಗುವುದು ಅತಿಯಾದ ದೌರ್ಬಲ್ಯವನ್ನು ಬೆಳೆಸುತ್ತದೆ. ಆದ್ದರಿಂದ ಯಾತನೆ ಅನುಭವಿಸುವವರು ಅಂಥ ಸರ್ಕಾರವನ್ನು ಕಿತ್ತೊಗೆಯುವುದು ತಮ್ಮ ಭವಿಷ್ಯತ್ ದೃಷ್ಟಿಯಿಂದ ನೂತನ ಸಂರಕ್ಷಕರನ್ನು ಆಯ್ಕೆ ಮಾಡಿಕೊಳ್ಳುವುದು ತಮ್ಮ ಹಕ್ಕೆಂದು, ತಮ್ಮ ಕರ್ತವ್ಯವೆಂದು ಭಾವಿಸಬೇಕು. ಈವರೆಗೂ ವಸಾಹತುಗಳು (Colonies) ತಾಳ್ಮೆಯಿಂದ ಕಷ್ಟಗಳನ್ನು ಅನುಭವಿಸಿವೆ. ಆದ್ದರಿಂದ ಈಗ ಹಿಂದಿನ ಸರ್ಕಾರಿ ವ್ಯವಸ್ಥೆಯನ್ನು ಬದಲಾಯಿಸುವ ಅನಿವಾರ್ಯತೆ ಒದಗಿ ಬಂದಿದೆ. ಬ್ರಿಟನ್ನಿನ ಇಂದಿನ ದೊರೆಯ ಚರಿತ್ರೆಯು ಆಕ್ರಮಣ ಮತ್ತು ನಿರಂತರ ಕಿರುಕುಳದ ಚರಿತ್ರೆಯಾಗಿದೆ. ಅಧೀನ ರಾಜ್ಯಗಳ ಮೇಲೆ ಅತ್ಯಂತ ಹೆಚ್ಚಿನ ಕ್ರೌರ್ಯ ಮತ್ತು ಅನ್ಯಾಯಗಳನ್ನು ಹೇರಲಾಗುತ್ತಿದೆ. ಇದನ್ನು ಸಾಬೀತು ಪಡಿಸಲು ಕೆಲವೊಂದು ಘಟನೆಯನ್ನು ಪ್ರಜ್ಞಾವಂತ ಜಗತ್ತಿನ ಮುಂದೆ ಇಡಲಾಗುತ್ತಿದೆ.

ಸಾರ್ವಜನಿಕ ಹಿತಾಸಕ್ತಿಗಾಗಿ ಅತ್ಯಗತ್ಯವಾಗಿರುವ ಕೆಲವೊಂದು ಕಾನೂನು ಬದ್ಧ ಕಾಯ್ದೆಗಳನ್ನು ಜಾರಿಗೆ ತರಲು ಅವರು (ಬ್ರಿಟನ್ನಿನ ದೊರೆ) ಒಪ್ಪಿಗೆ ನೀಡುತ್ತಿಲ್ಲ. (ಆಂಗ್ಲ ಭಾಷೆಯಲ್ಲಿ He ಎಂದು ಬಳಸಲಾಗಿದೆ. ಆದರೆ ಕನ್ನಡದಲ್ಲಿ ಅವನು ಎನ್ನುವುದು ಏಕವಚನವಾಗುವುದರಿಂದ ಅವರು ಎಂದು ಬಳಸಲಾಗಿದೆ.)

★ ಕೆಲವೊಂದು ಅತ್ಯಗತ್ಯವಾಗಿರುವ ಕಾಯ್ದೆಗಳನ್ನು ಜಾರಿಗೆ ತರಲು ಇಲ್ಲಿಯ ರಾಜ್ಯಗಳ ರಾಜ್ಯಪಾಲರುಗಳಿಗೆ ಅಧಿಕಾರವನ್ನು ನಿರಾಕರಿಸಲಾಗಿದೆ ಮತ್ತು ರಾಜನ ಒಪ್ಪಿಗೆ ಸಿಗುವವರೆಗೆ ಅವುಗಳನ್ನು ಜಾರಿಗೆ ತರಕೂಡದೆಂದು ತಡೆಯಾಜ್ಞೆ ನೀಡಲಾಗಿದೆ. ಆ ರೀತಿ ತಡೆಹಿಡಿದಿರುವುವನ್ನು ಯಾವುದೇ ರೀತಿ ಚಿಂತನೆ ಮಾಡದೆ ನಿರ್ಲಕ್ಷಿಸಲಾಗಿದೆ.

★ ಇನ್ನೂ ಅನೇಕ ಪ್ರಾಂತ್ಯಗಳ ಜನರ ಹಿತಾಸಕ್ತಿಗೆ ಅನುಗುಣವಾದ ಕಾನೂನು ಜಾರಿಗೆ ತರಲು ನಿರಾಕರಿಸಿರುವುದಲ್ಲದೆ, ಬ್ರಿಟನ್ನಿನ ಕ್ರೂರ ಆಳ್ವಿಕೆಗೆ ಬೆಂಬಲ ನೀಡುವಂತೆ ಆ ಜನರ ಮೇಲೆ ಒತ್ತಾಯ ತರಲಾಗುತ್ತಿದೆ.

★ ಪ್ರತಿನಿಧಿಗಳ ಸಭೆಯನ್ನು ಅನಾನುಕೂಲಕರವಾದ ಸ್ಥಳಗಳಲ್ಲಿ ಮತ್ತು ಚರ್ಚೆಗೆ ಅಗತ್ಯವಿರುವ ಸಾರ್ವಜನಿಕ ದಾಖಲೆಗಳು ಲಭ್ಯವಾಗದಿರುವಂತಹ ಜಾಗಗಳಲ್ಲಿ ಕರೆಯಲಾಗುತ್ತಿದೆ. ಇದರ ಉದ್ದೇಶ ರಾಜನ ಪರಿಕ್ರಮಗಳ ವಿರುದ್ಧ ಧ್ವನಿ ಎತ್ತುವವರನ್ನು ಹೆಚ್ಚಿನ ಶ್ರಮಕ್ಕೆ ಒಳಪಡಿಸುವುದೇ ಆಗಿದೆ.

★ ಮಾನವರ ಹಕ್ಕುಗಳ ಮೇಲೆ ದಾಳಿ ಮಾಡುವ ಎಷ್ಟೋ ಪ್ರಸಂಗಗಳನ್ನು ದೃಢವಾಗಿ ವಿರೋಧಿಸಿದ ಪ್ರತಿನಿಧಿಗಳ ಸದನವನ್ನು ದೊರೆಯು ಎಷ್ಟೋ ಬಾರಿ ವಿಸರ್ಜಿಸಿದ್ದಾರೆ.

★ ಅಂಥ ಅನೇಕ ವಿಸರ್ಜನೆಗಳ ನಂತರ, ಬಹುದೀರ್ಘಕಾಲದವರೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ದೊರೆಯು ನಿರಾಕರಿಸಿರುವುದರಿಂದ ಪ್ರತಿನಿಧಿಗಳು ಅನೇಕ ವಿನಾಶಗಳನ್ನು ತಡೆಗಟ್ಟಲು ಅಸಮರ್ಥರಾದುದರಿಂದ ರಾಜ್ಯಗಳು ಹೊರಗಿನಿಂದ ಆಗುವ ಅನೇಕ ಆಕ್ರಮಣಗಳನ್ನು, ಒಳಗೆ ಆಗುವ ಅನೇಕ ಹಿಂಸಾತ್ಮಕ ಗಲಭೆಗಳನ್ನು ತಡೆಗಟ್ಟಲು ಅಸಮರ್ಥವಾದುವು.

★ ದೊರೆಯು ಈ ರಾಜ್ಯಗಳಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸಲು ಪ್ರಯತ್ನ ಮಾಡುವುದೇ ಅಲ್ಲದೆ ವಿದೇಶಗಳಿಂದ ಬಂದು ನೆಲೆಸಿರುವವರಿಗೆ ನಾಗರಿಕತ್ವವನ್ನು ನೀಡಲು ನಿರಾಕರಿಸುತ್ತಿದ್ದಾರೆ. ಇಲ್ಲಿಗೆ ವಲಸೆಯ (migration) ಮೂಲಕ ಬರಬೇಕೆನ್ನುವವರಿಗೆ ನಿರುತ್ಸಾಹ ಉಂಟು ಮಾಡುತ್ತಿರುವುದೇ ಅಲ್ಲದೆ ಭೂಮಿಯನ್ನು ಹೊಂದಬೇಕೆನ್ನುವವರಿಗೆ ವಿಪರೀತ ನಿರ್ಬಂಧ ಹೇರುತ್ತಿದ್ದಾರೆ.

★ ನ್ಯಾಯಾಂಗದ ಶಕ್ತಿಯನ್ನು ನಿರ್ಬಂಧಗೊಳಿಸುತ್ತಿರುವುದೇ ಅಲ್ಲದೆ ಎಷ್ಟೋ ಕಾಯಿದೆಗಳಿಗೆ ದೊರೆಯು ಅನುಮತಿ ನೀಡುತ್ತಿಲ್ಲ.

★ ದೊರೆಯ ಇಚ್ಛೆಯಂತೆಯೇ ನ್ಯಾಯಾಧೀಶರ ಅಧಿಕಾರದ ಅವಧಿ. ಅವರ ವೇತನಗಳ ನಿರ್ಧಾರ ಆಗುತ್ತಲಿದೆ.

★ ದೊರೆಯು ಅನೇಕ ಹೊಸ ಕಾರ್ಯಾಲಯಗಳನ್ನು ಸ್ಥಾಪಿಸಿದ್ದು, ನಮ್ಮ ಜನರನ್ನು ನಿಯಂತ್ರಿಸಲು ಮತ್ತು ಅವರ ಸತ್ವವನ್ನು ಕಿತ್ತು ತಿನ್ನಲು ಅಧಿಕಾರಿಗಳ ಗುಂಪುಗಳನ್ನೇ ಕಳಿಸಿದ್ದಾರೆ.

★ ದೊರೆಯು ನಮ್ಮಗಳ ಮಧ್ಯೆ ಇಲ್ಲಿ ಸಂಪೂರ್ಣವಾಗಿ ಶಾಂತಿಯ ವಾತಾವರಣ ಇರುವಾಗ, ನಮ್ಮ ಶಾಸಕ ಪ್ರತಿನಿಧಿಗಳ ಒಪ್ಪಿಗೆ ಇಲ್ಲದೆ ಸೈನ್ಯದ ತುಕಡಿಯನ್ನು ಸನ್ನದ್ಧವಾಗಿ ಇಟ್ಟಿದ್ದಾರೆ.

★ ನಾಗರಿಕ ಶಕ್ತಿಗೆ ಮಿಗಿಲಾಗಿ ಸೈನ್ಯದ ಸ್ವಾತಂತ್ರ್ಯವನ್ನು ಪ್ರಚೋದಿಸುತ್ತಿದ್ದಾರೆ.

★ ನಮ್ಮ ಇಲ್ಲಿಯ ಸಂವಿಧಾನಕ್ಕೆ ಹೊರತಾಗಿರುವ ಮತ್ತು ನಮ್ಮ ಕಾನೂನು ಮನ್ನಿಸದೆ ಇರುವ ಇನ್ನಿತರರ ಕಾನೂನುಗಳನ್ನು ಜಾರಿಗೆ ತಂದು ತೋರಿಕೆಯ ಶಾಸನಗಳನ್ನು ದೊರೆಯು ಜಾರಿಗೊಳಿಸುತ್ತಿದ್ದಾರೆ.

★ ನಮ್ಮ ಮಧ್ಯೆ ಬಹುದೊಡ್ಡ ಸೈನ್ಯದ ತುಕಡಿಗಳನ್ನು ನಿಯೋಜಿಸುತ್ತಿದ್ದಾರೆ, ಮಾತ್ರವಲ್ಲ ಇಲ್ಲಿಯ ರಾಜ್ಯಗಳ ನಿವಾಸಿಗಳ ಮೇಲೆ ಸೈನ್ಯಾಧಿಕಾರಿಗಳಿಂದ ದೌರ್ಜನ್ಯ, ಕೊಲೆಗಳು ನಡೆದಾಗ ವಿಚಾರಣೆಯ ನಾಟಕವಾಡಿ ಆ ಅಧಿಕಾರಿಗಳನ್ನು ರಕ್ಷಿಸಲಾಗುತ್ತಿದೆ.

★ ಜಗತ್ತಿನ ಇನ್ನಿತರ ಭಾಗಗಳಿಂದ ನಮ್ಮ ವ್ಯಾಪಾರ, ವಾಣಿಜ್ಯ ಸಂಬಂಧಗಳನ್ನು ಕಡಿತಗೊಳಿಸಲಾಗುತ್ತಿದೆ.

★ ನಮ್ಮಗಳ ಒಪ್ಪಿಗೆಯೇ ಇಲ್ಲದೆ ತೆರಿಗೆಗಳನ್ನು ಮನಸ್ವೇಚ್ಛೆಯಾಗಿ ಹೇರಲಾಗುತ್ತಿದೆ.

★ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಒಳಪಡುವ ಸೌಲಭ್ಯವನ್ನೇ ಎಷ್ಟೋ ಸಂದರ್ಭಗಳಲ್ಲಿ ನಮಗೆ ನಿರಾಕರಿಸಲಾಗುತ್ತಿದೆ. ತೋರಿಕೆಯ ಅಪರಾಧಗಳನ್ನು ಹೊರಿಸಿ ನಮ್ಮಗಳನ್ನು ಸಮುದ್ರದಾಚೆಗೆ ಅಟ್ಟುವ ಶಿಕ್ಷೆ ವಿಧಿಸಲಾಗುತ್ತಿದೆ.

★ ನಮ್ಮ ನೆರೆಯ ಕೆಲವು ಪ್ರದೇಶಗಳಲ್ಲಿ ಆಂಗ್ಲರ ಸ್ವತಂತ್ರ ಮನೋಭಾವದ ಕಾನೂನನ್ನು ನಿಷೇಧಿಸಿ, ಮನಸ್ವೇಚ್ಛೆಯ ದಮನಕಾರಕ ಸರ್ಕಾರವನ್ನು ಸ್ಥಾಪಿಸಲಾಗಿದೆಯಲ್ಲದೆ ಅದರ ಗಡಿಗಳನ್ನು ವಿಸ್ತರಿಸುವ ಸೂಚನೆ ಕಾಣಬರುತ್ತಿದೆ. ಮತ್ತು ಈ ಎಲ್ಲ(ನಮ್ಮ) ವಸಾಹತುಗಳಲ್ಲಿ ಸ್ಥಾಪಿಸುವುದಕ್ಕೆ ಮುನ್ಸೂಚನೆಯಾಗಿ ತೋರಿ ಬರುತ್ತಿದೆ.

★ ನಮ್ಮ ಅನೇಕ ಹಕ್ಕು ಮತ್ತು ಸೌಲಭ್ಯ (Charter)ಗಳನ್ನು ಹಿಂತೆಗೆದುಕೊಂಡು ಅಮೂಲ್ಯವಾದ ಕಾನೂನುಗಳನ್ನು ರದ್ದುಪಡಿಸಿ, ನಮ್ಮ ಸರ್ಕಾರಗಳ ಮೂಲ ಸ್ವರೂಪವನ್ನೇ ಬದಲಿಸುವಂತೆ ತೋರುತ್ತಿದೆ.

★ ನಮ್ಮ ಶಾಸನಾಧಿಕಾರವನ್ನು ನಿಷೇಧಿಸಿ, ಅವರಿಗೇ (ಬ್ರಿಟನ್ ದೊರೆ ಮತ್ತು ಶಾಸನಸಭೆ)

ನಮ್ಮ ಪರವಾಗಿ ಎಲ್ಲ ಪ್ರಸಂಗಗಳಲ್ಲೂ ಶಾಸನ ಮಾಡುವ ಹಕ್ಕಿರುವಂತೆ ಘೋಷಿಸುವ ಸೂಚನೆ ಕಾಣಬರುತ್ತಿದೆ.

★ ಅವರು (ಬ್ರಿಟನ್ ದೊರೆ) ಇಲ್ಲಿಯ ಸರ್ಕಾರವನ್ನು ವಿಸರ್ಜಿಸಿ, ಅವರ ರಕ್ಷಣೆಯಿಂದ ಹೊರಗಿಟ್ಟಂತೆ ಮಾಡಿ, ನಮ್ಮ ವಿರುದ್ಧ ಯುದ್ಧ ಸಾರುವಂತೆ ಕಾಣುತ್ತಿದೆ.

★ ಅವರು ನಮ್ಮ ಸಮುದ್ರಗಳನ್ನು ಕೊಳ್ಳೆ ಹೊಡೆಯುತ್ತ, ನಮ್ಮ ಕರಾವಳಿಗಳನ್ನು ನಾಶ ಮಾಡುತ್ತ, ಊರುಗಳನ್ನು ಸುಟ್ಟು, ನಮ್ಮ ಜನರ ಜೀವಗಳನ್ನು ನಾಶಮಾಡುತ್ತಿದ್ದಾರೆ.

★ ಬ್ರಿಟನ್ ದೊರೆಯು ಈ ಸಮಯದಲ್ಲಿ ವಿದೇಶಗಳಿಂದೆಲ್ಲ ಬೃಹತ್ ಸೈನ್ಯಗಳನ್ನು ಜಮಾಯಿಸುತ್ತಿದ್ದು ಮತ್ತಷ್ಟು ಕ್ರೂರವಾದ, ಅತ್ಯಂತ ಅನಾಗರಿಕವಾದ ನಾಗರಿಕ ರಾಷ್ಟ್ರಕ್ಕೆ ಸಲ್ಲದ ಹಿಂಸೆಯನ್ನು ಪ್ರಚೋದಿಸುತ್ತಿದ್ದಾರೆ.

★ ನಮ್ಮದೇ ದೇಶದ ಗಣ್ಯರನ್ನು ಬಂಧಿಸಿ ತಮ್ಮ ದೇಶ, ತಮ್ಮ ಮಿತ್ರರ ವಿರುದ್ಧ ದೌರ್ಜನ್ಯ ಮಾಡುವಂತೆ ಪ್ರಚೋದಿಸಲಾಗುತ್ತಿದೆ, ಒತ್ತಾಯಿಸಲಾಗುತ್ತಿದೆ.

★ ನಮ್ಮ ದೇಶದವರಲ್ಲೇ ಪರಸ್ಪರರನ್ನು ಉದ್ರೇಕಿಸಿ ಆಂತರಿಕ ಘರ್ಷಣೆಗಳನ್ನು ಉಂಟುಮಾಡಲಾಗುತ್ತಿದೆ. ಅತ್ಯಂತ ಕ್ರೂರ ಮನೋಭಾವದ ಆದಿವಾಸಿಗಳಾದ ಇಂಡಿಯನ್ನರನ್ನು (Red Indians) ಪ್ರಚೋದಿಸಿ ಅವರ ಆಸುರೀ ವರ್ತನೆಗಳನ್ನು ನಮ್ಮ ವಿನಾಶಕ್ಕೆ ಬಳಸಿ ಕೊಳ್ಳಲಾಗುತ್ತಿದೆ.

ಈ ಎಲ್ಲ ದೌರ್ಜನ್ಯ-ದಮನಗಳ ಹಿನ್ನೆಲೆಯಲ್ಲಿ ಅತ್ಯಂತ ವಿನೀತರಾಗಿ ನಾವು ಬೇಡಿಕೆಗಳನ್ನು ಸಲ್ಲಿಸಿ, ಪರಿಹಾರ ನೀಡಬೇಕೆಂದು ಕೋರಿಕೊಂಡರೆ ಅದಕ್ಕೆ ಪ್ರತಿಯಾಗಿ ಹಿಂಸೆಯನ್ನೇ ಪುನರಾವರ್ತನೆಗೊಳಿಸಲಾಯಿತು. ಓರ್ವ ರಾಜಕುಮಾರನು ಈ ಎಲ್ಲ ಲಕ್ಷಣಗಳಿಂದ ವರ್ತಿಸಿದಾಗ ಆತನನ್ನು ಕ್ರೂರಿಯು, ಆಡಳಿತಕ್ಕೆ ಅನರ್ಹನು, ಸ್ವತಂತ್ರ ಪ್ರಜ್ಞೆಯ ನಾಗರಿಕರನ್ನು ಆಳಲು ಅಸಮರ್ಥನು ಎಂದು ಭಾವಿಸಬೇಕಾಗುತ್ತದೆ.

ಈಗ ನಾವು ನಮ್ಮ ಬ್ರಿಟಿಷ್ ಸೋದರರನ್ನು ಇತ್ತ ಗಮನ ಹರಿಸಲು ಎಚ್ಚರಿಸುತ್ತಿದ್ದೇವೆ. ನಾವು ಕಾಲಕಾಲಕ್ಕೆ ಆಗಿಂದಾಗ್ಗ ಅವರ ಅಧಿಕಾರ ವ್ಯಾಪ್ತಿಯ ಬಗ್ಗೆ ಎಚ್ಚರಿಸುತ್ತಲೇ ಬಂದಿದ್ದೇವೆ. ನಾವು ವಲಸೆ ಬಂದು ಇಲ್ಲಿ ನೆಲೆಸಲಾದ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಎಚ್ಚರಿಸಿದ್ದೇವೆ. ಅವರೊಡನೆ ನಮಗೆ ಭ್ರಾತೃಪ್ರೇಮವು ಇರುವುದಾದರೂ, ಅವರ ನ್ಯಾಯಕ್ಕೆ ಗೌರವವನ್ನು ಕೊಡುತ್ತೇವಾದರೂ ಅವರ ವ್ಯಾಪ್ತಿಗೆ ಮೀರಿದ ಆಕ್ರಮಣವು ನಮ್ಮೊಂದಿಗಿನ ಸಂಬಂಧ ಮತ್ತು ವ್ಯವಹಾರವನ್ನು ಅಡ್ಡಿಪಡಿಸುತ್ತದೆಂದು ಹೇಳಬಯಸುತ್ತೇವೆ. ನಮ್ಮ ನ್ಯಾಯಯುತ ಧ್ವನಿಗೆ ಅವರು ಕಿವುಡರಾಗಿಯೇ ವರ್ತಿಸಿದ್ದಾರೆ. ಆದ್ದರಿಂದ ಈಗ ಅವರಿಂದ ಬೇರ್ಪಡುವ ಅವಶ್ಯಕತೆ ಒದಗಿಬಂದಿದ್ದು ಮತ್ತು ಅವರೊಂದಿಗಿನ ಸಂಬಂಧ ಉಳಿದೆಲ್ಲ ಮಾನವ ಕುಲದೊಡನೆ ಇರುವ ಸಂಬಂಧವಂತೆ ಯುದ್ಧದಲ್ಲಿ ಶತ್ರುಗಳಾಗಿ, ಶಾಂತಿಯಲ್ಲಿ ಮಿತ್ರರಾಗಿ ಇರುವಂತಹ ಸಂಬಂಧವಾಗುತ್ತಿದೆ.

ಆದ್ದರಿಂದ, ನಾವು ಅಮೆರಿಕಾದ ಸಂಯುಕ್ತ ಸಂಸ್ಥಾನದ ಪ್ರಜಾಪ್ರತಿನಿಧಿಗಳು ಇಲ್ಲಿ ಸಮಾವೇಶವಾಗಿದ್ದು, ಜಗತ್ತಿನ ಸರ್ವೋನ್ನತ ನ್ಯಾಯಾಧೀಶನ (ದೇವರ?) ಮುಂದೆ ನಮ್ಮ ಉದ್ದೇಶವನ್ನು ಈ ವಸಾಹತುಗಳ ಉತ್ತಮ ನಾಗರಿಕರ ಹೆಸರು ಮತ್ತು ಅಧಿಕಾರದ ನೆರವಿನಿಂದ ಪ್ರಕಟಿಸಿ ಘೋಷಿಸುವುದೇನೆಂದರೆ:

"ಈ ಸಂಯುಕ್ತ ವಸಾಹತುಗಳು ತಮ್ಮ ಸ್ವಯಂ ಸಿದ್ಧ ಹಕ್ಕಿನಿಂದ ಬಂಧನ ಮುಕ್ತ ಮತ್ತು ಸ್ವತಂತ್ರ ರಾಜ್ಯಗಳೆಂದು, ಬ್ರಿಟಿಷ್ ರಾಜಾಡಳಿತದ ಹಂಗು ಮತ್ತು ವಿಧೇಯತೆಯಿಂದ ಮುಕ್ತವಾಗಿವೆಯೆಂದು ಮತ್ತು ಬ್ರಿಟನ್ನಿನ ರಾಜ್ಯಾಂಗದೊಡನೆ ಎಲ್ಲ ರೀತಿಯ ರಾಜಕೀಯ ಸಂಬಂಧಗಳನ್ನು ಕಡಿದುಕೊಂಡಿವೆಯೆಂದು ಮತ್ತು ಬಂಧನ ಮುಕ್ತ ಮತ್ತು ಸ್ವತಂತ್ರ ರಾಜ್ಯಗಳಾಗಿ ಅವುಗಳಿಗೆ ಯುದ್ಧವನ್ನು ಘೋಷಿಸಿ ಶಾಂತಿಯನ್ನು ಸ್ಥಾಪಿಸುವ, (ಇನ್ನಿತರ ರಾಷ್ಟ್ರಗಳೊಡನೆ) ಹೊಂದಾಣಿಕೆ ಮಾಡಿಕೊಳ್ಳುವ, ವ್ಯಾಪಾರ-ವ್ಯವಹಾರ ಸಂಬಂಧಗಳನ್ನು ಕುದುರಿಸಿಕೊಳ್ಳುವ ಮತ್ತು ಸ್ವತಂತ್ರ ರಾಷ್ಟ್ರಗಳು ನಿರ್ವಹಿಸುವ ಎಲ್ಲ ಕಾರ್ಯಗಳನ್ನು ಮಾಡುವವೆಂದು ಘೋಷಿಸುತ್ತೇವೆ. ಈ ಘೋಷಣೆಯನ್ನು ಬಲಪಡಿಸಲು ದೈವೀ ನಂಬುಗೆಯ ಆಧಾರವನ್ನು ಸ್ವೀಕರಿಸಿ, ನಾವು ಪರಸ್ಪರರು ನಮ್ಮ ಜೀವಗಳನ್ನು, ನಮ್ಮ ಸಂಪತ್ತನ್ನು ಮತ್ತು ನಮ್ಮ ಪವಿತ್ರ ಗೌರವವನ್ನು ಮೀಸಲಿಡುತ್ತೇವೆಂದು ದೃಢಪಡಿಸುತ್ತೇವೆ.

ಈ ಘೋಷಣೆಗೆ ಕಾಂಗ್ರೆಸ್ ಅಧ್ಯಕ್ಷರಾದ ಜಾನ್ ಹ್ಯಾನ್‌ಕಾಕ್ ಅವರು ಸಹಿ ಮಾಡಿದ್ದಾರೆ ಮತ್ತು ಕಾರ್ಯದರ್ಶಿ ಚಾರ್ಲ್ಸ್ ಥಾಮ್‌ಸನ್ ಅನುಮೋದಿಸಿದ್ದಾರೆ."

(ಜುಲೈ 4, 1776 ರಂದು ಈ ಘೋಷಣಾ ಪತ್ರದ 200 ಪತ್ರಿಗಳನ್ನು ಫಿಲಿಡೆಲ್ಫಿಯಾದಲ್ಲಿ ಮುದ್ರಿಸಲಾಗಿತ್ತು.)

ಅಮೆರಿಕನ್ನರಲ್ಲಿ ಅಪಾರವಾದ ರಾಷ್ಟ್ರಾಭಿಮಾನವಿದೆ. 2002ರ ಸೆಪ್ಟಂಬರ್ 11 ಅವರಿಗೆ ಮರೆಯಲಾಗದ ದುರ್ಘಟನಾ ದಿನ. ವಿಶ್ವ ವಾಣಿಜ್ಯ ಸಂಸ್ಥೆಯ ಗೋಪುರವನ್ನು ಭಯೋತ್ಪಾದಕರು ಕೆಡವಿದಾಗ ಮರುದಿನ ಕ್ಯಾಂಡಲ್ ಹಚ್ಚಿ ಮೃತಾತ್ಮರಿಗೆ ಶಾಂತಿಯನ್ನು ಕೋರಬೇಕೆಂದು ಅಮೆರಿಕಾ ಅಧ್ಯಕ್ಷ ಬುಷ್ ಕರೆಕೊಟ್ಟಾಗ, ಆ ಕ್ಲುಪ್ತ ಸಮಯದಲ್ಲಿ ಪ್ರತಿಯೊಬ್ಬರೂ ತಾವಿರುವ ಜಾಗದಲ್ಲಿ ಕ್ಯಾಂಡಲ್ ಹಚ್ಚಿ ಮೌನಾಚರಣೆ ಮಾಡಿದುದು ಮತ್ತು ಕೆಲವು ಬೃಹತ್ ಮೈದಾನದಲ್ಲಿ ಲಕ್ಷಾಂತರ ಜನ ಸೇರಿ ಕ್ಯಾಂಡಲ್ ಹಚ್ಚಿ ಮೌನವನ್ನು ಆಚರಿಸಿದ್ದು ರೋಚಕವಾಗಿತ್ತು ಮತ್ತು ಆ ಗಳಿಗೆಯಲ್ಲಿ ಇಡೀ ಅಮೆರಿಕಾ ಸ್ತಬ್ಧವಾಗಿತ್ತು ಎಂದು ಯೋಗೀಶ್ವರಿ ಹೇಳಿದುದು ಎಂಥಾ ಜಾಗೃತ ಪ್ರಜೆಗಳು ಇವರು ಎಂದು ನನಗೆ ಉದ್ಗಾರ ತೆಗೆಯುವಂತಾಯಿತು.

ಭಯೋತ್ಪಾದನೆಯ ಕೃತ್ಯಗಳಿಗೆ ಮತ್ತೆ ಅವಕಾಶ ಸಿಗದಂತೆ ಇಲ್ಲಿ ಧಾರ್ಮಿಕ ಗುಂಪುಗಳಿಗೆ ಸ್ವಾತಂತ್ರ್ಯ ನೀಡಲಾಗಿದೆ. ನಮ್ಮ ದೇಶದ ರಾಜಕಾರಣಿಗಳಲ್ಲಿ ಅಂಥ ದೇಶನಿಷ್ಠೆ ಇಲ್ಲದಿರುವುದರಿಂದ, ಅಧಿಕಾರದಾಹದಿಂದ ವೋಟ್ ಬ್ಯಾಂಕ್ ಆಗಿರುವ ಜನರ ಮೇಲೆ ಕಣ್ಣಿಟ್ಟುಕೊಂಡು ನಮ್ಮ ರಾಜಕಾರಣಿಗಳು, ಪಕ್ಷಗಳು ವರ್ತಿಸುತ್ತವೆ. " ಹಾವಿನ ಬಾಯೊಳಗಿರುವ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ " ದೇಶವು ಸಂಕಷ್ಟ ಮತ್ತು ಇಳಿಜಾರಿನ ಹಂತದಲ್ಲಿರುವಾಗ ತಮ್ಮ ಅಧಿಕಾರ ಬಲಪಡಿಸಿಕೊಳ್ಳಲು ಮತ್ತು ವೈಯಕ್ತಿಕ ಆಸ್ತಿ ಗಳಿಸಲು, ಬೆಳೆಸಲು ರಾಜಕಾರಣಿಗಳು, ಪಕ್ಷಗಳು ಹಪಾಹಪಿ ಮಾಡುವುದನ್ನು ಕಾಣುತ್ತೇವೆ.

ಭಯೋತ್ಪಾದಕರು ಜಾಗತಿಕ ವಾಣಿಜ್ಯ ಗೋಪುರವನ್ನು ವಿಮಾನ ನುಗ್ಗಿಸಿ ಕೆಡವಿದರು. ಇನ್ನೊಂದು ಅಪಹೃತ ವಿಮಾನ ವಾಷಿಂಗ್ಟನ್‌ನ ಶ್ವೇತ ಭವನದ ಕಡೆಗೆ ಸಾಗುತ್ತಿತ್ತಂತೆ. ಅಷ್ಟರಲ್ಲಿ ವಿಮಾನದಲ್ಲಿ ಸೆಲ್ ಫೋನ್ ಹೊಂದಿದ್ದವರನ್ನು ಮನೆಯ ಜನರು ಸಂಪರ್ಕಿಸಿ, ವಿಷಯ ತಿಳಿಸಿದಾಗ ಆ ಜನರು ರಾಷ್ಟ್ರ ಪ್ರೇಮಿಗಳಾಗಿ ವಿಮಾನ ತಾಡನಕ್ಕೆ ಅವಕಾಶ ಕೊಡಲಿಕ್ಕಿಲ್ಲ ಎಂದು ಕೆಲವರು ಚರ್ಚಿಸುತ್ತಿದ್ದರಂತೆ.

ಹಾಗೆಯೇ ಆಯಿತು. ತಾವಂತೂ ಸಾಯುವುದು ಖಚಿತ. ಇನ್ನು ಶ್ವೇತ ಭವನ ಮತ್ತು ಮುಖ್ಯವಾದ ಮಿಲಿಟರಿ ನೆಲೆ ನಾಶವಾಗದಿರಲಿ ಎಂದು ವಿಮಾನ ಪ್ರಯಾಣಿಕರು, ಭಯೋತ್ಪಾದಕರೊಡನೆ ಘರ್ಷಣೆಗಿಳಿದು ವಿಮಾನವು ಬೇರೊಂದು ಜಾಗದಲ್ಲಿ ಬೀಳುವಂತೆ ಮಾಡಿದರು. ಇದು ಸಾಮೂಹಿಕ ರಾಷ್ಟ್ರಪ್ರೇಮಕ್ಕೆ ಸಾಕ್ಷಿ.

ಈ ಭಯಂಕರ ಘಟನೆಯ ನಂತರ ಅಮೆರಿಕನ್ನರು ದೇವರನ್ನು ಮರೆತು, ಚರ್ಚಿನ ಬಗ್ಗೆ ಉದಾಸೀನತೆ ತಾಳಿದ ಕಾರಣದಿಂದಲೇ ತಮಗೆ ಇಂತಹ ದುರ್ಗತಿ ಬಂದಿದೆ ಎಂದು ಭಾವಿಸಿದ್ದರಿಂದ ಚರ್ಚ್‌ಗೆ ಬರುವವರ ಸಂಖ್ಯೆ ವೃದ್ಧಿಯಾಗಿದೆಯಂತೆ.

ಅಮೆರಿಕಾದ ವಾರ್ತಾ ಪತ್ರಿಕೆಗಳು

ನಮ್ಮ ಆತಿಥೇಯರಾದ ಯೋಗೀಶ್ವರಿಯವರು ವಾರ್ತಾ ಪತ್ರಿಕೆಗಳನ್ನು ಓದಲು ಹೋಗುವುದಿಲ್ಲವಾದ್ದರಿಂದ ಮನೆಗೆ ಪತ್ರಿಕೆ ತರಿಸುವುದಿಲ್ಲ. ಏಕೆಂದರೆ ಇಂದಿನ ಪತ್ರಿಕೆಗಳಲ್ಲಿ ಪ್ರಮುಖವಾಗಿ ಕಾಣಿಸುವ ವಿಷಯ ಯುದ್ಧ, ಅಶಾಂತಿ, ಭಯೋತ್ಪಾದನೆ, ಕೊಲೆ, ಸುಲಿಗೆ, ಅತ್ಯಾಚಾರ ಇವೇ ತುಂಬಿರುತ್ತವೆ. ಅಧ್ಯಾತ್ಮ ಜೀವಿಯಾದ ಅವರು ಹೊರಗಿನ ಕಸವನ್ನು ಮನಸ್ಸಿನೊಳಕ್ಕೆ ಏಕೆ ತುಂಬಿಕೊಳ್ಳಬೇಕು ಎಂಬ ಸಿದ್ಧಾಂತದವರು. ಆದರೆ " ಬಿಟ್ಟೆನೆಂದರೆ ಬಿಡದೀ ಮಾಯೆ, ಬಿಡದಿದ್ದರೆ ಬೆಂಬತ್ತಿ ಕಾಡಿತ್ತು ಮಾಯೆ " ಎಂಬಂತೆ ಒಂದು ಗುಲಾಬಿ ಬಣ್ಣದ ಪ್ಲಾಸ್ಟಿಕ್ ಕವರ್‌ದಲ್ಲಿದ್ದ ಏನೋ ವಸ್ತು ಜುಲೈ ನಾಲ್ಕರಂದು ನನಗೆ ಕಿಟಕಿಯ ಮೂಲಕ ಕಾಣಿಸಿತು. ಕೆಲಸದಿಂದ ಅವರು ತಿರುಗಿ ಬರುವವರೆಗೆ ಮುಟ್ಟಲು ಹೋಗಲಿಲ್ಲ. ಬೇರೆಯವರ ಮನೆಯ ಮುಂಭಾಗದಲ್ಲಿಯೂ ಅದೇ ರೀತಿ ಬಿದ್ದಿದ್ದರಿಂದ ಸಮಾಧಾನ ಇತ್ತು. ಬಂದ ತಕ್ಷಣ ಕೇಳಿದಾಗ ಅದು ಒಂದು ವಾರ್ತಾ ಪತ್ರಿಕೆ ಎಂದರು. ಅಬ್ಬಬ್ಬಾ ಅದರ ಗಾತ್ರ ಎಷ್ಟಿರಬಹುದು. 12 ಪುಟ, 24 ಪುಟ ಇರಬಹುದೆ? ನಾನು ಪಟ್ಟಾಗಿ ಕುಳಿತು ಲೆಕ್ಕ ಮಾಡಿದೆ. ಒಟ್ಟು 218 ಪುಟಗಳು. ಬೆಲೆ 1 ಡಾಲರ್ 50 ಸೆಂಟ್ಸ್. ಎಲ್ಲ ಭಾರತೀಯರಂತೆ ನೀವು ಡಾಲರ್‌ಗೆ, ಎಷ್ಟು ರೂಪಾಯಿ ಎಂದು ಲೆಕ್ಕ ಮಾಡಲು ತೊಡಗಿ ಅಂದಾಜು ರೂ. 72 ಎಂದುಕೊಳ್ಳುವಿರಿ. ಇಲ್ಲಿ ಅವರಿಗೆ ಬಹಳ ಕಮ್ಮಿ. ನಮಗೆ ಒಂದೂವರೆ ರೂಪಾಯಿ ಇದ್ದಂತೆ.

World and Nation	A ವಿಭಾಗ	20 ಪುಟ
ಭಾನುವಾರದ ವಿಶೇಷ ಪುರವಣಿ	A 21	4 ಪುಟ
ಪೆರೇಡ್ ವಿಭಾಗ		24 ಪುಟ
ಮೆಟ್ರೊ ಮತ್ತು ಸ್ಟೇಟ್	B	8 ಪುಟ
ಸ್ಪೋರ್ಟ್ಸ್	C	12 ಪುಟ
ಜಾಹಿರಾತು ಸಂಪುಟ		8 ಪುಟ
ಪ್ರವಾಸ	D	40 ಪುಟ
ಒಳನೋಟ	E	4 ಪುಟ
ಉದ್ಯೋಗ ಮಾರ್ಗದರ್ಶಿ	F	10 ಪುಟ
ವರ್ಗೀಕೃತ ಜಾಹಿರಾತು	G	14 ಪುಟ

ಹೋಮ್ಸ್	H	14 ಪುಟ
ಇದಕ್ಕೆ ಪುರವಣಿ	I	36 ಪುಟ
ವ್ಯಾಪಾರ-ವಾಣಿಜ್ಯ	J	8 ಪುಟ
ಜೀವನ ಮತ್ತು ಕಲೆ	K	16 ಪುಟ
	ಒಟ್ಟು	218 ಪುಟ

ಬೆಲೆ ಅವರ ದೃಷ್ಟಿಯಲ್ಲಿ ತುಂಬಾ ಕಮ್ಮಿ. ಜೊತೆಗೆ ಇದು ಉಚಿತ ಪ್ರತಿ. ಒಂದು ಜಾಹಿರಾತು ಕಂಪೆನಿ ಅಥವಾ ಕೆಲವೊಮ್ಮೆ ಪತ್ರಿಕೆಯವರೇ ಪ್ರಚಾರಕ್ಕಾಗಿ ಉಚಿತ ಪ್ರತಿ ಕೊಡುವುದುಂಟು. ಅದರ ಮೇಲೆ ಒಂದು ಪ್ಲಾಸ್ಟಿಕ್ ಚೀಲ; ಮನೆಯ ಮುಂದೆ ಎಸೆಯುವುದರಿಂದ ಮಳೆ ಬಂದರೆ ಅಥವಾ ಮನೆಯ ಮುಂದಿನ ಹುಲ್ಲು ಹಾಸಿಗೆ ಆಟೋಮ್ಯಾಟಿಕ್ ಸ್ವಯಂಚಾಲಿತ ಸ್ಪ್ರಿಂಕ್ಲರ್ ಚಾಲೂ ಆದರೆ ಪತ್ರಿಕೆ ತೊಯ್ಯಬಾರದೆಂದು ಈ ಚೀಲದ ವ್ಯವಸ್ಥೆ. ಕೆಲವರು ಈ ಪತ್ರಿಕೆಗಳನ್ನು ತೆಗೆದೂ ಸಹ ನೋಡದೆ ಕಸದ ಬುಟ್ಟಿಗೆ ಎಸೆಯುವರು. ಹಿಂದೆ 1981ರಲ್ಲಿ ನಾನು ಬಂದಾಗ ಭಾರತೀಯರು ವೃತ್ತ ಪತ್ರಿಕೆಗಳನ್ನು ಸಂಗ್ರಹಿಸುವ "ಚೀಪ್" ಮೆಂಟಾಲಿಟಿ ಬಗ್ಗೆ ಹಲವಾರು ಜೋಕ್ಸ್ ಓದಿದ್ದೆ, ಕೇಳಿದ್ದೆ. ಆದರೆ ಈಗ ಅಮೆರಿಕನ್ನರಿಗೆ ಬುದ್ಧಿ ಭೇಟಿಯಾಗಿದೆ. ಪೇಪರ್ ತಯಾರಾಗಲು ಎಷ್ಟು ಕಾಡುಗಳು ನಾಶವಾಗುತ್ತವೆ ಎಂಬುದನ್ನು ಅರಿತು ಅವರೂ ಎತ್ತಿಟ್ಟು ಪುನಃ ರೀಸೈಕ್ಲಿಂಗೆ ಕಳಿಸುತ್ತಿದ್ದಾರೆ. ಈಗ ಹಳೆಯ ಪೇಪರ್ ಮತ್ತು ಪುನರ್ ಬಳಕೆಗೆ ಸಿದ್ಧಪಡಿಸಬಹುದಾದ ಪ್ಲಾಸ್ಟಿಕ್ ಚೀಲಗಳನ್ನು ಚೀನಾಕ್ಕೆ ಕಳಿಸುತ್ತಾರೆ. ಅಲ್ಲಿಂದ ಹೊಸ ರೂಪ ಪಡೆದು ವಸ್ತುಗಳು ಇಲ್ಲಿಗೆ ಬರುತ್ತವೆ. ಈಗಂತೂ ಚೀನಾದ ವಸ್ತುಗಳು ವಿಪುಲ ಸಂಖ್ಯೆಯಲ್ಲಿ ಇಲ್ಲಿ ಮಾರಾಟವಾಗುತ್ತವೆ.

ಕಸ ತುಂಬಲು ಬರುವ ಗಾಡಿಗಳಲ್ಲಿ 3 ಪ್ರಕಾರ ಇವೆ. ಒಂದು ಅಡಿಗೆ ಮುಸುರೆ, ಪುನರ್ ಬಳಕೆ ಮಾಡಲಾಗದ ವಸ್ತುವನ್ನು ಒಯ್ದರೆ, ಇನ್ನೊಂದು ಪುನರ್ ಬಳಕೆಗೆ ತಯಾರು ಮಾಡಬಹುದಾದ ವಸ್ತುಗಳನ್ನು ಒಯ್ಯುತ್ತದೆ. ಮತ್ತೊಂದು ಹುಲ್ಲು, ಗಿಡಗಂಟೆ ಕತ್ತರಿಸಿದಾಗ ಬರುವ ಕೊಂಬೆ-ರೆಂಬೆ ಒಣಗಿದ ಎಲೆ ಒಯ್ಯುತ್ತದೆ. ಜನರು ವರ್ಗೀಕರಿಸಿ 3 ಪ್ರತ್ಯೇಕ ಡಬ್ಬಿ, ಬುಟ್ಟಿಗಳಲ್ಲಿ, ಹುಲ್ಲನ್ನು ಚೀಲದಲ್ಲಿ ಹಾಕಿಟ್ಟರೆ ಆಯಾಗಾಡಿ ಬಂದು ಆಯಾ ಕಸಗಳನ್ನು ಒಯ್ಯುತ್ತವೆ. ರಸ್ತೆಯಲ್ಲಿ ಕಸಕಡ್ಡಿ, ಧೂಳು, ಪ್ಲಾಸ್ಟಿಕ್ ಹಾಳೆ, ಕಾಗದದ ತುಂಡು ಏನೂ ಇರದು.

ಅಮೆರಿಕಾದ ವಾಣಿಜ್ಯ-ವ್ಯಾಪಾರ ಜಗತ್ತು ಜಾಹಿರಾತಿಗಾಗಿ ಸಿಕ್ಕಾಪಟ್ಟೆ ಖರ್ಚು ಮಾಡುತ್ತದೆ. ಉಚಿತ ಪ್ರಚಾರ ಪತ್ರಿಕೆ ಸಿಗುವುದರಿಂದಲೋ ಏನೋ ಭಾರತೀಯರು ಪುಸ್ತಕ, ಪ್ರಚಾರ ಪತ್ರಿಕೆಗಳನ್ನು (flyers) ಕೊಟ್ಟರೆ ಸರಸರನೆ ಪಡೆದುಕೊಳ್ಳುವರು. ಮುದ್ರಿತ ಪುಸ್ತಕಗಳನ್ನು ಕೊಂಡು ಓದುವುದಿರಲಿ, ಕಣ್ಣೆತ್ತಿಯೂ ನೋಡುವ ಕುತೂಹಲಿಗಳಲ್ಲ. ಅಮೆರಿಕಾ ಜೀವನ ಶೈಲಿಯ ಅನೇಕ ದೌರ್ಬಲ್ಯಗಳನ್ನು ಬಹಳ ಜನ ಭಾರತೀಯರು ಬಹಳ ವ್ಯವಸ್ಥಿತವಾಗಿ ಆಧುನಿಕತೆಯ ಸೋಗಿನಲ್ಲಿ ಅಳವಡಿಸಿಕೊಂಡಿದ್ದಾರೆ. ಆದರೆ ಅವರಲ್ಲೂ ಇರುವ ಕೆಲವು ಒಳ್ಳೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಮರೆತಿರುವುದು ನಿಜಕ್ಕೂ ಭಾರತೀಯ ಸಂಸ್ಕೃತಿಯ ದೌರ್ಭಾಗ್ಯದ ಸಂಗತಿ. ಇವರ ಅಧ್ಯಯನ ಪ್ರವೃತ್ತಿ ನೋಡಿದ ಮೇಲೆ ಅಲ್ಲಿಯ ನಮ್ಮ ಜನರೇ ಎಷ್ಟೋ ವಾಸಿ ಎನ್ನಿಸಿತು.

"Indians are neither forward nor backward but they are awkward " ಎಂಬುದು ನಾನು ವಿದ್ಯಾರ್ಥಿ ಜೀವನದಲ್ಲಿದ್ದಾಗ ಓರ್ವ ಭಾರತೀಯ ಸಂಸ್ಕೃತಿಯ ಅಭಿಮಾನಿಗಳಾಗಿದ್ದ ಇಂಗ್ಲೀಷ್ ಪ್ರಾಧ್ಯಾಪಕರು ಹೇಳಿದ್ದ ಮಾತು. ಇದನ್ನು ನಮ್ಮ ಭಾಷಣ, ಪ್ರವಚನಗಳಲ್ಲಿ ಈಗಲೂ ಹೇಳುತ್ತಾ ಜನರನ್ನು ನಗಿಸುವುದುಂಟು. ನಿಮಗೂ ಅದು ಗೊತ್ತು.

ಆದರೆ ಆ ಮಾತು ತಮಾಷೆಯ ಮಾತಲ್ಲ. ಇಲ್ಲಿ ಅನೇಕರಿಗೆ ಅನ್ವಯವಾಗಬಹುದಾದ ಸತ್ಯ ಎನ್ನಿಸತೊಡಗಿದೆ. ಏಕೆಂದರೆ, ಕೆಲವರನ್ನುಳಿದು ಬಹುಪಾಲು ಭಾರತೀಯರಿಗೆ (ಲಿಂಗಾಯತರೂ ಇದೇ ಗುಂಪಿನಲ್ಲಿ ಬರುವರು) ತಾವು ಹುಟ್ಟಿದ ದೇಶ, ಅಲ್ಲಿಯ ಸಂಸ್ಕೃತಿ ಅನಾಗರಿಕ; ತಾವು ವಿದ್ಯಾವಂತರಾಗಿ ಅಮೆರಿಕಾ ಸೇರಿ ಬಹಳ ಮೇಲಿರುವವರು ಎಂಬ ಮೇಲರಿಮೆ (Superiority complex) ತುಂಬಿ ತುಳುಕುತ್ತ ಅವರಲ್ಲಿ ಆದಷ್ಟು ಬೇಗನೆ ಅಮೆರಿಕಾ ಸಂಸ್ಕೃತಿ ಅಳವಡಿಸಿಕೊಳ್ಳಬೇಕೆಂಬ ಆತುರತೆ ತೋರುತ್ತದೆ.

ಒಂದು ಸ್ಥಳದಲ್ಲಿ ಕೆಲವೊಂದು ಲಿಂಗಾಯತ ಕುಟುಂಬಗಳನ್ನು ಭೇಟಿ ಮಾಡುವ ಸನ್ನಿವೇಶ ಒದಗಿತ್ತು. ಮನೆಯವರ ಆಹ್ವಾನ ಮನ್ನಿಸಿ ಒಂದು ತರುಣ ದಂಪತಿಗಳ ಜೋಡಿ ಬಂದಿತ್ತು. ಇಬ್ಬರೂ ಲಕ್ಷಣವಾಗಿರುವವರು, ವಿದ್ಯಾವಂತರು, ಮದುವೆಯಾಗಿ ಕೆಲವೇ ಸಮಯವಾಗಿತ್ತು. ಅವರ ಧೋರಣೆ, ಬಿಗುಮಾನ ಹೇಳಲಾರದಷ್ಟು, ಯಾವುದೋ ಸ್ವಪ್ನಲೋಕದ ಕಿನ್ನರರೆಂಬಂತೆ ವರ್ತಿಸುತ್ತಿದ್ದರು. ಇಂಥವರಿಗೆ ಭಾರತ, ಭಾರತೀಯರ ಬಗ್ಗೆ ಒಂದು ರೀತಿಯ ತಿರಸ್ಕಾರ. ಈ ಮೇಲರಿಮೆಯ ಜೊತೆಗೆ ಅಮೆರಿಕನ್ ಸಂಜಾತರ ಸಂಬಂಧದಲ್ಲಿ ಕೀಳರಿಮೆ. ತಾವು ಅವರಂತೆ ಇಲ್ಲವಲ್ಲಾ ಎಂದು ಕೀಳರಿಮೆಯಿಂದ ಹೊರಬರಲು ಅಮೆರಿಕನ್ ಜನರ ಆಚಾರ-ವಿಚಾರ, ವೇಷ-ಭೂಷಣಗಳನ್ನು ಬಹಳ ಬೇಗನೆ ಅನುಕರಿಸಲು ಯತ್ನಿಸುವರು. ಯಾವುದು ಶ್ರೇಷ್ಠ, ಯಾವುದು ಕನಿಷ್ಠ ? ಯಾವುದು ಅನುಕರಣೀಯ, ಯಾವುದು ತಿರಸ್ಕರಣೀಯ ಎಂಬ ಪರಿಜ್ಞಾನ ಬಹಳ ಜನ ಭಾರತೀಯರಿಗೆ ಇಲ್ಲದಿರುವುದು ವಿಷಾದನೀಯ.

ಬರ್ಸಾನಾ ಧಾಮ ಸಂದರ್ಶನ

ಆಸ್ಟಿನ್ ನಗರ ನ್ಯೂಯಾರ್ಕ್, ಲಾಸ್ ಏಂಜಲೀಸ್‌ನಂತೆ ಪ್ರವಾಸಿಕರು ಹೆಚ್ಚಾಗಿ ಸಂದರ್ಶಿಸುವ ನಗರವೇನಲ್ಲ. ಹೀಗಾಗಿ ಸಂದರ್ಶಿಸುವ ಸ್ಥಳಗಳು ಬಹಳ ವಿಶೇಷವಾಗಿಲ್ಲ. ದಿ. 12 ಜುಲೈ 2003 ರಂದು ಯೋಗೀಶ್ವರಿಯವರು ಬರ್ಸಾನಾ ಧಾಮ ಎಂಬ ಒಂದು ಆಶ್ರಮಕ್ಕೆ ಕರೆದೊಯ್ದರು. ಇವರಿರುವ ಮನೆಯಿಂದ ಕಾರಿನಲ್ಲಿ ಸುಮಾರು 20 ನಿಮಿಷದ ಪ್ರಯಾಣ. ಸುಮಾರು 35 ಮೈಲಿ ಇರಬಹುದು. ಹತ್ತಾರು ಎಕರೆಯ ವಿಸ್ತಾರವಾದ ಜಾಗ ಕೊಂಡು ಅಲ್ಲಿ ಅಮೆರಿಕನ್ನರೇ ಭಾರತೀಯ ಸಂಸ್ಕೃತಿಯ ಒಂದು ಆಶ್ರಮ ಕಟ್ಟಿದ್ದಾರೆ. ಮಹಾದ್ವಾರದ ಬಳಿ ಕಾರು ನಿಲ್ಲುತ್ತಲೇ ದೂರದಲ್ಲಿ ಎದುರಿಗೇ ಸುಂದರವಾದ ಹಸಿರು ಹಿನ್ನೆಲೆ ಒದಗಿಸಿರುವ ಒಂದು ಗುಡ್ಡವಿದೆ. ಒಳಗೆ ಪ್ರವೇಶ ಮಾಡಿದಾಗ ಓರ್ವ ಅಮೆರಿಕನ್, "ಸತ್ಸಂಗ ನಡೆಯುತ್ತಿದೆ. ಗಲಾಟೆ ಮಾಡಬಾರದು" ಎಂದು ಸೂಚನೆ ನೀಡಿದ. ನಾವು ನಿಧಾನವಾಗಿ ನಡೆಯುತ್ತ ಎಲ್ಲವನ್ನೂ ಗಮನಿಸುತ್ತ ಮುನ್ನಡೆದೆವು. ಸುಂದರವಾದ ಬುಗ್ಗೆ (ಫೌಂಟನ್)ಗಳನ್ನು ಮಾಡಿದ್ದಾರೆ. ಆ ಕೊಳಗಳ ಸುತ್ತ ಅಲಂಕಾರಿಕ ಗಿಡ ಹಾಕಿದ್ದಾರೆ.

ಇದು ಒಂದು ವೈಷ್ಣವ ಉಪಪಂಥ. ಇದರ ಆರಾಧ್ಯ ದೇವತೆ ರಾಧೆ. ಕೃಷ್ಣನ ಪ್ರೇಯಸಿ ರಾಧೆಯಾದರೂ, ಇಲ್ಲಿ ರಾಧೆಗೆ ಕೃಷ್ಣನಿಗೆ ಮಿಗಿಲಾದ ಸ್ಥಾನ (ಹರೇ ಕೃಷ್ಣದವರಲ್ಲಿ ಕೃಷ್ಣನಿಗೆ ಪ್ರಮುಖ

ಸ್ಥಾನ, ರಾಧೆ ಸಹಾಯಕಿ. ಈಗ ಹರೇ ಕೃಷ್ಣ ಪಂಥವನ್ನು ಇಲ್ಲಿ ನಿಷೇಧಿಸಲಾಗಿದೆ.) ಬರ್ಸಾನಾ ರಾಧೆಯ ಜನ್ಮಸ್ಥಾನವಂತೆ. ಅದು ಭಾರತದಲ್ಲಿದೆ. ಅದೇ ಹೆಸರನ್ನು ಇಟ್ಟಿದ್ದಾರೆ. ಒಂದು ಗುಡಿಯನ್ನು ರಾಧೆ-ಕೃಷ್ಣರಿಗೆ ಅಮೃತಶಿಲೆಯಲ್ಲಿ ಕಟ್ಟಿದ್ದಾರೆ. ಉತ್ತರ ಭಾರತೀಯ ಶೈಲಿಯಲ್ಲಿ ಗುಡಿಯ ಗೋಪುರ ನಿರ್ಮಿಸಲಾಗಿದೆ. ಅಚ್ಚುಕಟ್ಟಾದ ಪರಿಸರ; ಸಾಕಷ್ಟು ವಾಸದ ಕೊಠಡಿ, ದೊಡ್ಡ ಪ್ರಾಂಗಣಗಳಿವೆ. ಕಾರ್ಯಕ್ರಮ ಮಾಡಲು, ಶಿಬಿರ ನಡೆಸಲು ಅವಕಾಶವಿದೆ. ಹಣ ಕಟ್ಟಿದರೆ ಅವರೇ ಶುದ್ಧ ಸಸ್ಯಾಹಾರಿ ಊಟ ಸಹ ಕೊಡುತ್ತಾರೆ. ಸಮ್ಮೇಳನ ಮಾಡಲೂ ಅನುಕೂಲವಿದೆ. ಆದರೆ ಆಸ್ಟಿನ್ ನಗರ ಉಳಿದ ಪ್ರಮುಖ ಪ್ರವಾಸಿ ನಗರಗಳಿಂದ ದೂರವಿರುವುದೇ ಅಲ್ಲದೆ ಇಲ್ಲಿ ಲಿಂಗಾಯತ ಕುಟುಂಬ ಮತ್ತು ಹಿಂದು ಕುಟುಂಬಗಳ ಸಂಖ್ಯೆಯೂ ಅಷ್ಟಾಗಿ ಇಲ್ಲ.

ಸುಂದರವಾದ ಹೆಬ್ಬಾಗಿಲು ದಾಟಿ ಒಳಹೋದರೆ ಯಾರೂ ಇಲ್ಲ; ಎಲ್ಲ ನಿಶ್ಶಬ್ದ. ಅಷ್ಟರಲ್ಲಿ ಸೀರೆಯುಟ್ಟ ಸಾತ್ವಿಕ ಮುಖ ಮುದ್ರೆಯ ಅಮೆರಿಕನ್ ಮಹಿಳೆಯೊಬ್ಬಳು ಬಂದು ನಮಸ್ತೆ ಎಂದಳು. ಹಲ್ಲೋ, ಹಾಯ್ ಶಬ್ದಗಳ ಮಧ್ಯೆ ಆಕೆಯ "ನಮಸ್ತೆ" ಪದ ಮನಸ್ಸಿಗೆ ಮುದವನ್ನು ತಂದಿತು. ಅಮೆರಿಕಾದ ಆಧುನಿಕ ಜಗತ್ತಿನ ಮಧ್ಯೆ ಸೀರೆಯುಟ್ಟವರ ಜಗತ್ತು ಕಂಡು ಹರ್ಷವೆನಿಸಿತು. ನಾವು ಸಂದರ್ಶಕರು ಎಂದಾಗ ಆಕೆ, "ನಿಮಗೆ ಸತ್ಸಂಗ ಬೇಕೋ, ಪೂಜೆಯಲ್ಲಿ ಭಾಗವಹಿಸುವಿರೋ?" ಎಂದಳು. "ಸತ್ಸಂಗ" ಎಂದಾಗ, "ಈಗ ನಡೆಯುತ್ತಿದೆ. ಹೋಗಿರಿ. ಪೂಜೆಯು ಏಳೂವರೆಗೆ ಇದೆ." ಎಂದಳು. ಬಾಗಿಲನ್ನು ಸದ್ದುಮಾಡದೆ ತೆರೆದು ಒಳಗೆ ಕಳಿಸಿದಳು. ಒಳಗೆ "ರಾಧೆಗೋವಿಂದ", ಭಜನೆ ನಡೆಯುತ್ತಿತ್ತು. ಅಮೆರಿಕನ್ನರು ಮೆಲುದನಿಯಲ್ಲಿ ಹಾಡುತ್ತಿದ್ದರು. ಆಗಲೇ ಅವರಿಗೆ ಶಬ್ದಗಳು ರೂಢಿಗೊಂಡಂತೆ ಉಚ್ಚರಿಸುತ್ತಿದ್ದರು. ಆಶ್ರಮವಾಸಿಗಳಲ್ಲೇ ಕೆಲವರು ಪಿಯಾನೋ, ತಬಲಾ ಬಾರಿಸುತ್ತಿದ್ದರು ಮತ್ತು ತಾಳ ಹಾಕುತ್ತಿದ್ದರು. ಎಲ್ಲರೂ ಅಮೆರಿಕನ್ನರೇ. ಹೆಣ್ಣುಮಕ್ಕಳು ಎಲ್ಲರೂ ಸೀರೆಗಳನ್ನು ಉಟ್ಟಿದ್ದರು. ಬಂದು ಕುಳಿತವರಲ್ಲಿ ಮಾತ್ರ ಕೆಲವರು ಹಿಂದುಗಳು ಇದ್ದರು. ಅವರಷ್ಟೇ ಪ್ಯಾಂಟು, ಚೂಡೀದಾರ ಹಾಕಿದ್ದರು. ಆಶ್ರಮವಾಸಿಗಳಲ್ಲಿ ಕೆಲವರು ತೀರಾ ಮುಪ್ಪಿನವರೂ ಇದ್ದು ಇಲ್ಲಿ ವೃದ್ಧಾಶ್ರಮ ಇರುವಂತೆ ತೋರುತ್ತಿತ್ತು.

ಬಾಗಿಲು ತೆಗೆದು ಒಳಗೆ ಹೋಗುತ್ತಲೇ ಒಂದು ವಿಸ್ಮಯ ಮತ್ತು ಪ್ರಶಾಂತ ಲೋಕವನ್ನು ಪ್ರವೇಶಿಸಿದಂತಾಯಿತು. ಇದಕ್ಕೆ ಕಾರಣ ಮೇಲ್ ಛಾವಣಿ. ಆ ವಿಶಾಲ ಮತ್ತು ಸುಂದರ ಹಾಲ್‌ಗೆ ಮೇಲೆ ನೀಲಿಯ ಆಕಾಶ ಮತ್ತು ಅದರಲ್ಲಿ ತೇಲುವ ಬಿಳಿಯ ಮೋಡಗಳು ಇರುವಂತೆ ಗಾಜಿನ ಹೊದ್ದಿಕೆ ಮಾಡಲಾಗಿತ್ತು. ವೇದಿಕೆ ಅತ್ಯಂತ ಸುಂದರ ಮಂಟಪ ಹೊಂದಿ, ಹಿಂದೆ ಒಂದು ದೃಶ್ಯ ಕಲ್ಪಿಸಲಾಗಿತ್ತು. ಗೋಕುಲದಲ್ಲಿ ನಂದನವನ, ಅಲ್ಲಿ ಕೊಳಲೂದುವ ಕೃಷ್ಣ, ಸನಿಹದಲ್ಲಿ ರಾಧೆ. ಹೀಗೆ ಕೃತಕ ದೃಶ್ಯಗಳನ್ನು ನಿರ್ಮಿಸಿ ಜನರ ಮನಸ್ಸನ್ನು ಸೆಳೆಯುವಲ್ಲಿ ಪಾಶ್ಚಾತ್ಯರು ಬಲು ಮುಂದು. ವೇದಿಕೆಯ ಮುಂದೆ ಒಂದು ಮಂಚವಿಟ್ಟು ಸುಪ್ಪತ್ತಿಗೆ ಹಾಸಿ ಅದರ ಮೇಲೆ ಈ ರಾಧಾಗೋವಿಂದ ಪಂಥದ ಸ್ಥಾಪಕರಾದ ಓರ್ವ ಭಾರತೀಯ ಸ್ವಾಮಿಗಳ ಭಾವಚಿತ್ರ ಇಡಲಾಗಿತ್ತು. ಅವರು ವರ್ಷದಲ್ಲಿ ಎರಡು ಬಾರಿ ಬರ್ಸಾನಾ ಧಾಮದವರು ನಡೆಸುವ ರಥೋತ್ಸವಕ್ಕೆ ಬಂದು ಹೋಗುವರು. ಇವರು ಏಕಲವ್ಯ ಭಕ್ತಿಯಂತೆ ಅವರ ಭಾವಚಿತ್ರ ಇಟ್ಟುಕೊಂಡು ರಾಧೆಗೋವಿಂದ ಎಂದು ಭಜನೆ ಮಾಡುತ್ತ, ಅವರ ವೀಡಿಯೋ ಕೆಸೆಟ್ಟು ಹಾಕಿಕೊಂಡು ದಿನಾಲೂ ಎರಡೂ ಹೊತ್ತು ಅರ್ಧರ್ಧ ಗಂಟೆ ಕೇಳುವರು.

ನಾನು ಅರ್ಥಮಾಡಿಕೊಂಡು ಊಹಿಸಿದುದೇನೆಂದರೆ, ಕೆಲವು ಅಮೆರಿಕನ್ನರಿಗೆ ಇಲ್ಲಿಯ ಜೀವನ

ಶೈಲಿ, ಭೋಗಲಾಲಸೆ ಎಷ್ಟೂ ಇಷ್ಟವಾಗದು. ಅಂಥವರಲ್ಲಿ ಯಾರಾದರೂ ಭಾರತದ ಬಗ್ಗೆ ಕನಸನ್ನಿಟ್ಟುಕೊಂಡು ಪ್ರಯಾಣ ಮಾಡುತ್ತ ಬಂದು ನಮ್ಮ ದೇಶದಲ್ಲಿರುವ ಸಾವಿರಾರು ಸಂತರಲ್ಲಿ ಯಾರನ್ನಾದರೂ ನೋಡಿ, ಪ್ರಭಾವಿತರಾಗಿ ಇಲ್ಲಿ ಬಂದು ತಮ್ಮದೇ ಶೈಲಿಯಲ್ಲಿ ಭಾರತೀಯ ಆ ಭಕ್ತಿ ಪಂಥವನ್ನು ಅಳವಡಿಸಿಕೊಳ್ಳುವರು. ಶಾಂತ ಜೀವನ ಬಯಸುವ ಇತರ ಅಮೆರಿಕನ್ನರೊಡನೆ ಸೇರಿಕೊಂಡು ಇಂಥ ಸಂಘ-ಸಂಸ್ಥೆ ರಚಿಸಿಕೊಳ್ಳುವರು, ಹಿಡಿದ ಕೆಲಸವನ್ನು ಚೊಕ್ಕಟವಾಗಿ ಮಾಡುವ ಶ್ರದ್ಧೆ ಇರುವುದರಿಂದ ಯಾವುದನ್ನು ಚಂದವಾಗಿ ಬೆಳೆಸಿಕೊಳ್ಳುವರು. ಅವರಿಗೆ ಆ ಪಂಥದ ಹಿನ್ನೆಲೆ, ತತ್ತ್ವಜ್ಞಾನ, ಅನುಭಾವ ಏನೂ ಅಗತ್ಯವೆನಿಸದು ಮತ್ತು ಅದನ್ನು ತಮಗೆ ಬೇಕಾದಂತೆ ಬದಲಾಯಿಸಿ ಕೊಳ್ಳುವುದು ಉಂಟು. "ಯೋಗ" ವನ್ನು ಒಂದು ಶಾರೀರಿಕ ವ್ಯಾಯಾಮದ ಮಟ್ಟಕ್ಕೆ ಇಳಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ಯೋಗ ಕೇಂದ್ರಗಳನ್ನು ತೆರೆದುಕೊಂಡಿರುವರು. ಕಾಯಕ ನಿಷ್ಠೆ, ಸೇವಾ ಮನೋಭಾವ, ಪ್ರಾಮಾಣಿಕತೆ ಇಲ್ಲಿಯ ಜನರ ವೈಶಿಷ್ಟ್ಯವಾಗಿದ್ದು ಬಿಳಿಯ ಜನರು ಒಳ್ಳೆಯ ರೀತಿಯಲ್ಲಿ ಸಂಸ್ಥೆಯನ್ನು ಕಟ್ಟಿಕೊಳ್ಳುವರು. ಕೆಲವು ಜನರು ತಮ್ಮ ಆಸ್ತಿಪಾಸ್ತಿ ಎಲ್ಲ ಧಾರೆ ಎರೆದು ಇಲ್ಲಿ ಸೇರಿದ್ದಾರೆ. ಭಾರತೀಯ ಹಿಂದುಗಳು ಸಂದರ್ಶಕರಾಗಿ ಬಂದು ಹೋಗುವರು. ಒಂದು ಶಿಬಿರ ನಡೆಸಬೇಕೆಂದು ಯೋಗೀಶ್ವರಿಯವರು ಸ್ಥಳಕ್ಕಾಗಿ ಕೇಳಿದಾಗ ಹಿಂದುಗಳಿಗೆ ಮತ್ತು ಸಸ್ಯಾಹಾರಿ ಹಿಂದುಗಳಿಗೆ ಮಾತ್ರ ಬಾಡಿಗೆ ಕೊಡುವುದಾಗಿ ಹೇಳಿದರು. ಆದರೆ ನಮಗೆ ಬೇಕಾದ ದಿನಾಂಕಕ್ಕೆ ಆಗಲೇ ಸ್ಥಳ ಕೊಡಲ್ಪಟ್ಟಿತ್ತು. 2004ನೆಯ ಇಸವಿಗೆ ಸಿಗುವಂತಿತ್ತು. ಅಮೆರಿಕಾ ಸರ್ಕಾರವು ಹಿಂದೂ ಸಂಪ್ರದಾಯಗಳನ್ನು ಅಮೆರಿಕನ್ನರು ಅಳವಡಿಸಿಕೊಳ್ಳುವುದನ್ನು ಇಷ್ಟಪಡದು. ಈ ಕಾರಣದಿಂದ ಮತ್ತು ಅತಿರೇಕದ ವರ್ತನೆ ಮಾಡಿ ಹಾದಿ ಬೀದಿಗಳಲ್ಲಿ ಹರೇ ಕೃಷ್ಣದವರು ಭಿಕ್ಷೆ ಬೇಡತೊಡಗಿದ್ದರಿಂದ ಅದನ್ನು ನಿಷೇಧಿಸಲಾಗಿದೆ. ಹಿಂದೂಗಳಿಗೆ ತಮ್ಮ ಧರ್ಮಪಾಲನೆಗೆ ಸ್ವಾತಂತ್ರ್ಯ ನೀಡಿರುವುದರಿಂದ ಈ ಬರ್ಸಾನಾ ಧಾಮದವರು ಜಾತ್ರೆ, ರಥೋತ್ಸವಗಳಲ್ಲಿ ಹಿಂದುಗಳಿಗೆ ಪ್ರಮುಖ ಸ್ಥಾನಕೊಟ್ಟು ತಮ್ಮ ಸಂಘಟನೆಯನ್ನು ರಕ್ಷಿಸಿ ಕೊಳ್ಳುತ್ತಿದ್ದಾರೆಂದು ಕೆಲವರು ಹೇಳಿದರು.

ನಂತರ ನಾವು ಹೊರಬಂದು ಆವರಣದಲ್ಲಿ ಸುತ್ತಾಡಿದೆವು. ಒಂದು ತಿಳಿಗೊಳವನ್ನು ಮಾಡಿ ಅಲ್ಲಿ ಕಮಲದ ಹೂ ಬೆಳೆಸಿದ್ದಾರೆ. ಬಹಳಷ್ಟು ನವಿಲುಗಳನ್ನು ಸಾಕಿದ್ದಾರೆ. ಮನಶ್ಶಾಂತಿಗಾಗಿ ಈ ಪರಿಸರದಲ್ಲಿ ಕಾಲ ಕಳೆಯಲು ಬರುವವರಿಗೆ ಇದು ಒಂದು ಉತ್ತಮ ಸ್ಥಳ. ಕೃತಕವಾಗಿ ಕಲ್ಲು ಬಂಡೆಗಳನ್ನು ಹೊಂದಿಸಿ ಸುಂದರವಾದ ಪರಿಸರ ನಿರ್ಮಿಸಿರುವುದು ನಾವು ಮೆಚ್ಚಿಕೊಳ್ಳುತ್ತಿರುವಾಗಲೇ ಒಂದು ಭಾರತೀಯ ಕುಟುಂಬದವರ ಕಾರು ಬಂದು ನಿಂತು, ಅದರೊಳಗಿನಿಂದ ಮಂಗಗಳಂತೆ ಕುಣಿಯುತ್ತ ಮಕ್ಕಳು ಇಳಿದು ಸುತ್ತಮುತ್ತಲು ಗಲಾಟೆ ಎಬ್ಬಿಸಿ, ವಾತಾವರಣದ ಶಾಂತಿಗೆ ಭಂಗ ತಂದವು. ಅವರುಗಳ ಫೋಟೋ ತೆಗೆಯುವ ಸಂಭ್ರಮ ಶುರುವಾಯಿತು. ಆಗ ನಮಗೆ ಮನಸ್ಸಿನಲ್ಲಿ ಮುಜುಗರವಾಯಿತು. ಅಮೆರಿಕನ್ನರು ಭಾರತೀಯ ಸಂಸ್ಕೃತಿಯ ಬಗ್ಗೆ ಗೌರವ ತಾಳಿ, ಅವರು ಶಿಸ್ತು ಅಳವಡಿಸಿಕೊಂಡರೆ ಭಾರತೀಯರು ಬಂದಲ್ಲೆಲ್ಲ ಗದ್ದಲ ಮಾಡುವರಲ್ಲ; ಏಕೆ ಹೀಗೆ? ಎಂದು ಚಿಂತಿಸಿದೆವು.

ಆಸ್ಟಿನ್ ಸಿಟಿ ಲೇಕ್ ಸಂದರ್ಶನ

ದಿ. 19, ಜುಲೈ 2003 ರಂದು ಆಸ್ಟಿನ್ ನಗರ ಮಧ್ಯೆ ಹರಿಯುತ್ತಿರುವ ಕೊಲಂಬಿಯಾ ನದಿಯ ನೆರವಿನಿಂದ ನಿರ್ಮಾಣ ಮಾಡಿರುವ ಸಿಟಿ ಲೇಕ್ ಸಂದರ್ಶನಕ್ಕೆ ಹೋದೆವು. ಹರಿಯುವ ನದಿ ಕೊಂಚ

ನಿಂತು ಹರಿಯುವಂತೆ ಕೃತಕವಾದ ಸರೋವರ ನಿರ್ಮಿಸಲಾಗಿದೆ. ಆ ಸರೋವರದ ದಂಡೆ ಗುಂಟ ಕಾಲು ಹಾದಿ ಇದ್ದು ವಾಯುವಿಹಾರಕ್ಕೆ ಬರುವವರಿಗೆ ಬಹಳ ಉತ್ತಮ ಸ್ಥಳವಾಗಿದೆ. ವಾಕ್ ಮಾಡುವವರು, ಓಡುವವರು, ಸೈಕಲ್ ತುಳಿಯುವವರಿಗೆಲ್ಲ ಅವಕಾಶ ಮಾಡಲಾಗಿದೆ ಅಲ್ಲಲ್ಲೇ ಕಬ್ಬಿಣದ ಆಸನಗಳಿವೆ ಸೂರ್ಯಾಸ್ತದ ಸೌಂದರ್ಯ ಸವಿಯಲು ಕೆಲವು ಜಾಗಗಳಲ್ಲಿ ಪರ್ಣಕುಟೀರಗಳನ್ನು ನಿರ್ಮಿಸಲಾಗಿದೆ. ತಮ್ಮ ದೋಣಿಗಳಲ್ಲಿ ತಾವೇ ಬಂದು ವಿಹಾರ ಮಾಡುವವರಿಗೆ ಅವಕಾಶವಿದೆ. ನಗರ ಪಾಲಿಕೆಯ ಬೃಹತ್ ದೋಣಿಗಳಿವೆ. ಮೊದಲೇ ಬುಕ್ ಮಾಡಿ ಹಣತುಂಬಿದರೆ ದೋಣಿ ವಿಹಾರದ ಸಮಯದಲ್ಲಿ ಊಟ ಮಾಡಲು ಸಹ ಅವಕಾಶವಿದೆ.

ನಾಯಿಯ ಪ್ರೇಮ

ಇಲ್ಲಿಯ ಜನರಿಗೆ ನಾಯಿಗಳನ್ನು ಸಾಕುವುದು ತೀರಾ ಇಷ್ಟವಾದ ಹವ್ಯಾಸ. ಪ್ರತಿಯೊಂದು ಕುಟುಂಬದಲ್ಲೂ ಎರಡು-ಮೂರು ನಾಯಿಗಳನ್ನು ಸಾಕುವರು. ವಾಯು ಸೇವನೆಗೆ ಬರುವಾಗ ಜೊತೆಗೆ ಕರೆತರುವರು. ಅವು ಅತ್ಯಂತ ಸಾಧುವಾಗಿ ವರ್ತಿಸಲು ತರಬೇತಿ ನೀಡಲಾಗುವುದು. ನದಿಯ ದಂಡೆಯಲ್ಲಿ ನಿಂತು ಚೆಂಡು ಎಸೆದರೆ ನಾಯಿಗಳು ಈಜಿ ಹೋಗಿ ಚೆಂಡನ್ನು ಹೊತ್ತುತರುತ್ತವೆ. ನಾನು ಭಾರತದಿಂದ ಹೊರಡುವಾಗ ಆರೋಗ್ಯವು ಅತಿ ಶ್ರಮದಿಂದ ಕೆಟ್ಟಿತ್ತು. ಬಿ.ಪಿ. ಸಕ್ಕರೆ ಎರಡೂ ಏರಿದ್ದವು. ಇಲ್ಲಿಗೆ ಬಂದ ಮೇಲೆ ವಾಕ್ ಹೋಗುವುದು ರೂಢಿಸಿಕೊಂಡೆ, ಆರೋಗ್ಯ ಸುಧಾರಿಸುತ್ತಿದೆ. ಹವಾಸೇವನೆಗೆ ಹೋಗುವಾಗ, ಬರುವಾಗ ಎದುರಾಗುವ ಜನರು ಪರಿಚಯ ಇರಲಿ, ಇಲ್ಲದಿರಲಿ ಮುಗುಳ್ನಕ್ಕು ಹಾಯ್, ಹಲೋ, ಹೌ ಆರ್ ಯು ? ಎನ್ನುವುದು ಸ್ವಾಭಾವಿಕ ಶಿಷ್ಟಾಚಾರ. ಒಂದು ದಿನ ಅದರಂತೆ ನಾವು ಅಂದಾಗ ಎದುರಿನಿಂದ ನಾಯಿಯೊಡನೆ ಬರುತ್ತಿದ್ದ ಓರ್ವ ಮಹಿಳೆ ಯಾವ ಪ್ರತಿಕ್ರಿಯೆಯನ್ನು ತೋರದೆ ಗಂಟು ಮುಖದೊಡನೆ ಹೋದಳು. "ಈ ಮಹಿಳೆಗೆ ಬಹಳ ಜಂಬವಿರುವಂತೆ ಕಾಣುತ್ತದೆ" ಎಂದೆ. ಆಗ ರಾಧಿಕಾ ಹೇಳಿದರು, "ನಿನ್ನೆ ನಾನೂ ಹಾಗೆಯೇ ಅಂದುಕೊಂಡೆ. ಇವತ್ತು ಗಮನಿಸಿದಾಗ ತಿಳಿಯಿತು ಆಕೆ ಕುರುಡಿ. ಆ ನಾಯಿಯನ್ನು ಬಿಗಿಯಾಗಿ ಹಿಡಿದಿದ್ದಾಳೆ. ಅದು ಆಕೆಯನ್ನು ಕರೆದು ಕೊಂಡು ಹೋಗುತ್ತಿದೆ." ತಪ್ಪು ತಿಳಿದುದಕ್ಕೆ ನನಗೆ ವಿಷಾದವೆನಿಸಿತು. ಮರುದಿನ ಗಮನಿಸಿದೆವು. ಆಕೆ ಪೂರ್ಣ ಕುರುಡಿ. ನಾಯಿಗೆ ತರಬೇತಿ ನೀಡಲಾಗಿದೆ. ಆಕೆಯನ್ನು ಅದು ಮನೆಯಿಂದ ಕರೆ ತಂದು, ವಾಕ್ ಮಾಡಿಸಿ ಪುನಃ ಮನೆಗೆ ಕರೆದೊಯ್ದು ಬಿಡುತ್ತದೆ. ನಾಯಿಗಳಿಗೆ ಸ್ಪೆಷಲ್ ಹೋಟೆಲ್, ಅವಕ್ಕೆ ಸ್ಪೆಷಲ್ ಸ್ನಾನದ ಮನೆ, ಬ್ಯೂಟಿ ಪಾರ್ಲರ್ ಸಹ ಇವೆಯಂತೆ!

ಬೊಟಾನಿಕಲ್ ಗಾರ್ಡನ್

ಆಸ್ಟಿನ್ ನಗರದ ಮಧ್ಯೆ ಒಂದು ಸುಂದರ ಬೊಟಾನಿಕಲ್ ಗಾರ್ಡನ್ ಇದೆ. ಜಿಲ್ಕರ್ ಎಂಬುವವರ ಹೆಸರನ್ನು ಇಟ್ಟಿದ್ದಾರೆ. ಇದೇ ಹೆಸರಿನಲ್ಲಿ ದೊಡ್ಡ ಪಾರ್ಕ್ ಸಹ ಇದೆ. ಬೃಹತ್ ಪ್ರಮಾಣದಲ್ಲಿ ಪಟಾಕಿಗಳನ್ನು ಹಾರಿಸುವಾಗ ವಿವಿಧ ಸಂಘಟನೆಗಳವರು ಜಿಲ್‌ಕರ್ ಪಾರ್ಕ್, ಸೆಡಾರ್ ಪಾರ್ಕ್ ಎಂಬಲ್ಲಿ ವಿಶೇಷ ಪಟಾಕಿ ಪ್ರದರ್ಶನ ಇಡುವರಂತೆ. ಅಂದರೆ ಪಟಾಕಿಗಳು ಎತ್ತರಕ್ಕೆ ಹಾರಿ ಕಿಡಿಗಳು ಎಲ್ಲೆಲ್ಲೋ ಬಿದ್ದು ಜನರಿಗೆ ಹಾನಿಯಾಗಬಾರದೆಂಬುದು ಇದರ ಉದ್ದೇಶ. ಈಗಾಗಲೇ ತಿಳಿಸಿರುವಂತೆ ವಿಶೇಷ ಹಬ್ಬ-ಉತ್ಸವಗಳಲ್ಲಿ ಮಕ್ಕಳ ಮನೋರಂಜನೆಗೆ ಒಡೆಯುವ ಪಟಾಕಿಗಳು ಅಪಾಯಕಾರಿಯಾಗದೆ

ಸಾಮಾನ್ಯವಾಗಿರುವಂಥವು.

ಓರ್ವ ಜಪಾನಿ ವ್ಯಕ್ತಿ ತೋಟಗಾರಿಕೆ ಹವ್ಯಾಸ ಉಳ್ಳವನು. ಆ ದೇಶದಿಂದ ಇಲ್ಲಿಗೆ ಬಂದು ನೆಲೆಸಿರುವಾಗ ಅವನಿಗೆ ತನ್ನ ದೇಶದ ತೋಟಗಾರಿಕೆ ನೆನಪು ಬಂದು, ತನ್ನ ವೈಯಕ್ತಿಕ ಹವ್ಯಾಸಕ್ಕಾಗಿ ಜಪಾನ್ ಮಾದರಿ ಉದ್ಯಾನವನವನ್ನು ಮಾಡಿದ್ದಾನೆ. ಸುಂದರವಾದ ಸಣ್ಣಸಣ್ಣ ನೀರಿನ ಝರಿಗಳು, ನೀರಿನ ಕೊಳಗಳು, ಅದರೊಳಗೆ ತಾವರೆ-ಹಗಲು ಅರಳುವವು, ನೈದಿಲೆ-ರಾತ್ರಿ ಅರಳುವವು. ಈ ಕೊಳಗಳಲ್ಲಿ ವಿವಿಧ ಬಣ್ಣ, ವಿವಿಧ ಗಾತ್ರದ ಮೀನುಗಳು ನೀರಿನ ಝರಿಗಳನ್ನು ದಾಟಲು ಕಟ್ಟಿಗೆಯಿಂದ ಮಾಡಿದ ಚಿಕ್ಕ ಕಮಾನು ಮತ್ತು ಸೇತುವೆ. ಅತ್ಯಂತ ಆಕರ್ಷಕವೆಂದರೆ ಶುಭ್ರ ಬಿಳಿಯ ಹಂಸಗಳು. ನಾನು ಬಾಲ್ಯದಲ್ಲಿ ಗಂಡಬೇರುಂಡದಂತೆ ಹಂಸೆಯೂ ಪುರಾಣ ಕಾಲದ ಕಾಲ್ಪನಿಕ ಪಕ್ಷಿ ಏನೋ ಎಂದುಕೊಂಡಿದ್ದೆ. ನಂತರ ಚೆನ್ನಾಯ್‌ದಲ್ಲಿ ಕರಿಯ ಹಂಸೆಗಳನ್ನು ನೋಡಿದ್ದೆ. ಈಗ ಆ ಬಿಳಿಯ ಹಂಸೆಗಳ ಗುಂಪು ನೋಡಿ ತುಂಬಾ ಸಂತೋಷವೆನ್ನಿಸಿತು. ಆ ಜಪಾನಿ ತಾನು ಬೆಳೆಸಿದ ಉದ್ಯಾನವನ್ನು ತನ್ನ ನಂತರ ಆಸ್ಟಿನ್ ನಗರ ಪಾಲಿಕೆಗೆ ಕಾಣಿಕೆಯಾಗಿ ಕೊಟ್ಟ, ಇದಕ್ಕೆ ಇನ್ನು ವಿಸ್ತಾರವಾದ ಭೂಮಿಯನ್ನು ಸೇರಿಸಿ ವಿವಿಧ ಸಸ್ಯ ಪ್ರಭೇದಗಳನ್ನು ಹೊಂದಿದ ಬೊಟಾನಿಕಲ್ ಗಾರ್ಡನ್ ಮಾಡಿದ್ದಾರೆ. ಈ ವಿಭಾಗದಲ್ಲಿ ನೂರಾರು ಬಗೆಯ ಗುಲಾಬಿ ಗಿಡ, ಸುಗಂಧಿ ಪುಷ್ಪ, ಒಂದು ಕೊಳದ ಮಧ್ಯೆ ಡೈನೋಸಾರ್ (ಪೆಡಂಭೂತ) ದ ಕೃತಕ ಶಿಲ್ಪ, ಹಿನ್ನೆಲೆಯಲ್ಲಿ ಕೃತಕವಾಗಿ ನಿರ್ಮಿಸಿದ ಜಲಪಾತ ಬಂಡೆಗಳ ಮೇಲೆ ಜಾರಿ ಬೀಳುತ್ತದೆ.

ಅಮೆರಿಕಾ ದೇಶ ವಿಸ್ತಾರವಾದ ಭೂಪ್ರದೇಶ ಹೊಂದಿದೆ. ಜನಸಂಖ್ಯೆ ಕಮ್ಮಿ. ಹೀಗಾಗಿ ನಗರ ಮಧ್ಯದ ಪ್ರದೇಶ ಬಿಟ್ಟರೆ ಬಾಕಿ ಎಲ್ಲೆಡೆ ಹಸಿರು ವನವೇ ವನ. ಬೆಂಗಳೂರಿನಲ್ಲಿ ನೆಲೆಸಿರುವ ನಿವೃತ್ತ ನ್ಯಾಯಾಧೀಶರಾದ ಶರಣ. ಕೊ. ಚನ್ನಬಸಪ್ಪನವರ ಮಗ ಶ್ರೀ ಕೊ.ಚ. ಪ್ರಭುದೇವ್ ಮತ್ತು ಅವರ ಪತ್ನಿ ಸುಚೇತಾ (ಹಾಸನ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷರಾಗಿದ್ದ ಲಿಂ॥ ಶರಣ. ರಾಜಶೇಖರಪ್ಪನವರ ಮಗಳು) ಅವರು ಹೊಸ ಮನೆಯನ್ನು ಖರೀದಿಸಿದ್ದರು. ದಿ. 22-6-2003 ರಂದು ಯೋಗೀಶ್ವರಿ ಅವರ ಮನೆಯ ಬಸವ ಜ್ಯೋತಿ ಕಾರ್ಯಕ್ರಮಕ್ಕೆ ಬಂದಾಗ ತಾವು ಹೊಸ ಮನೆಯನ್ನು ಖರೀದಿಸಿರುವುದಾಗಿಯೂ, ಪೂಜೆಗೆ ಬರಬೇಕೆಂದು ವಿನಂತಿಸಿದ್ದರು. ಅದರಂತೆ ದಿ. 5-7-2003 ರಂದು ಕಾರ್ಯಕ್ರಮ ಇಟ್ಟಾಗ ನಾವು ಹೋದೆವು. ಅವರು ಇರುವುದು ಹೊಸದಾಗಿ ಬೆಳವಣಿಗೆಯಾಗಿರುವ ನಗರ ವಿಸ್ತರಣಾ ಪ್ರದೇಶ. ದಾರಿಯುದ್ದಕ್ಕೂ ಹಸಿರಿನ ಸಮುದ್ರ. ಚಿಕ್ಕ ಚಿಕ್ಕ ಗುಡ್ಡಗಳು, ಅವುಗಳ ಮೇಲೆ ಸೊಂಪಾಗಿ ಬೆಳೆದ ವೃಕ್ಷಗಳು. ಮನೆಗಳ ಮುಂದೆ-ಹಿಂದೆ ಹಸಿರು ಹುಲ್ಲಿನ ಹಾಸು ಕಡ್ಡಾಯ. ಅವುಗಳನ್ನು ಮನೆಯವರು ಪೋಷಿಸಬೇಕು. ಮನೆಗಳಿಗೆ ಸಂಬಂಧಿಸದ, ಬದಿಯ ಕಾಲುದಾರಿಯ ಪಕ್ಕದಲ್ಲಿ ಬೆಳೆಸಿದ ಹುಲ್ಲು ಹಾಸು ಮತ್ತು ಇನ್ನಿತರ ಹೂವಿನ ಗಿಡಗಳ ರಕ್ಷಣೆ ನಗರ ಸಂರಕ್ಷಣಾ ಸಮಿತಿಯದು. ಹೀಗಾಗಿ ನೇರ ಮತ್ತು ಚೊಕ್ಕಟ ರಸ್ತೆಗಳ ಪಕ್ಕದಲ್ಲೆಲ್ಲ ಹಸಿರು ಹುಲ್ಲಿನ ಹಾಸು.

ಮಳೆಯು ಬಿದ್ದಾಗ ನೀರು ನಿಲ್ಲದೆ ಜಾರಿ ಹೋಗುವಂತೆ ಮನೆಯ ಮುಂಭಾಗ, ಹಿಂಭಾಗ ಎರಡೂ ಕಡೆ ಇಳಿಜಾರು ಮಾಡಿ ಹುಲ್ಲು ಬೆಳೆಸಿದ್ದರೆ, ರಸ್ತೆಯ ನೀರು ಎರಡೂ ಬದಿಗಳಲ್ಲಿ ಹರಿದು ಪುನಃ ದೂರ ಹೋಗಲು ಅಲ್ಲಲ್ಲೇ ಹರಿಗಳನ್ನು (Channels) ಮಾಡಿರುತ್ತಾರೆ. ಆ ನೀರು ಒಂದೆಡೆ ಸಂಗ್ರಹವಾಗಲು ಒಂದು ಫರ್ಲಾಂಗಿಗೆ ಒಂದು ಸಂಗ್ರಹ ತೊಟ್ಟಿ ಮಾಡಿ, ಅಲ್ಲಿಂದ ಮುಂದೆ ಹರಿಯುವಂತೆ ಮಾಡಿರುತ್ತಾರೆ. ನೀರು ನಿಂತು ಸೊಳ್ಳೆಗಳಿಗೆ ಅವಕಾಶ ಮಾಡದಂತೆ ಎಚ್ಚರ ವಹಿಸಿರುತ್ತಾರೆ.

ಈಗ ಇಲ್ಲಿ ನೀರಿಗೆ ನಿಯಂತ್ರಣವಿದೆ. ಬಳಕೆಗೆ ನಿರ್ಬಂಧವಿಲ್ಲ. ಗಿಡಗಳಿಗೆ, ಹುಲ್ಲಿನ ಹಾಸಿಗೆ, ಬೇಸಿಗೆ ಕಾಲವಾದ್ದರಿಂದ ವಾರಕ್ಕೊಂದೇ ದಿನ ಹಾಯಿಸಬೇಕೆಂಬ ನಿಯಮವಿದೆ. ಯಾವ ಯಾವ ಪ್ರದೇಶದವರು, ಯಾವ ಬೀದಿಯವರು ಎಂದು ಹಾಯಿಸಬಹುದು ಎಂಬ ಬಗ್ಗೆ ಸ್ಥಳೀಯ ಟಿ.ವಿಗಳಲ್ಲಿ ತಿಳಿಸುತ್ತಾರೆ. ಅಂದು ಮಾತ್ರ ಜನರು ನೀರು ಹಾಯಿಸುವರು. ನಿಯಮ ಮೀರಿದರೆ ದಂಡ ವಿಧಿಸಲಾಗುತ್ತದೆ. ಆದರೆ ಜನರು ಅಷ್ಟೇ ಎಚ್ಚರಿಕೆಯಿಂದ ನಿಯಮ ಪಾಲಿಸುವುದು ಆಶ್ಚರ್ಯ ಉಂಟು ಮಾಡುತ್ತದೆ.

ಹುಲ್ಲು ಕತ್ತರಿಸುವ ಕಾಯಕದ ಕಂಪೆನಿಗಳಿವೆ. ವಾರಕ್ಕೊಂದು ಸಲ ಅವರ ಕೆಲಸಗಾರರು ಬರುವರು. ಹುಲ್ಲುಕತ್ತರಿಸುವವನೊಬ್ಬ; ಪಾತಿ ಮಾಡುವವನು ಮತ್ತು ಹುಲ್ಲು ಹಾಸಿಗೆಯ ತುದಿಯನ್ನು ನೇರಮಾಡುವವನೊಬ್ಬ, ಬಿದ್ದ ಹುಲ್ಲಿನ ಎಸಳನ್ನು ಯಂತ್ರದ ಮೂಲಕ ಸಂಗ್ರಹಿಸುವವನೊಬ್ಬ- ಹೀಗೆ ಕಾರಿನಲ್ಲಿ ಮೂವರು ಬಂದು ಒಂದು ತಾಸಿನಲ್ಲಿ ಮನೆಯ ಮುಂದೆ- ಹಿಂದೆ ಹುಲ್ಲು ಕತ್ತರಿಸಿ ಹೋಗುವರು. ಆಟೋಮ್ಯಾಟಿಕ್ ಸ್ಪ್ರಿಂಕ್ಲರ್ಸ್ ಇರುತ್ತವೆ. ಅವಕ್ಕೆ ಟೈಮರ್ ಹಾಕಿರುತ್ತಾರೆ. ನೀರಿನ ಮೇಲೆ ಸದ್ಯ ನಿಯಂತ್ರಣ ಇರುವುದರಿಂದ ವಾರಕ್ಕೊಮ್ಮೆ ನೀರು ಹಾಯಿಸುವರು. ಬಾಕಿ ಸಮಯದಲ್ಲಿ ಟೈಮ್ ಹೊಂದಿಸಿ ಇಟ್ಟರೆ ಅವು ತಮ್ಮ ಪಾಡಿಗೆ ತಾವು ಚಲನೆಗೊಂಡು ನೀರು ಉಣ್ಣಿಸುತ್ತವೆ.

ಇಂದು (7-8-2003) ಹವಾಮಾನದ ತಾಪಮಾನ 104 ಡಿಗ್ರಿ ಫ್ಯಾರನ್ ಹೀಟ್‌ಗೆ ಏರಿದೆ. ನಾಳೆ ಇನ್ನೂ ಹೆಚ್ಚಾಗಲಿದೆಯಂತೆ. 40 ಡಿಗ್ರಿ ಸೆಂಟ್ರಿಗೇಡ್‌ಗೂ ಮೇಲೆ. ಈ ಬಿಸಿಲಿನ ಮುಂದೆ ಗುಲಬರ್ಗಾ-ರಾಯಚೂರು-ಬಳ್ಳಾರಿ ಬಿಸಿಲು ಏನೂ ಅಲ್ಲ. ಆದರಿಷ್ಟೇ ಇಲ್ಲಿ ಕಾರಿನಲ್ಲಿ ಎ.ಸಿ (ಹವಾ ನಿಯಂತ್ರಿತ), ಮನೆಯಲ್ಲಿ ಎ.ಸಿ., ಅಂಗಡಿಗಳಲ್ಲಿ ಎ.ಸಿ., ಕಾರಿನಿಂದ ಇಳಿದು ಅಂಗಡಿಯೊಳಕ್ಕೆ, ಆಫೀಸಿನೊಳಕ್ಕೆ ಹೋಗುವ ತನಕ ಮಾತ್ರ ಬಿಸಿಲಿನ ಬೇಗೆ.

ಇಂದಿನ ಬಿಸಿಲಿನ ಬೇಗೆಗೆ ಒಣಹುಲ್ಲು ತೀವ್ರವಾಗಿ ಬೆಂಕಿ ಹಿಡಿದು ಮನೆಗೆ ಹಬ್ಬುವ ಸಾಧ್ಯತೆ ಇರುವುದರಿಂದ ಹುಲ್ಲಿಗೆ ನೀರು ಹಾಕಿರಿ ಎಂದು ಟಿ.ವಿಯಲ್ಲಿ ಮೇಲಿಂದ ಮೇಲೆ ಸೂಚನೆ ಕೊಡುತ್ತಿದ್ದಾರೆ.

ವಾಹನ ಸಂಚಾರ, ನಡೆದಾಡುವಿಕೆ ಎಲ್ಲದರಲ್ಲೂ ಶಿಸ್ತು. ಸುಮಾರು ಐದು ಅಡಿ ಅಗಲದ ಫುಟ್ ಪಾತ್‌ಗಳನ್ನು ಸಿಮೆಂಟನಿಂದ ರಚಿಸಿರುತ್ತಾರೆ. ಜನರು ಅದರ ಮೇಲೆ ನಡೆಯ ಬೇಕು. ನಮ್ಮಲ್ಲಿ ಕಾಲುದಾರಿಗಳೆಲ್ಲ ಗಣೇಶ, ಹನುಮಂತ, ಶನಿ - ಇವುಗಳಿಂದ ಆಕ್ರಮಿಸಲ್ಪಟ್ಟಿರುತ್ತವೆ. ಹೀಗಾಗಿ ಜನರು ರಸ್ತೆಗಳಲ್ಲಿ ಓಡಾಡದೆ ಗತ್ಯಂತರವಿಲ್ಲ. ಎಲ್ಲ ರಸ್ತೆಗಳ ಪಕ್ಕದಲ್ಲಿ ಐದಾರು ಅಡಿ ಅಗಲ ಜಾಗ ಗುರುತಿಸಿ, ಗೆರೆ ಎಳೆದು ಸೈಕಲ್ ಸವಾರರಿಗೆ ಮೀಸಲಿಟ್ಟಿರುತ್ತಾರೆ. ಇಲ್ಲಿ ಸೈಕಲ್ ಹವ್ಯಾಸ ಬಹಳ. ಕ್ರಿಕೆಟ್ ಸೋಮಾರಿತನ ಬೆಳೆಸುತ್ತದೆಂದೋ ಏನೋ ಆ ಆಟಕ್ಕೆ ಮಹತ್ವ ನೀಡಿಲ್ಲ. ಸಂಜೆಯಾಗಿ ಬಿಸಿಲು ಆರುತ್ತಲೇ ಜನರು ರಸ್ತೆಗಳ ಪಕ್ಕದಲ್ಲಿ ವಾಕ್ ಮಾಡುವರು, ಓಡುವರು, ಸೈಕಲ್ ತುಳಿಯುವರು. ನಾಯಿಗಳನ್ನು ಹಿಡಿದುಕೊಂಡೇ ಓಡುವಾಗ ಅವೂ ಇವರ ಸಂಗಡ ಓಡುತ್ತಿರುತ್ತವೆ. ಅಲ್ಲಲ್ಲೇ ಕಸದ ಡಬ್ಬಿಗಳಲ್ಲಿ ಎಸೆಯುವ ಸಾಮಾನು ಇದ್ದರೆ ಒಯ್ದು ಅಲ್ಲೇ ಹಾಕುತ್ತಾರೆ. ದಾರಿಯಲ್ಲಿ ಉಗುಳುವ ಬಾಬತ್ತು ಇಲ್ಲವೇ ಇಲ್ಲ. ನಮ್ಮ ದೇಶದ ಜನ ಈ ಶಿಸ್ತು ಕಲಿಯುವುದೆಂದು ? ಎಂಬ ಚಿಂತೆ ನನ್ನನ್ನು ಸದಾ ಕಾಡುತ್ತದೆ.

ಆಟೋಮ್ಯಾಟಿಕ್ ಜಗತ್ತು

ವಿಜ್ಞಾನ ಬಹಳ ಮುಂದುವರಿದಿದ್ದು ಎಲ್ಲವೂ ಇಲ್ಲಿ ಆಟೋಮ್ಯಾಟಿಕ್, ಸ್ವಯಂ ಚಾಲಿತ

ವ್ಯವಸ್ಥೆಯಿಂದ ನಡೆಯುತ್ತದೆ. ಕಾರಿನಲ್ಲಿ ಕುಳಿತೇ ಗೆರೇಜ್ ಬಾಗಿಲನ್ನು ತೆರೆಯುವರು. ಈಗೇನೂ ವಿಶೇಷ ಎನ್ನಿಸಲಿಲ್ಲ. 1981 ರಲ್ಲಿ ಬಂದಾಗ ಮನೆಯ ಮಂದಿ ನನ್ನನ್ನು ಒಂದು ಕಾರ್ಯಕ್ರಮಕ್ಕೆ ಕರೆದೊಯ್ದಿದ್ದರು. ಕಾರು ದೂರದಲ್ಲಿರುವಾಗಲೇ ಗೆರೇಜ್ ಬಾಗಿಲು ತೆಗೆದಿದ್ದಾರೆ. ನಾನು ಹೌಹಾರಿ, "ಇದೇನು, ಮನೆ ಮಂದಿಯೆಲ್ಲ ಕಾರಿನಲ್ಲಿದ್ದೀರಿ. ಯಾರೋ ಗೆರೇಜ್ ಬಾಗಿಲು ತೆರಿದಿದ್ದಾರೆ," ಎಂದಾಗ ಅವರು ನಕ್ಕು, ಈಗ ನಾನೇ ತೆಗೆದೆ ಎಂದಿದ್ದರು. ಈ ಮಾಯಾ ಜಗತ್ತು ಈಗೆಲ್ಲ ಅರ್ಥವಾಗಿದೆ. ಆದರೆ ಆಗಿಗಿಂತ ಈಗ ಮತ್ತೆ ಮುನ್ನಡೆದಿದೆ.

ನಮ್ಮ ಆತಿಥೇಯರಾದ ಯೋಗೀಶ್ವರಿ ಮತ್ತು ನನ್ನ ಪ್ರಸಾದ ವ್ಯವಸ್ಥೆಗಾಗಿಯೇ ಬಂದ ಅವರ ಅಕ್ಕ ರಾಧಿಕಾ ಅತಿ ಶ್ರಮದ ಕಾರ್ಯಕ್ರಮಗಳಿಂದ ನಾನು ಕೆಡಿಸಿಕೊಂಡ ಆರೋಗ್ಯವನ್ನು ಸುಧಾರಿಸಲೇ ಬೇಕೆಂದು ಸಂಕಲ್ಪ ಮಾಡಿದ್ದರು. ನಾನು ಹೊರಡುವಾಗ ಬಿ.ಪಿ ಮತ್ತು ಡಯಾಬಿಟೀಸ್ ಜಾಸ್ತಿಯಾಗಿದ್ದವು. ವೈದ್ಯರು ನೋಡಿದ್ದರು. ಒಬ್ಬರು ಡಯಾಬಿಟೀಸ್ ಶುರುವಾದಾಗಿನಿಂದ ನಾನು ತೆಗೆದುಕೊಳ್ಳುತ್ತಿದ್ದ ಮಾತ್ರೆ ಬದಲಿಸಿ, ಇವು ಸುಧಾರಿತ ಮತ್ತು ಶಕ್ತಿಶಾಲಿ ಮಾತ್ರೆ ಎಂದು ಬೇರೆ ಕೊಟ್ಟಿದ್ದರು. ಹಳೆಯವು ಮೊದಲು ಮುಗಿಯಲಿ ಎಂದು ತೆಗೆದುಕೊಂಡು, ಇಲ್ಲಿಗೆ ಬಂದಾಗ ಹೊಸವು ಶುರು ಮಾಡಿದೆ. ವಿಚಿತ್ರ ಪರಿಣಾಮಗಳು ಕಂಡವು. ಕಾರಣ ತಿಳಿಯಲೇ ಇಲ್ಲ. ಹಾಲು ನಮ್ಮಲ್ಲಿಯಂತೆ ಇರದೆ ಬೇರೆ ರೀತಿ ಇರುವುದರಿಂದ ಕೆಲವರಿಗೆ ಕೆಲವು ಕಾಲ ಹೊಂದುವುದೇ ಇಲ್ಲವಂತೆ. ಹಾಲು-ಮೊಸರು-ಮಜ್ಜಿಗೆ ಎಲ್ಲ ಬಿಟ್ಟೆ. ಆದರೂ ಹೊಟ್ಟೆ ಮುರಿತ, ಭೇದಿ, ಅಸಿಡಿಟಿ ನಿಲ್ಲದೆ ತುಂಬಾ ತೊಂದರೆ ಶುರುವಾಯಿತು. ರಾತ್ರಿ ಇಡೀ ನಿದ್ರೆ ಇಲ್ಲ. ಒಂದು ದಿನ ಆಕಸ್ಮಿಕವಾಗಿ ಆ ಹೊಸ ಮಾತ್ರೆಯ ಮುದ್ರಿತ ಮಾಹಿತಿ ಕಾಣಿಸಿತು. ಕುತೂಹಲದಿಂದ ಓದಿದೆ. ಅದರಲ್ಲಿ ಬರೆದಿದ್ದರು. ಈ ಮಾತ್ರೆಯ ಅಡ್ಡ ಪರಿಣಾಮವಾಗಿ ಅಸಿಡಿಟಿಯಾಗುತ್ತದೆ. ಲಿವರ್‌ಗೆ ಸಹ ತೊಂದರೆಯಾಗಬಹುದು ಅಂಥ ಲಕ್ಷಣ ಕಂಡಾಗ ತಕ್ಷಣ ನಿಲ್ಲಿಸಿರಿ ಎಂಬ ಸೂಚನೆ ಇತ್ತು. ಆದರೆ ಈಗೇನು ಮಾಡುವುದು ? ಹಳೆಯ ಮಾತ್ರೆ ಇರಲಿಲ್ಲ. ವೈದ್ಯರು ಮಾತ್ರೆ ಬದಲಾಯಿಸುವ ಅಗತ್ಯವೇ ಇರಲಿಲ್ಲ. ಇಲ್ಲಿ ವೈದ್ಯರು ನೋಡುವುದಿಲ್ಲ. ಮೆಡಿಕಲ್ ಸ್ಟೋರ್‌ದವರು ವೈದ್ಯರ ಅಧಿಕೃತ ವರದಿ ಇಲ್ಲದೆ ಔಷಧಿ ಕೊಡುವುದಿಲ್ಲ. ನಮ್ಮ ಆತಿಥೇಯರು ಚಟಪಟಿಸಿದರು. ಯೋಗೀಶ್ವರಿ ಅವರು ವೆಬ್ ಸೈಟಲ್ಲಿ ಎರಡೂ ಮಾತ್ರೆಗಳ ವಿವರ ಹುಡುಕಿದರು. ನಾನು ಮೊದಲಿನಿಂದ ತೆಗೆದುಕೊಳ್ಳುತ್ತಿದ್ದ ಗ್ಲೂಕೋಟ್ರಾಲ್ ಬಗ್ಗೆ ವೆಬ್‌ದಲ್ಲಿ ವಿವರವಾದ ಮಾಹಿತಿ ಇದೆ. ಈ ಹೊಸ ಮಾತ್ರೆಯ ವಿವರ ವೆಬ್ ಸೈಟ್‌ದಲ್ಲಿ ಇಲ್ಲ. ಅದೂ ಅಮೆರಿಕಾದ ತಯಾರಿಕೆಯೆ! ಆಗ ಯೋಗೀಶ್ವರಿ ಅಂದರು, ಇಲ್ಲಿ ಸರ್ಕಾರವು ಔಷಧಿ ಕಂಪೆನಿಗಳನ್ನು ನಿಯಂತ್ರಣದಲ್ಲಿಟ್ಟಿದೆ. ಇಲ್ಲಿ ಅನುಮತಿ ಕೊಡದೆ ಇರುವ ಸಾಮಗ್ರಿಗಳನ್ನು ಕಂಪೆನಿಗಳು ಭಾರತಕ್ಕೆ ಸಾಗಹಾಕುವರು. ಅಲ್ಲಿ ಜನರು ಏನನ್ನೂ ಗಮನಿಸದೆ ವೈದ್ಯರು ಬರೆದುದನ್ನು ತಿನ್ನುವರು. ಔಷಧಿಯ ದಿನಾಂಕ ಮುಗಿದಿರುವುದನ್ನು ಸಹ ಓದರು. ಅಂಥ ಯಾವುದೋ ಔಷಧಿ ಇದು. ನನಗೆ ಬೇಕಾದ ಔಷಧಿ ಇಲ್ಲಿ ಸಿಗುತ್ತಿತ್ತು. ಆದರೆ ವೈದ್ಯರ ಅನುಮತಿ ಬೇಕು. ಇವರ ಬಂಧುವಾದ ಡಾ|| ಕೋಮಲಾ ಎನ್ನುವವರಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಅವರ ಪರಿಣತಿ ಬೇರೆ ಕ್ಷೇತ್ರದಲ್ಲಿ. ಅವರು ತಮ್ಮ ಮಿತ್ರರಾದ ಮತ್ತೊಬ್ಬ ಫಿಸಿಷಿಯನ್ ಅವರನ್ನು ಸಂಪರ್ಕಿಸಿ, ವಿವರ ಪಡೆದುಕೊಂಡರು. ಔಷಧಿ ಕಳಿಸಲು ಕೊರಿಯರ್ ಮೂಲಕ ಕನಿಷ್ಠ ಎರಡು ದಿನವಾದರೂ ಹಿಡಿಯುತ್ತದೆ ಕಡೆಗೆ ವಾಲ್‌ಗ್ರೀನ್ ಎಂಬ ಒಂದು ಮೆಡಿಕಲ್ ಸ್ಟೋರ್‌ದ ಫೋನ್ ನಂಬರ್ ಪಡೆದು, ಮಾತನಾಡಿ,

ಇ-ಮೇಲ್‌ದಲ್ಲಿ ನನ್ನ ವಿವರ ತಿಳಿಸಿ ಔಷಧಿ ಸೂಚಿಸಿದರು. ಅಲ್ಲಿಯ ವಾಲ್ ಗ್ರೀನ್ ನಿಂದಲೂ ಈ ಶಾಖೆಗೆ ಮಾಹಿತಿ ಬಂತು. ಡಾ|| ಕೋಮಲ ಅವರ ಗ್ರಾಹಕ (customer)ರೆಂದು. ವೈದ್ಯರಿಗೆ ಸಿಗುವ ರಿಯಾಯಿತಿ ದರದಲ್ಲಿ ಸಿಕ್ಕ ಔಷಧಿಯನ್ನು ನನ್ನ ಪಾಸ್‌ಪೋರ್ಟ್ ಒಯ್ದು, ತೋರಿಸಿ ರಾಧಿಕಾ ಖರೀದಿಸಿ ತಂದರು. ಇಲ್ಲಿ ಔಷಧಿ ಮಾತ್ರವಲ್ಲ ಎಲ್ಲ ವಸ್ತುಗಳ ಬೆಲೆಯೂ ಜಾಸ್ತಿ.

ಗ್ಲೋಬಲೈಸೇಷನ್- ಜಾಗತೀಕರಣದಿಂದ ಕೆಲವು ಲಾಭಗಳಿವೆ, ಕೆಲವು ಹಾನಿಗಳಿವೆ. ಅಮೆರಿಕಾದ ಕಂಪೆನಿಗಳೇ ಇಲ್ಲಿ ತಯಾರು ಮಾಡುವ ಔಷಧಿಗಳನ್ನು ನಮ್ಮ ದೇಶದಲ್ಲಿಯು ತಯಾರು ಮಾಡುತ್ತಾರೆ. ಅಲ್ಲಿಯ ಬೆಲೆ ಇಲ್ಲಿಗೆ ಹೋಲಿಸಿದರೆ ಕಮ್ಮಿ. ಏಕೆಂದರೆ ಅಲ್ಲಿ ಇನ್‌ವೆಸ್ಟ್‌ಮೆಂಟ್ ಮತ್ತು ಸಂಬಳದ ವೆಚ್ಚ ಕಡಿಮೆ. ಇಲ್ಲಿ ಎರಡೂ ಜಾಸ್ತಿ. ವಿದೇಶಿಯರ ಪೈಪೋಟಿ ಮುಂದೆ ಸ್ಪರ್ಧಿಸಲಾರದೆ ನಮ್ಮ ದೇಶೀಯ ಕಂಪೆನಿಗಳು ಸೊರಗಿ ಹೋಗುತ್ತವೆ. ಆದರೆ ಜನರಿಗೆ ಒಳ್ಳೆಯ ಸಾಮಾನು ಸಿಗುತ್ತವೆ. ನಮ್ಮ ದೇಶೀಯ ಕಂಪೆನಿಗಳು ಉತ್ಪತ್ತಿ ಮಾಡುತ್ತಿದ್ದ ಸಾಮಾನು ಹೇಗಿದ್ದರೂ ಅವನ್ನೇ ಗ್ರಾಹಕ ಕೊಳ್ಳಬೇಕಿತ್ತು. ಈಗ ಇವರು ವಿದೇಶೀ ಕಂಪೆನಿಗಳೊಡನೆ ಸ್ಪರ್ಧಿಸಬೇಕಾದರೆ ಉತ್ತಮ ಗುಣಮಟ್ಟದ ವಸ್ತುಗಳನ್ನು ಕೊಡುವುದು ತೀರಾ ಅನಿವಾರ್ಯವಾಗುತ್ತದೆ.

ನನ್ನ ರಕ್ತದೊತ್ತಡ ಬರುವ ಮುನ್ನ ಜಾಸ್ತಿ ಇತ್ತು. ಈಗ ಹೇಗಿದೆಯೋ ಎಂದು ನೋಡಬೇಕೆಂದು ಯೋಗೀಶ್ವರಿ ವಾಲ್‌ಗ್ರೀನ್ಸ್‌ಗೆ ಕರೆದೊಯ್ದರು. ಬಹುದೊಡ್ಡ ಅಂಗಡಿ, ಜಗಮಗಿಸುವ ವಿದ್ಯುತ್ ಬೆಳಕು ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತಿತ್ತು. ಅಲ್ಲಿ ಸ್ವಯಂಚಾಲಿತ ಯಂತ್ರವಿತ್ತು. ಆ ಯಂತ್ರದ ಮುಂದಿನ ಕುರ್ಚಿಯಲ್ಲಿ ಕುಳಿತು, ಎಡಪಕ್ಕದಲ್ಲಿದ್ದ ಕೊಳವೆಯಲ್ಲಿ ತೋಳನ್ನು ತೂರಿಸಿ ಕುಳಿತು, ಸ್ಟಾರ್ಟ್ ಬಟನ್ ಒತ್ತಿದರೆ, ಕೊಳವೆಯ ಒಳಗಿರುವ ರಬ್ಬರ್ ಚೀಲ ಉಬ್ಬಿ ನಮ್ಮ ತೋಳನ್ನು ಒತ್ತಿ ಹಿಡಿಯುತ್ತದೆ. ನಮ್ಮಲ್ಲಿ ವೈದ್ಯರು, ತೋಳಿಗೆ ಸುತ್ತಿ ರಬ್ಬರ್ ಬಲೂನ್ ಒತ್ತಿದಾಗ ಆಗುವಂಥ ಅನುಭವ ಆಗುತ್ತದೆ. ರಕ್ತದೊತ್ತಡ ಎಷ್ಟಿದೆ ಎಂಬುದು ಎದುರಿನಲ್ಲಿ ಇರುವ ಯಂತ್ರದಲ್ಲಿ ಮುದ್ರಿತವಾಗಿ ಕಾಣುತ್ತದೆ. ನನ್ನ ರಕ್ತದೊತ್ತಡ ನಾರ್ಮಲ್‌ಗೆ ಬಂದುದು ಎಲ್ಲರಿಗೂ ಸಂತೋಷ ತಂದಿತು. ಇಲ್ಲಿ ವೈದ್ಯರನ್ನು ಮಾತನಾಡಿಸಲು (Consultation) 25 ಡಾಲರ್, ಪರೀಕ್ಷಿಸಲು 50 ಡಾಲರ್ ಪಡೆಯುವರಂತೆ. ಇಂಥ ಯಂತ್ರ ಉಚಿತವಾಗಿ ಪರೀಕ್ಷಿಸುವುದರಿಂದ ಜನರಿಗೆ ಬಹಳ ಅನುಕೂಲ.

ಅಲ್ಲಿಂದ ಆಟೋಮ್ಯಾಟಿಕ್ ಪೆಟ್ರೋಲ್ ಬಂಕ್‌ಗೆ ಹೋಗಲಾಯಿತು. ಅವರವರೇ ಹಾಕಿಕೊಳ್ಳಬೇಕು. ಪೆಟ್ರೋಲ್ ಬಹಳ ಸೋವಿ. ತಮಗೆ ಎಷ್ಟು ಬೇಕೋ ಅಷ್ಟು ಇಂಧನಕ್ಕೆ ಕ್ರೆಡಿಟ್ ಕಾರ್ಡ್ ಮೂಲಕ ಹಣ ಕೊಟ್ಟು ನಳಿಕೆಯನ್ನು ಹಿಡಿದರೆ ಅದು ಪೆಟ್ರೋಲ್ ತುಂಬುತ್ತದೆ. ಅಲ್ಲಿಂದ ಕಾರ್ ವಾಷ್ ಸೆರ್ವೀಸ್‌ಗೆ ಹೋದೆವು. ನಾವು ಕಾರಿನಲ್ಲಿ ಒಳಗೇ ಕುಳಿತೇ ತೊಳೆಸಿಕೊಳ್ಳುವುದು ವಿಶೇಷ ಅನುಭವ. ಹೊರಗೆ ಕ್ರೆಡಿಟ್ ಕಾರ್ಡ್ ಮೂಲಕ ಹಣ ಕೊಟ್ಟು ಸ್ವಯಂ ಚಾಲಿತ ಯಂತ್ರ ಸೂಚನೆ ಕೊಡುತ್ತಲೇ ಕಾರನ್ನು ವಿಶಿಷ್ಟ ಜಾಗದಲ್ಲಿ ನಿಲ್ಲಿಸಬೇಕು. ಆಗ ಯಂತ್ರಗಳು ನೀರನ್ನು ಸುರಿಸುತ್ತ ಮುಂದಿನಿಂದ ಹಿಂದಕ್ಕೆ ಸಾಗುತ್ತವೆ. ನಂತರ ಸೋಪಿನ ತುಂತುರನ್ನು ಸುರಿಸುತ್ತವೆ. ಬ್ರಷ್‌ಗಳು ಬಂದು ಉಜ್ಜುತ್ತ ಮುಂದಿನಿಂದ ಹಿಂದಕ್ಕೆ ಸಾಗುತ್ತವೆ. ಮತ್ತೊಮ್ಮೆ ನೀರನ್ನು ಸುರಿಸಿ ತೊಳೆಯುತ್ತವೆ. ಮುಂದೆ ಒಣಗಿಸುವ ಯಂತ್ರ ಇರುತ್ತದೆ. ತೊಳೆಯುವ ಕ್ರಿಯೆ ಮುಗಿಯುತ್ತಲೇ ಕಾರನ್ನು ಮುಂದಕ್ಕೆ ಚಲಿಸಿದರೆ

ಒಣಗಿಸುವ ಯಂತ್ರಗಳು ಬಿಸಿಗಾಳಿ ಬಿಟ್ಟು ಕ್ಷಣಾರ್ಧದಲ್ಲಿ ಒಣಗಿಸುತ್ತವೆ. ಇಷ್ಟೆಲ್ಲ ಕೆಲಸವನ್ನು ಹತ್ತರಿಂದ ಹದಿನೈದು ನಿಮಿಷಗಳಲ್ಲಿ ಯಂತ್ರವೂ ಪೂರೈಸಿ ಬಿಡುತ್ತದೆ.

ಮಾಲ್ಸ್ (Malls) ಎಂಬ ಬೃಹತ್ ಅಂಗಡಿಗಳಿರುತ್ತವೆ. ಇಲ್ಲಿ ಎಲ್ಲ ಸಿದ್ಧ ವಸ್ತುಗಳು ಸಿಗುತ್ತವೆ. ಅವು ಹೇಗಿರುತ್ತವೆ ಎಂಬುದನ್ನು ತೋರಿಸಲು ಒಂದು ರವಿವಾರ ಯೋಗೀಶ್ವರಿಯವರು ವಾಲ್ ಮಾರ್ಟ್ ಎಂಬಲ್ಲಿಗೆ ಕರೆದೊಯ್ದರು. ಹವಾ ನಿಯಂತ್ರಿತ ವಿಶೇಷ ಅಂಗಡಿಗಳು. ಸಿದ್ಧಪಡಿಸಿದ ಬಟ್ಟೆ ಚಪ್ಪಲಿ-ಷೂಗಳು, ಕಾರ್ಪೆಟ್‌ಗಳು, ರಗ್ಗುಗಳು, ಮಕ್ಕಳ ಆಟಿಕೆಗಳು, ಹೊಲಿಯದೆ ಇರುವ ಬಟ್ಟೆಯ ಥಾನ್‌ಗಳು - ಹೀಗೆ ವೈವಿಧ್ಯಮಯ ಸಾಮಾನು. ಇಲ್ಲಿ ಕೆಲವು ಸಲ ಬಹಳ ಕಡಿಮೆ ಬೆಲೆಯಲ್ಲಿ ವಸ್ತುಗಳು ಸಿಗುತ್ತವೆ. ಬೇಗನೆ ಮಾರಾಟವಾಗದೆ ಉಳಿದ ಸಾಮಾನು, ಹೆಚ್ಚಿನ ಭಾಗ ಮಾರಾಟವಾಗಿ ಸ್ವಲ್ಪವೇ ಉಳಿದ ಬಟ್ಟೆ ಮುಂತಾದವು, ಇವನ್ನು ಪ್ರತ್ಯೇಕವಾಗಿ ಇಟ್ಟಿರುತ್ತಾರೆ.

ಇಂಥ ದೊಡ್ಡ ಅಂಗಡಿಗಳಲ್ಲಿ ಎಲ್ಲೆಡೆಯಲ್ಲಿ ಅಂಗಡಿಯವರು ಇರುವುದಿಲ್ಲ. ತಳ್ಳುವ ಗಾಡಿ ತೆಗೆದುಕೊಂಡು ಜನರು ತಿರುಗಾಡಿ ತಮಗೆ ಬೇಕಾದ ಸಾಮಾನು ತೆಗೆದುಕೊಳ್ಳುವರು. ಕಡೆಯಲ್ಲಿ ಹೋಗಿ ಬಿಲ್ ಮಾಡಿಸಿ ಹಣ ಕೊಡುವರು, ಜನರ ಪ್ರಾಮಾಣಿಕತೆ ಮೆಚ್ಚಿಕೊಳ್ಳಬೇಕು. ಜೊತೆಗೆ ಎಲ್ಲೆಡೆ ಕ್ಯಾಮರಗಳು ಗಮನಿಸುತ್ತಿರುತ್ತವಂತೆ ಮತ್ತು ಹಣ ಕೊಡುವಾಗ ಒಂದು ಯಂತ್ರ ಸದ್ದು ಮಾಡುತ್ತ ಎಲ್ಲ ಸಾಮಾನಿಗೆ ಬಿಲ್ ಮಾಡಿಸಿರುವರೇ ಎಂಬುದನ್ನು ಚೆಕ್ ಮಾಡಿ, ಹಣ ಕೊಡದಿದ್ದರೆ ಕೂಗಿ ಸೂಚನೆ ಕೊಡುವುದಂತೆ. ಆದರೆ ನನಗೆ ಉಳಿದ ಸಂದೇಹವೇನೆಂದರೆ ಗಡಿಯಾರಗಳು, ಚೈನ್‌ಗಳಂತಹ ಚಿಕ್ಕ ಚಿಕ್ಕ ಸಾಮಾನುಗಳನ್ನು ಪರ್ಸ್ ಅಥವಾ ಜೇಬುಗಳಲ್ಲಿ ಹಾಕಿಕೊಂಡರೆ ಆ ಯಂತ್ರ ಹೇಗೆ ಕಂಡು ಹಿಡಿಯುವುದು ? ಎಂಬುದು.

ಸರ್ಕಾರಗಳ ಜನಪರ ಕಾಳಜಿ

ಇರಾಕ್‌ನಂತಹ ದೇಶಗಳ ಮೇಲೆ ಕಾಲುಕೆರೆದು ಜಗಳ ತೆಗೆದು ಯುದ್ಧ ಮಾಡುವ ಪ್ರವೃತ್ತಿಯ ಅಮೆರಿಕಾದ ಜೀವದಯೆಯ ಬಗ್ಗೆ ಜಗತ್ತಿನ ಅನೇಕ ಜನರಲ್ಲಿ ಸಂದೇಹ ಕಾಡುತ್ತಿದೆ. ಆದರೆ ತನ್ನ ದೇಶದ ಜನತೆಯ ಜೀವ ರಕ್ಷಣೆಯ ವಿಷಯದಲ್ಲಿ ಇಲ್ಲಿಯ ಸರ್ಕಾರಗಳು, ನಗರಾಡಳಿತಗಳು ಬಹಳ ಕಾಳಜಿ ವಹಿಸುತ್ತವೆ. ನಾನಿಲ್ಲಿಗೆ ಬಂದು ಸುಮಾರು ಒಂದು ತಿಂಗಳಿನ ಮೇಲೆ ಬಿರುಗಾಳಿ ಎದ್ದಿತು. ಇಲ್ಲಿ ಒಂದು ನ್ಯೂಸ್ ಚಾನೆಲ್ 15 ನಿಮಿಷಕ್ಕೊಮ್ಮೆ ಹವಾಮಾನ ವರದಿ ನೀಡುತ್ತದೆ. ಸತತವಾಗಿ ವಾರ್ತೆಗಳನ್ನು ಜಾಹಿರಾತುಗಳ ಜೊತೆಗೆ ಬಿತ್ತರಿಸುತ್ತಿರುತ್ತದೆ. ಆಗ ಬಿರುಗಾಳಿಯ ಸಂಚಾರದ ವಿವರಗಳನ್ನು ಸತತವಾಗಿ ನೀಡುತ್ತ ಜನರನ್ನು ಅಪಾಯಕಾರಿ ಸ್ಥಳಗಳಿಂದ ಸ್ಥಳಾಂತರಿಸಿದರು. ಆಸ್ಟಿನ್ ಮೇಲೆ ಹಾಯುವ ಮುನ್ಸೂಚನೆ ಇತ್ತು. ಆದರೆ ಆ ಬಿರುಗಾಳಿ ಆಸ್ಟಿನ್ ಕಡೆಗೆ ಹಾಯದೆ ದಿಕ್ಕು ಬದಲಿಸಿ ಮುನ್ನಡೆಯಿತು. ಈ ಅನಿರೀಕ್ಷಿತ ತಿರುವಿನಿಂದ ಕೆಲವು ಕಡೆ ಸಿಕ್ಕಾಪಟ್ಟೆ ಮಳೆ ಸುರಿಯಿತು. ಇಲ್ಲಿ ಮಳೆ ಬರುವಾಗ ಮೋಡಗಳು ಬಹಳ ಕೆಳಗೆ ಇರುವಂತೆ, ಮಿಂಚು, ಗುಡುಗು, ಸಿಡಿಲು ಬಹಳ ಹತ್ತಿರದಲ್ಲೇ ಹೊಡೆಯುವಂತೆ ಭಾಸವಾಗುತ್ತದೆ. ಅಂಥ ಒಂದು ದಿನದಲ್ಲಿ 118 ಸಿಡಿಲುಗಳು ಹಾರಿದುದಾಗಿ ಮರುದಿನ ವಾರ್ತೆಯಲ್ಲಿ ತಿಳಿಸಿದರು. ಬಿರುಗಾಳಿ ಬೀಸಿದಲ್ಲಿ ಮನೆಯ ಹೆಂಚು, ಗೆರೇಜುಗಳ ತಗಡು ಹಪ್ಪಳದಂತೆ ಮುರಿದು ಹಾರಿ ಹೋದವು. ಕಿಟಕಿ ಗಾಜುಗಳು ಪುಡಿಪುಡಿಯಾಗುತ್ತಿದ್ದವು, ನದಿಗಳು ಉಕ್ಕಿ ಹರಿದು ದಂಡೆಯಲ್ಲಿದ್ದವರ ಮನೆಗಳು

ಜಲಾವೃತವಾದವು. ಅಂಥ ಪರಿಸ್ಥಿತಿಯಲ್ಲಿ ಅರೆ ಸೇನಾಪಡೆಗಳು, ಸ್ವಯಂ ಸೇವಕ ಸಂಸ್ಥೆಗಳವರು ಸ್ಟೀಮರ್ ಒಯ್ದು ಜನರನ್ನು ರಕ್ಷಿಸುತ್ತಿದ್ದರು. ಕೆಲವು ಕಡೆ ಹೆಲಿಕಾಪ್ಟರ್ ಬಳಸಲಾಯಿತು. ಮನೆ ಇಲ್ಲದವರಿಗೆ ಸಾಮೂಹಿಕ ವಸತಿ ಗೃಹಗಳಿದ್ದು ಅವರ ಸಾಮಾನು ಇಟ್ಟುಕೊಳ್ಳಲು ಸ್ಟೀಲ್ ಅಲ್ಮೇರಾಗಳನ್ನು ಕೊಟ್ಟಿರುವುದನ್ನು ಒಮ್ಮೆ ಟಿ.ವಿಯಲ್ಲಿ ನೋಡಿದೆ. ಇಲ್ಲಿಯೂ ಈಗ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಲಿದೆ. ಅಮೆರಿಕಾದ ಆರ್ಥಿಕ ಸ್ಥಿತಿ ಕುಸಿಯುತ್ತಿರುವುದಾಗಿ ಮಾತನಾಡುತ್ತಿದ್ದಾರೆ.

808 ನೆಯ ಬಸವ ಪಂಚಮಿ ಆಚರಣೆ

ಮೊಟ್ಟ ಮೊದಲ ಬಾರಿಗೆ ವಿದೇಶದಲ್ಲಿ ಬಸವ ಪಂಚಮಿ, ಅದೂ ಅದ್ದೂರಿಯಾಗಿ ಆಚರಿಸಲ್ಪಟ್ಟುದು ನನಗೆ ಅತೀವ ಸಂತೋಷ ತಂದಿದೆ. ಯೋಗೀಶ್ವರಿಯವರು ವಿವಿಧ ವ್ಯಕ್ತಿಗಳು, ಸಂಘ-ಸಂಸ್ಥೆಗಳವರನ್ನು ಸಂಪರ್ಕಿಸಿ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ನಾನು ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಆಸ್ಟಿನ್ ಹಿಂದು ಸೆಂಟರ್ ನನ್ನನ್ನು ಬರಮಾಡಿಕೊಂಡು ಒಂದು ವಿಶೇಷ ಕಾರ್ಯಕ್ರಮ ಇರಿಸಿಕೊಳ್ಳಬೇಕು ಎಂದು ಚಿಂತನೆ ಮಾಡಿದಾಗ, ಬಸವ ಜಯಂತಿ ಎಂದು ಇಡುತ್ತೇವೆ ಎಂದಿದ್ದಾರೆ. ಆಗ ಯೋಗೀಶ್ವರಿ ಅವರು, "ಬಸವ ಜಯಂತಿ ಆಗಿ ಎರಡು ತಿಂಗಳ ಮೇಲಾಯಿತು. ಬಸವ ಪಂಚಮಿ ಎಂದು ಇಟ್ಟುಕೊಳ್ಳಿರಿ. ಆಗಸ್ಟ್ 2 ರ ಆಸುಪಾಸಿನಲ್ಲೇ ಬಸವ ಪಂಚಮಿ ಬರುತ್ತದೆ" ಎಂದು ಹೇಳಿದ್ದಾರೆ. ನನಗೆ ಅಂದೇ ಬಸವ ಲಿಂಗೈಕ್ಯ ದಿನ ಎಂಬುದು ತಿಳಿದಿರಲಿಲ್ಲ, ಯೋಗೀಶ್ವರಿ ಅವರಿಗೂ ತಿಳಿದಿರಲಿಲ್ಲ. ಏಕೆಂದರೆ, ಲಗೇಜ್ ಜಾಸ್ತಿಯಾಯಿತೆಂದು ಮುಂಬೈ ಏರ್‌ಪೋರ್ಟ್‌ಲ್ಲಿ ಸೂಟ್‌ಕೇಸನಲ್ಲಿದ್ದ ಸಾಮಾನು ತೆಗೆದು ಹಾಕುವಾಗ ಅಲ್ಲಿಯ ಕ್ಯಾಲೆಂಡರ್ ಸಹ ವಾಪಸ್ಸು ಹೋಗಿದ್ದವು. ಆಗಸ್ಟ್ ಒಂದರಂದು ಶರಣೆ. ಲೀಲಾವತಿ ಕರಡಿಯವರ ಇ-ಮೇಲ್ ಬಂದಾಗ ಅದರಲ್ಲಿ ಬಸವ ಪಂಚಮಿ ಶನಿವಾರ ಬಂದಿದೆ, ಅಂದು ಪೂಜೆ ಇದೆ - ಭಾನುವಾರದಂದು ಬಸವ ಲಿಂಗೈಕ್ಯ ದಿನ, ನೀಲಾಂಬಿಕಾ ದಿನ ಎರಡನ್ನೂ ಬಸವ ಮಂಟಪದಲ್ಲಿ ಆಚರಿಸುತ್ತಿದ್ದೇವೆ ಎಂದಿತ್ತು. ಇದನ್ನು ಓದಿ, ನಮಗಿಬ್ಬರಿಗೂ ರೋಮಾಂಚನವಾಯಿತು. ನಮಗೆ ಗೊತ್ತಿಲ್ಲದಂತೆ ಆಗಸ್ಟ್ 2 ರಂದು ಬಸವ ಲಿಂಗೈಕ್ಯ ದಿನ ಒದಗಿ ಬಂದಿತ್ತು.

"ಎಂಥಾ ವಿಚಿತ್ರ, ಪವಾಡ ಸದೃಶ! ವಿದೇಶದಲ್ಲಿ ಬಸವಣ್ಣನವರು ನಿಮ್ಮ ಮೂಲಕ ಬಸವ ಪಂಚಮಿ ಆಚರಿಸಿಕೊಳ್ಳುತ್ತಿದ್ದಾರೆ. ನೀವೇ ಆ ಸಲಹೆ ಕೊಟ್ಟವರು" ಎಂದು ಯೋಗೀಶ್ವರಿಯವರನ್ನು ಅಭಿನಂದಿಸಿದೆ. ವೆಬ್ ಮಿಡಲ್ ಸ್ಕೂಲ್‌ದ ವಿಶಾಲವಾದ ಕಾರ್ಯಕ್ರಮ ಸಭಾಂಗಣದಲ್ಲಿ ಹಿಂದು ಸೆಂಟರ್‌ದವರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಆಸ್ಟಿನ್ ನಗರದ ಸೇಂಟ್ ಜಾನ್ ಅವೆನ್ಯೂದಲ್ಲಿರುವ ಬಹುದೊಡ್ಡ ಶಾಲೆಯದು. ವೇದಿಕೆಯ ಮೇಲೆ ಒಂದು ಟೇಬಲ್ ಇಟ್ಟು, ಅಭಯ ಹಸ್ತದ ಭಾವಚಿತ್ರ ಇಟ್ಟು ಸ್ವತಃ ಕೈಯಿಂದ ಹೂಮಾಲೆ ಮಾಡಿ ಹಾಕಿ ಯೋಗೀಶ್ವರಿಯವರು ಭಾವಚಿತ್ರಕ್ಕೆ ಅಲಂಕಾರ ಮಾಡಿದ್ದರೆ, ಬಸವಣ್ಣನವರು ಜೀವಂತಗೊಂಡು ಮುಗುಳ್ನಗುವಂತೆ ಭಾಸವಾಗುತ್ತಿತ್ತು. ನಾನೂ ಮನದಲ್ಲೇ ಸವಿಯುತ್ತ ಮತ್ತೆ ಮತ್ತೆ ನೋಡುತ್ತಿದ್ದೆ. ಭಾವಜೀವಿಯಾದ ಅವರು ಸಹ ಅಲ್ಲಿ ಇಲ್ಲಿ ದೂರನಿಂತು ನೋಡಿ ಆನಂದಿಸುತ್ತಲಿದ್ದರು. ಪೂಜೆಯು ಬಹಳ ಚೆನ್ನಾಗಿ ನೆರವೇರಿತು; ಪುಷ್ಪ ವೃಷ್ಟಿ ಮಾಡಿಸಿದೆ. ಸುಚೇತಾ ಪ್ರಭುದೇವ, ಜ್ಯೋತಿ ವಿಶ್ವಾಸ್, ಉಮೇಶ್, ಮಾಯಾ ಗುಗ್ಗರಿ ಮುಂತಾದವರು

ಪೂಜೆ ಮಾಡಿದರು. ಸಭೆಯಲ್ಲಿದ್ದವರು ಸಾಲಾಗಿ ಬಂದು ಪುಷ್ಪ ವೃಷ್ಟಿ ಮಾಡಲು ತಿಳಿಸಿದೆವು. ನಂತರ ನನ್ನ ಭಾಷಣ. ನೂರಾರು ಜನ ಸೇರಿದ್ದರು, ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಜನರು ಮಾತ್ರವಲ್ಲ ಶ್ರೀಲಂಕಾದವರು ಸಹ ಬಂದಿದ್ದರು. ಸಾಮೂಹಿಕ ಪ್ರಾರ್ಥನೆ ಮತ್ತು ಭಜನೆ ಮಾಡಿಸಿದೆ. ಎಲ್ಲ ಭಾಷಿಕರೂ ಇದ್ದುದರಿಂದ ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲೀಷ್ - ನಾಲ್ಕೂ ಭಾಷೆಗಳಲ್ಲಿ ಭಜನೆ ಹೇಳಿಕೊಟ್ಟೆ. ನಂತರ ಇಂಗ್ಲೀಷ್‌ನಲ್ಲಿ ಭಾಷಣ. 808ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ಕಾರ್ಯಕ್ರಮವನ್ನು ಜ್ಯೋತಿ ಹೊತ್ತಿಸಿ ಉದ್ಘಾಟಿಸಿದ ಬಳಿಕ "ಬಸವಣ್ಣನವರ ಸಾರ್ವಕಾಲಿಕ ಸಂದೇಶ" ಎಂಬ ವಿಷಯದ ಮೇಲೆ ಉಪನ್ಯಾಸ. "Life is a great boon, living is an art" ಎಂಬ ವಿಷಯದಿಂದ ಆರಂಭಿಸಿ, ಪಾಶ್ಚಿಮಾತ್ಯ ತತ್ವಜ್ಞಾನಿಗಳು ಭಾರತೀಯ ತತ್ತ್ವಜ್ಞಾನವನ್ನು ಜೀವನ ನಿರಾಕರಣ ಸಿದ್ಧಾಂತದಿಂದ ಕೂಡಿದುದೆಂದು ಆರೋಪಿಸುವರು. ಆದರೆ ಭಾರತದ ಶ್ರೇಷ್ಠ ಸಮಾಜ ಸುಧಾರಕರೂ, ತತ್ತ್ವಜ್ಞಾನಿಗಳೂ ಆದ ಬಸವಣ್ಣನವರು ಈ ಜಗತ್ತು ಮತ್ತು ಜೀವನವನ್ನು ನಿಷೇಧಾತ್ಮಕವಾಗಿ ನೋಡದೆ ಸಕಾರಾತ್ಮಕವಾಗಿ ನೋಡಿದುದು ಮಾತ್ರವಲ್ಲದೆ ಜೀವನವನ್ನು, ಜಗತ್ತನ್ನು ದೈವೀಕರಿಸಬೇಕೆಂಬ ಸಿದ್ಧಾಂತವನ್ನು ಬೋಧಿಸಿದ್ದಾರೆ" ಎಂದು ವಿವರಿಸಿದೆ.

ವೈಶಾಖ ಮಾಸದ ಅಕ್ಷಯ ತೃತೀಯದಂದು ರೋಹಿಣಿ ನಕ್ಷತ್ರದಲ್ಲಿ (30-4-1134)ರಲ್ಲಿ ಜನಿಸಿದ ಬಸವಣ್ಣನವರು 62 ವರ್ಷ 3 ತಿಂಗಳು 2 ದಿವಸಗಳ ಕಾಲ ಈ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು (30-7-1196) ಮರ್ತ್ಯಲೋಕದ ಮಣಿಹ ಪೂರೈಸಿ ಕರ್ತನ ಕರೆ ಪಡೆದು ಇಚ್ಛಾಮರಣಿಯಾಗಿ ಯೋಗವಿಜ್ಞಾನದ ಮಾರ್ಗದಲ್ಲಿ ಶರೀರವನ್ನು ವಿಸರ್ಜಿಸಿ 'ಉರಿಯುಂಡ ಕರ್ಪುರದಂತೆ ಹೇಗೆ ದೇವನಲ್ಲಿ ಒಂದಾದರು' ಎಂಬುದನ್ನು ವಿವರಿಸಿದೆ.

"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲುವ ನಾಣ್ಯಗಳು ನಾವಾಗಿ ಬದುಕಬೇಕು. ಇದಕ್ಕೆ ಪೋಷಕವಾದುದು ಮಾನವ ಜೀವನ. ಆದ್ದರಿಂದ ದೇವರನ್ನು ಒಲಿಸಲು ಸಾಧನವಾಗುವ ಪ್ರಸಾದ ಕಾಯ ಈ ಶರೀರ" ಎಂಬ ಉದಾತ್ತ ಸಂದೇಶ ಬಸವಣ್ಣನವರದು.

ಸಿಗ್ಮಡ್ ಫ್ರಾಯಿಡ್ ಮನೋವಿಜ್ಞಾನ ಕ್ಷೇತ್ರದಲ್ಲಿ ಬಹಳ ಮಹತ್ವಪೂರ್ಣ ಸಂಶೋಧನೆ ಮಾಡಿದ, ಕನಸುಗಳ ಬಗ್ಗೆ ವಿವರ ಕೊಟ್ಟುದಲ್ಲದೆ ದೇಹಕ್ಕೆ ಕಾಯಿಲೆ ಬರುವಂತೆ ಮನಸ್ಸಿಗೂ ಕಾಯಿಲೆ ಬರುವುದು ಎಂಬುದನ್ನು ಕಂಡು ಹಿಡಿದು ಇಂದ್ರಿಯ ಶಕ್ತಿಯನ್ನು ದಮನ ಮಾಡದೆ, ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದ. ಇದು ನಿಜ, ಆದರೆ ಇಂದ್ರಿಯ ಶಕ್ತಿಯನ್ನು ಸಹಜ ಮಾರ್ಗದಲ್ಲಿ ಉಪಯೋಗಿಸಿಕೊಳ್ಳಲು ಇಷ್ಟಪಡದವರಿಗೆ, ಅವಕಾಶ ಇಲ್ಲದವರಿಗೆ ಫ್ರಾಯಿಡನ ಪರಿಹಾರವೇನು? ಬಸವಣ್ಣನವರು ಇಂದ್ರಿಯ ಶಕ್ತಿಯ ದೈವೀಕರಣ ಕ್ರಿಯೆಯನ್ನು ಬೋಧಿಸಿದರು.

ಲೌಕಿಕ ಜೀವನದ ಜವಾಬ್ದಾರಿ, ಕರ್ತವ್ಯಗಳಿಂದ ದೂರ ಹೋಗದೆ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಮುಂದುವರಿಯಬೇಕೆನ್ನುವವರಿಗೆ ಅರ್ಜನೆ, ಅರ್ಪಣೆ, ಅನುಭಾವ ಎಂಬ ತ್ರಿತತ್ತ್ವಗಳನ್ನು ಆಚರಣೆಯ ವಿಧಾನವನ್ನು ಕಲಿಸಿದರು ಎಂದು ಅವುಗಳ ಅಂತರಾರ್ಥವನ್ನು ವಿವರಿಸಿದೆ.

ಕಾರ್ಯಕ್ರಮದ ಆರಂಭದಲ್ಲಿ ಸೋಮನಹಳ್ಳಿ ಉಮೇಶ್ ಅವರು ಸ್ವಾಗತಿಸಿದರು. ಯೂನಿವರ್ಸಲ್ ಸೆಂಟರ್ ಆಫ್ ಬಸವ ಫಿಲಾಸಫಿಯ ಪ್ರಧಾನ ಕಾರ್ಯದರ್ಶಿ ಯೋಗೀಶ್ವರಿ ಅವರು

ಬಸವಣ್ಣನವರ ಮತ್ತು ಮಾತಾಜಿಯವರ ಪರಿಚಯ ಮಾಡಿಕೊಟ್ಟರು. "ನಾನು ಮೊದಲಿನಿಂದಲೂ ಆಧ್ಯಾತ್ಮಜೀವಿಯಾಗಿದ್ದರೂ ಪೂಜ್ಯ ಮಾತಾಜಿಯವರ ಪರಿಚಯವಾದುದು ಕೇವಲ ಹದಿನೆಂಟು ತಿಂಗಳ ಹಿಂದೆ. ಅವರ ಆಳವಾದ ತತ್ತ್ವಜ್ಞಾನ ನನ್ನನ್ನು ಆಕರ್ಷಿಸಿತು. ಅವರ ಮೂಲಕ ಬಸವಣ್ಣನವರ ವಿರಾಟ್ ಸ್ವರೂಪದ ಪರಿಚಯ ಆಗತೊಡಗಿತು. ದಿನ ನಿತ್ಯ ಎರಡು ಗಂಟೆಗಳ ಕಾಲ ಪ್ರವಚನ ಮಾಡಿದರೆ ಕನಿಷ್ಠ ಪಕ್ಷ ಸುಮಾರು 50 ದಿವಸ ಕಾಲ ಬಸವಣ್ಣನವರ ಬಗ್ಗೆ ಹೇಳಲು ಅವರಿಗೆ ಸಮಯಬೇಕು. ನಾವು ಒಂದು ಗಂಟೆ ಅವರಿಗೆ ಕೊಟ್ಟು ಬಸವಣ್ಣನವರ ಪರಿಚಯ ಮಾಡಿಕೊಡಿರಿ ಎಂದರೆ ಹೇಗೆ ಮಾಡಬಲ್ಲರು ? ಬಸವಣ್ಣನವರ ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವ ಮತ್ತು ಪರಿಪೂರ್ಣ ಸಮಾಜ ರಚನೆಯ ತತ್ತ್ವಗಳು ನನ್ನನ್ನು ಆಕರ್ಷಿಸಿದಂತೆ ಪೂಜ್ಯ ಮಾತಾಜಿಯವರ ಧೈರ್ಯ ನನ್ನನ್ನು ಆಕರ್ಷಿಸಿದೆ. ಯಾರ ಹಂಗಿಗೂ ಅಂದರೆ ಬಲಾಢ್ಯ ರಾಜಕಾರಣಿಗಳು ಮತ್ತು ಶ್ರೀಮಂತರ ಹಂಗಿಗೆ ಸಿಕ್ಕಿ ಬೀಳದೆ ಸತ್ಯವನ್ನು ನಿರ್ಭಯವಾಗಿ ಪ್ರತಿಪಾದಿಸುವ ಎದೆಗಾರಿಕೆ ಮಾತಾಜಿಯವರದು. ಅವರ ಅಸ್ಖಲಿತ ವಾಣಿಯನ್ನು ನೀವು ಕೇಳಿ ಆನಂದಿಸಿರಿ" ಎಂದು ನುಡಿದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ರಘುರಾದ ತುಪೂರಿ ಅವರು "ಪೂಜ್ಯ ಮಾತಾಜಿಯವರ ನಿರರ್ಗಳ ವಾಕ್‌ಝುರಿ ಕೇಳಿ ನಮಗೆ ಆಶ್ಚರ್ಯ-ಆನಂದ ಎರಡೂ ಉಂಟಾಗಿವೆ. ಅವರು ಧರ್ಮದ ಅಗತ್ಯವೇನು? ಎಂಬುದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಮನುಷ್ಯನು ಶರೀರ-ಮನಸ್ಸು-ಆತ್ಮಗಳೆಂಬ ಮೂರು ಘಟಕಗಳಿಂದ ಕೂಡಿದ ಚೈತನ್ಯ ಎಂಬ ವಿಷಯ ಇವತ್ತು ನನಗೆ ಸ್ಪಷ್ಟವಾಯಿತು. ಪೂಜ್ಯರ ಇನ್ನಷ್ಟು ಉಪನ್ಯಾಸ ಇರಿಸಬೇಕೆಂದು ಅನೇಕರು ಅಭಿಪ್ರಾಯಪಡುತ್ತಿದ್ದಾರೆ. ಇಲ್ಲಿ ಹಾಲ್‌ಗಳ ಬಾಡಿಗೆ ತೀರಾ ಜಾಸ್ತಿ. ಯಾವ ರೀತಿ ಇಡಿಸಬಹುದು ನೋಡೋಣ. ಅವರ ಈ ಸುತ್ತಿನ ಪ್ರವಾಸ ಮುಗಿದ ಮೇಲೆ ಇಡಿಸೋಣ ಎಂದುಕೊಂಡಿದ್ದೇವೆ" ಎಂದು ನುಡಿದರು. ಕೋ.ಚ. ಪ್ರಭುದೇವ ವಂದನಾರ್ಪಣೆ ಮಾಡಿದರು. "ಮಾತಾಜಿಯವರು ನಿರೂಪಿಸಿದ ವಿಷಯ ವಿಸ್ತಾರ ಕಂಡು ನಮಗೆಲ್ಲ ಆಶ್ಚರ್ಯವಾಗಿದೆ. ಜೀವ ವಿಜ್ಞಾನದ ವಿಕಾಸವಾದದಿಂದ ಹಿಡಿದು ಫ್ರಾಯಿಡನ ಮನೋವಿಜ್ಞಾನದವರೆಗೆ ಚಿಂತನೆ ಮಾಡಿದರು. ಇಂದು ನಮಗೆ ಹೊಸ ದಿಕ್ಕು ತೆರೆದಂತಾಗಿದೆ. ಬಸವಣ್ಣನವರ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಇಂದಿನ ಅವರ ಉಪನ್ಯಾಸ ಪ್ರೇರಣೆ ನೀಡಿದೆ" ಎಂದರು. ಆರಂಭದಲ್ಲಿ ಜ್ಯೋತಿ ವಿಶ್ವಾಸ್, ಸುಚೇತಾ ಪ್ರಭುದೇವ್ ಬಸವಣ್ಣನವರ ಪೂಜೆ ಮತ್ತು ಭಜನೆಯಲ್ಲಿ ಪಾಲ್ಗೊಂಡಿದ್ದರು. ಮಂಗಲದೊಡನೆ ನಂತರ ಪ್ರಸಾದ ವಿತರಣೆಯೊಡನೆ ಕಾರ್ಯಕ್ರಮ ಮುಕ್ತಾಯವಾಯಿತು. ನೂರಾರು ಜನ ಸೇರಿದ್ದ ಈ ಯಶಸ್ವಿ ಬಸವ ಸಂಸ್ಮರಣೆ ಅಪಾರ ಸಂತೋಷ ತಂದಿತು.

* * *

ಓದುಗರ ಗಮನಕ್ಕೆ

ಈಗ ಪೂಜ್ಯ ಶ್ರೀ ಮಾತಾಜಿಯವರು ವಿದೇಶದಲ್ಲಿರುವ ಕಾರಣ ಸಮಸ್ಯೆ-ಸಮಾಧಾನ ವಿಭಾಗಕ್ಕೆ 'ಪ್ರಶ್ನೆಗಳನ್ನು ಮತ್ತು ಲೇಖನಗಳನ್ನು ಎಲ್ಲಿಗೆ ಕಳಿಸಬೇಕೆಂದು ಕೇಳಿ ಅನೇಕ ಪತ್ರಗಳು ಬಂದಿವೆ. ಅಂಥವರು ಕಲ್ಯಾಣ ಕಿರಣ ಮಾಸ ಪತ್ರಿಕೆ, ಸಮಸ್ಯೆ-ಸಮಾಧಾನ ವಿಭಾಗ ಬಸವ ಮಂಟಪ, ರಾಜಾಜಿನಗರ ಈ ವಿಳಾಸಕ್ಕೆ ಕಳಿಸಬೇಕೆಂದು ಸೂಚಿಸುತ್ತೇವೆ.

- ವ್ಯವಸ್ಥಾಪಕರು



ಬೀದರ್‌ನಲ್ಲಿ ಬಸವ ಪಂಚಮಿ ಪ್ರಯುಕ್ತ ಕಾರಾಗೃಹದಲ್ಲಿ ಕಾರ್ಯಕ್ರಮ : ಪೂಜೆ ಸಲ್ಲಿಸುತ್ತಿರುವ ಮಾತ ನಿಶ್ಚಲಾಂಬಾ, ರೊಟರಿ ಕ್ಲಬ್ ಅಧ್ಯಕ್ಷ ಹಾವಶೆಟ್ಟಿ ಪಾಟೀಲ, ರಮೇಶ ಪಾಂಡೆ , ಎಂ.ಎಲ್.ಎ., ಬಿ.ಜೆ.ಪಿ ಉಪಾಧ್ಯಕ್ಷರು, ಪಾಂಡುರಂಗ ಸೂರ್ಯವಂಶಿ, ಲಿಂಗಾಯತ ಸಮಾಜದ ಉಪಾಧ್ಯಕ್ಷ ಮಾಣಿಕಪ್ಪ ನಿಂಬೂರ, ನಾಗಶೆಟಿಕಾರ ಇತರರು ಚಿತ್ರದಲ್ಲಿದ್ದಾರೆ.



ಬೀದರ್‌ನಲ್ಲಿ ಬಸವ ಪಂಚಮಿ : ವೇದಿಕೆಯಲ್ಲಿ ಬಲದಿಂದ ಎಡಕ್ಕೆ ಶರಣರಾದ. ಕುಶಲರಾವ್ ಪಾಟೀಲ್, ರಾಷ್ಟ್ರೀಯ ಬಸವ ದಳದ ಜಿಲ್ಲಾಧ್ಯಕ್ಷರಾದ ಶರಣೆ. ಚಂದ್ರಮ್ಮ ಪಾಟೀಲ್, ಪೂಜ್ಯ ಚನ್ನಯ್ಯ ಸ್ವಾಮಿ, ಪೂಜ್ಯ ಶ್ರೀ ಮಾತೆ ನಿಶ್ಚಲಾಂಬ.


ಡಾ॥ ಕೆ.ಜಿ. ಪಾಟೀಲ್



ಕೂಡಲ ಸಂಗಮದ ಬಸವ ಧರ್ಮ ಪೀಠದ ಪತಿಯಿಂದ ನಡೆದ ಬಸವ ಪಂಚಮಿ ಕಾರ್ಯಕ್ರಮ. ಪೂಜ್ಯ ಮಾತೆ ಅಕ್ಕಮಹಾದೇವಿಯವರು ನೇತೃತ್ವ ವಹಿಸಿದ್ದು ಬಿಜಾಪುರ ರಾ.ಬ.ದ ಅಧ್ಯಕ್ಷ ಶ್ರೀಶೈಲ ಮೂಗೂರುರವರು ಮತ್ತು ಅಕ್ಕಮಹಾದೇವಿ ಬುರ್ಲಿಯವರು ಭಾಗವಹಿಸಿದ್ದರು.



ಕೂಡಲ ಸಂಗಮದಲ್ಲಿ ನಡೆದ ನೀಲಮ್ಮ ಷಷ್ಠಿ ಕಾರ್ಯಕ್ರಮ. ಪೂಜ್ಯ ಮಾತೆ ಅಕ್ಕಮಹಾದೇವಿ, ಮಲ್ಲಿಕಾರ್ಜುನ ಫಲದಿನ್ನಿ ಆಸಂಗಿಯವರು, ಕೊಕಟನೂರು, ಕೇತಣ್ಣ ರಾಜಪ್ಪ ರಾಜಮನೆಯವರು ಚಿತ್ರದಲ್ಲಿದ್ದಾರೆ.



ಕೂಡಲಸಂಗಮದ ಬಸವ ಧರ್ಮ ಪೀಠದ ಪತಿಯಿಂದ ದಿ. 13-7-03 ರಂದು ನಡೆದ ಹುಣ್ಣಿಮೆ ಕಾರ್ಯಕ್ರಮ. ಪೂಜ್ಯ ಮಾತೆ ಅಕ್ಕಮಹಾದೇವಿ, ಶರಣ. ಶಿವರಾಯ ಮಾಸ್ತರ್, ಡಾ|| ಎಂ. ಬಿ. ಅರ್ಜುನಗಿ, ಬಸವರಾಜ್ ಮತ್ತು ಅಣ್ಣಾ ಸಾಹೇಬ್ ಪಾಟೀಲರು ಚಿತ್ರದಲ್ಲಿದ್ದಾರೆ.



ಚನ್ನಪಟ್ಟಣ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಬೆಂಗಳೂರು ಬಸವ ಮಂಟಪದ ಮಕ್ಕಳಾದ ಕು. ಆರತಿ, ಪಲ್ಲವಿ ಮತ್ತು ಪೂಜಾರಿಂದ "ಬೆಳಗಲಿ ಬೆಳಗಲಿ ಬಸವ ಜ್ಯೋತಿ ಬೆಳಗಲಿ" ಹಾಡಿನ ನೃತ್ಯ ರೂಪಕ.

ಮೃತ್ಯು ಮುಟ್ಟದ ಮುನ್ನ

- ಮಾತೆ ಕಸ್ತೂರಿದೇವಿ

ನರೆ ಕೆನ್ನೆಗೆ ತೆರೆಗಲ್ಲಕೆ ಶರೀರಗೂಡು ಹೋಗದ ಮುನ್ನ
ಹಲ್ಲುಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ
ಮೃತ್ಯು ಮುಟ್ಟದ ಮುನ್ನ ಪೂಜಿಸು ಲಿಂಗದೇವನ

- ವಿಶ್ವಗುರು ಬಸವಣ್ಣನವರು - 193

ಈ ವಚನದಲ್ಲಿ ಧರ್ಮಪಿತ ಬಸವಣ್ಣನವರು ಅಸಹಾಯಕ ಸ್ಥಿತಿಯ ವೃದ್ಧಾಪ್ಯದ ಚಿತ್ರವನ್ನು ನಮ್ಮ ಕಣ್ಣ ಮುಂದೆ ತರುವುದರೊಂದಿಗೆ, ಸಕಾಲದಲ್ಲಿ ಮಾಡಬೇಕಾದ ಪೂಜೆಯ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ಜಗದೊಡೆಯ ಪರಮಾತ್ಮನನ್ನು ಪೂಜಿಸಲು, ತನ್ಮೂಲಕ ಕೃತಜ್ಞತೆ ವ್ಯಕ್ತಪಡಿಸಲು ಆಗ್ರಹ ಪಡಿಸುತ್ತಾರೆ. ಆರೋಗ್ಯವಾದ ಸದೃಢ ಕಾಯದ ಸಾರ್ಥಕತೆಯನ್ನು ಪೂಜೆಯೊಂದಿಗೆ ಬೆಸೆಯುವುದರೊಡನೆ ಸದಾಚಾರವನ್ನು ಕಲಿಸುತ್ತಿದ್ದಾರೆ. ಉತ್ತಮವಾದ ಸಂಸ್ಕಾರವನ್ನು ಬಿತ್ತುತ್ತಿದ್ದಾರೆ. ಅಲ್ಲದೆ ಸರ್ವಕಾರಣ ಕರ್ತನಾದ ಪರಮಾತ್ಮನನ್ನು ಮರೆತು, ಕೇವಲ ಐಹಿಕ ಸುಖಭೋಗಗಳಲ್ಲಿ ತಲ್ಲೀನರಾಗಿ ಜೀವನದ ಕ್ಷಣಗಳನ್ನು ವ್ಯರ್ಥವಾಗಿ ಕಳೆಯುತ್ತಿರುವುದರ ಬಗ್ಗೆ ಎಚ್ಚರ ಮೂಡಿಸುತ್ತಿದ್ದಾರೆ; ಅವಸರ ಪಡಿಸುತ್ತಿದ್ದಾರೆ.

ಇತ್ತೀಚೆಗೆ ವೃದ್ಧಾಪ್ಯ ಒಂದು ಕಾಯಿಲೆಯಾಗಿ ಮತ್ತು ಶಾಪವಾಗಿ ಪರಿಣಮಿಸುತ್ತಿದೆ. ಇದಕ್ಕೆ ಕಾರಣಗಳು ಹಲವಾರು. ದಿನವೂ ಪತ್ರಿಕೆಗಳಲ್ಲಿ ''ವೃದ್ಧರ ಕೊಲೆ; ನಗನಾಣ್ಯ ಲೂಟಿ '' ಎಂದು ವರದಿಯಾಗುತ್ತಿದೆ. ಇದು ಸುಸಂಸ್ಕೃತ ಸಮಾಜದ ಲಕ್ಷಣವಲ್ಲ. ಹೀಗಾಗಿ ಒಂಟಿ ಮುದುಕರ ಬಾಳು ನಗರಗಳಲ್ಲಿ ನರಕ ಸದೃಶ್ಯವಾಗಿದೆ. ಇನ್ನು ಕಲಿತ ಕುಟುಂಬಗಳಲ್ಲಿ ಎಲ್ಲರೂ ಸುಶಿಕ್ಷಿತರಾಗಿದ್ದರೂ ಬೆಳಿಗ್ಗೆ ಮಕ್ಕಳು, ಸೊಸೆ, ಮೊಮ್ಮಕ್ಕಳು ಶಾಲೆ ಕಾಲೇಜು ಆಫೀಸಿಗೆ ಎಂದು ಹೊರಡುವ ಅವಸರದಲ್ಲಿರುತ್ತಾರೆ. ಇನ್ನು ಸಂಜೆ ಮನೆಗೆ ಬಂದರೆ ಟಿ.ವಿ. ನೋಡುವುದು, ಹೋಂವರ್ಕ್ ಮಾಡುವುದು, ಆಟ, ಓದು, ಬರೆ ಎಂದು, ನಾಳಿನ ಪೂರ್ವ ಸಿದ್ಧತೆ ......ಹೀಗೆ ಮನೆಯಲ್ಲಿರುವ ವೃದ್ಧರನ್ನು, ಹಿರಿಯರನ್ನು ಮಾತಾಡಿಸಲು, ಗಮನಿಸಲು ಕಿರಿಯರಿಗೆ ಸಮಯವಿಲ್ಲ. ರಜಾದಿನಗಳು ಬಂದರಂತೂ ಅವರವರ ವೈಯಕ್ತಿಕ ಕೆಲಸಗಳೊಂದಿಗೆ ದಿನಗಳು ಉರುಳುತ್ತವೆ. ಇಂಥಲ್ಲಿಯೂ ವೃದ್ಧರಿಗೆ ಒಂಟಿತನ ಕಾಡುತ್ತದೆ. ಇನ್ನು ವಿದೇಶಗಳಲ್ಲಿ ನೆಲೆಸಿರುವ ಮಕ್ಕಳು ಸ್ವದೇಶಕ್ಕೆ ಬರದಿದ್ದಾಗ ಯಾರಿಗಾಗಿ ಬದುಕಬೇಕು ಎಂಬ ವ್ಯಥೆಯಲ್ಲಿ ಕಾಲ ಹಾಕುತ್ತಾರೆ. ಒಂದು ರೀತಿಯಲ್ಲಿ ಎಲ್ಲಾ ಇದ್ದು ಇಲ್ಲದಂಥ ಪರಿಸ್ಥಿತಿ. ಇದಕ್ಕೆ ಅಪವಾದವಾಗಿ ಕೆಲವರಿರುತ್ತಾರೆ. ಮೊದಲಿನಿಂದಲೂ ಸಂಸಾರದ ನಡುವೆ ಇದ್ದುಕೊಂಡೆ ಸಮಾಜಸೇವೆ, ಧರ್ಮ ಪ್ರಚಾರ, ಸತ್ಸಂಗ, ಸಾಹಿತ್ಯಾಧ್ಯಯನ, ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿ, ಒಳ್ಳೆಯ ಅಭಿರುಚಿ, ಹವ್ಯಾಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಇಳಿವಯಸ್ಸಿನಲ್ಲಿಯೂ ಅತ್ಯಂತ

ಹುರುಪಿನಿಂದ ಯುವಕರು ನಾಚುವಂತೆ, ನಾಲ್ಕು ಜನರಿಗೆ ಬೇಕಾಗಿ, ಸಾರ್ಥಕವಾಗಿ ಬದುಕುತ್ತಿರುವ ನಿದರ್ಶನಗಳು ನಮ್ಮ ಮುಂದೆ ಇವೆ. ಇದೆಲ್ಲ ಸ್ಥಿತಿವಂತ ವೃದ್ಧರ ಮಾತಾಯಿತು.

ಇನ್ನು ವೃದ್ಧಾಪ್ಯದಲ್ಲಿ ಕಣ್ಣು ಕಾಣದೆ, ಕಿವಿ ಕೇಳದೆ, ತಿಂದದ್ದು ಜೀರ್ಣವಾಗದೆ, ನಡೆಯಲಾರದೆ, ಜತೆಗೆ ವಾಸಿಯಾಗದ ಕಾಯಿಲೆಗಳು ಬಂದರಂತೂ ಮಲಗಿದಲ್ಲಿಯೆ ಸೇವೆ ಮಾಡಿಸಿಕೊಳ್ಳುತ್ತಾ ಅತ್ತ ಸಾಯದೆ; ಇತ್ತ ಬದುಕದೆ ನರಳುತ್ತಾ ಕಾಲ ಹಾಕುವ ಮುದುಕರು ಯಾರಿಗೂ ಬೇಡವಾಗುತ್ತಾರೆ. ಮನೋವೈಕಲ್ಯಕ್ಕೆ ಒಳಗಾಗಿ ಸದಾ ಕಿರಿಕಿರಿ, ಜಗಳ ಮಾಡುವ ವೃದ್ಧರು ತಮ್ಮ ಮಕ್ಕಳು, ಬಂಧುಬಳಗದವರಿಂದಲೂ ದೂರವಾಗುತ್ತಾರೆ. ಜತೆಗೆ ಮಾನವ ಸಂಬಂಧಗಳು ಸಡಿಲವಾಗುತ್ತಿರುವ ಈ ಕಾಲದಲ್ಲಿ ಹಿರಿಯರನ್ನು ಪ್ರೀತಿಸಿ, ಗೌರವಿಸುವ ಸಜ್ಜನಿಕೆ, ಸಹೃದಯತೆಗಳು ಕಿರಿಯರಲ್ಲಿ ಕ್ಷೀಣವಾಗುತ್ತಿದೆ. ಬದಲಿಗೆ ಮನೆಗಳಲ್ಲಿ ಹಿರಿಯರಿದ್ದರೆ ತಮ್ಮ ಸ್ವಚ್ಛಂದ ಪ್ರವೃತ್ತಿಗೆ ಅಡ್ಡಿಯಾಗುತ್ತಾರೆ ಎಂಬ ವಾತಾವರಣ ನಿರ್ಮಾಣವಾಗುತ್ತಿದೆ. ಹೀಗಾಗಿ ಮನೆಗಳಲ್ಲಿ ವೃದ್ಧರನ್ನು, ಹಿರಿಯರನ್ನು ನೋಡಿಕೊಳ್ಳುವವರಿಲ್ಲದೆ ಈಗೀಗ 'ವೃದ್ಧಾಶ್ರಮ'ಗಳು ಹೆಚ್ಚಾಗಿ ತಲೆ ಎತ್ತುತ್ತಿವೆ. ಮೊದಲು ಹೀಗಿರಲಿಲ್ಲ. ಅವಿಭಕ್ತ ಕುಟುಂಬಗಳಲ್ಲಿ ಮುದುಕರು ಯಾರಿಗೂ ಭಾರವಾಗುತ್ತಿರಲಿಲ್ಲ. ಮನೆಯವರಿಗೆ ಬೇಕಾಗಿ, ಅರಿತು ಬಾಳುತ್ತಾ, ಮೊಮ್ಮಕ್ಕಳು, ಮರಿಮಕ್ಕಳಿಗೆ ನೀತಿಬೋಧಕ, ಶೌರ್ಯ, ಸಾಹಸಗಳಿಂದ ಕೂಡಿದ ರೋಚಕ ಕಥೆಗಳನ್ನು ಹೇಳುತ್ತಾ ರಂಜಿಸುತ್ತಾ ಸಂತೋಷವಾಗಿರುತ್ತಿದ್ದ ಕಾಲವೊಂದಿತ್ತು. ಆದರೆ ಈಗ ಇಂಥ ಚಿತ್ರಗಳು ಅಪರೂಪವಾಗುತ್ತಿದೆ.

ವೃದ್ಧಾಪ್ಯದ ಇಂಥ ಹಲವಾರು ಸಮಸ್ಯೆಗಳನ್ನರಿತೆ ಬಸವಣ್ಣನವರು ಬದುಕಿನಲ್ಲಿ ಸಂಜೀವಿನಿಯಂತೆ ಕೆಲಸ ಮಾಡುವ ಸಾಮರ್ಥ್ಯ ಹೊಂದಿರುವ, ಮಾನಸಿಕ ಸಮತೋಲನವನ್ನು ಕಾಯ್ದಿಡಬಲ್ಲ ಗಾರುಡ ವಿದ್ಯೆಯಾದ ಪೂಜೆಯೆಂಬ ಭದ್ರಬುನಾದಿಯನ್ನು ಹಾಕುತ್ತಿರುವುದು. ಇಲ್ಲಿ ಭಕ್ತಿಯ ವ್ಯಕ್ತರೂಪವೇ ಪೂಜೆಯೆನಿಸಿಕೊಳ್ಳುತ್ತದೆ. ಇಳಿ ವಯಸ್ಸನ್ನು ಕಳೆಯಲು; ಸಾವನ್ನು ಸಂತೋಷದಿಂದ; ಆತ್ಮ ತೃಪ್ತಿಯಿಂದ ಎದುರುಗೊಳ್ಳಲು ಶರೀರ ಗಟ್ಟಿಮುಟ್ಟಾಗಿದ್ದಾಗಲೇ ಗುರು-ಲಿಂಗ-ಜಂಗಮಕ್ಕೆ- ತನು-ಮನ-ಧನವನ್ನು ಸವೆಸಬೇಕೆಂದು ತಿಳಿ ಹೇಳುತ್ತಿದ್ದಾರೆ. ಅಸಹಾಯಕವಾದ ದುಃಸ್ಥಿತಿಯಲ್ಲೂ ಗೆಲ್ಲುವ ಗುಟ್ಟನ್ನು ಹೇಳಿಕೊಡುತ್ತಿದ್ದಾರೆ.

ಭಕ್ತಿಯಿಂದ ಮಾಡುವ ಪೂಜೆ ವ್ಯರ್ಥಗೊಳ್ಳಬಾರದೆಂದು ಧರ್ಮಪಿತ ಬಸವಣ್ಣನವರು ಇಷ್ಟಲಿಂಗವೆಂಬ ದೇವ ಕುರುಹು, ಶ್ರೇಷ್ಠವಾದ ಲಾಂಛನವನ್ನು ನಮಗೆ ಕರುಣಿಸಿದ್ದಾರೆ. ಲಿಂಗದೀಕ್ಷೆಯ ಮೂಲಕ ಭಕ್ತಸ್ಥಲವನ್ನು ಪ್ರವೇಶಿಸಿದ ಸಾಧಕನು ಮೊದಲು ಆಚಾರಕ್ಕೆ ಹೆಚ್ಚು ಮಹತ್ವ ಕೊಡುತ್ತಾನೆ. ಏಕೆಂದರೆ ಬಹಿರಂಗದಲ್ಲಿ ಅಥವ ಅಂತರಂಗದಲ್ಲಿಯೇ ಆಗಲಿ ಸದಾಚಾರ ಬಲದಿಂದ ಮಾತ್ರ ಮೇಲು ಕೀಳು ಎಂಬ ಅಸಮಾನತೆಯ ಗೆರೆಯನ್ನು ಸುಲಭವಾಗಿ ಅಳಿಸಲು ಸಾಧ್ಯ ಎಂಬ ಸತ್ಯವನ್ನು ಅವನು ಅರಿತುಕೊಳ್ಳುತ್ತಾನೆ. ಈ ಕಾರಣಕ್ಕಾಗಿಯೇ ಅಪ್ಪನವರು ''ಆಚಾರವೇ ಸ್ವರ್ಗ, ಅನಾಚಾರವೇ ನರಕ'' ಎಂದು ಘೋಷಿಸಿದ್ದು; ಅದರ ಬೆಂಬಲವಿಡಿದು ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ''ಆಚಾರವಿಲ್ಲದವನೇ ಕೀಳು ಜಾತಿ'' ಎಂದು ನಿಷ್ಠುರವಾಗಿ ನುಡಿಯುತ್ತಾರೆ. ಆದ್ದರಿಂದಲೇ ''ಸದಾಚಾರದ ಮೊದಲ ಮೆಟ್ಟಿಲು ಪ್ರತಿನಿತ್ಯ ಸುಪ್ರಭಾತದಲ್ಲಿ ಮಾಡುವ ಪೂಜೆಗೆ ಮೀಸಲು'' ಎಂದು

ವಚನ ಸಾಹಿತ್ಯ ಹೇಳುತ್ತದೆ!

ಲಿಂಗಾಯತ ಸಮಾಜದಲ್ಲಿ ನಿತ್ಯ ಕ್ರಿಯೆಗಳಾದ ಊಟ, ನಿದ್ರೆಯಷ್ಟೇ ಇಷ್ಟಲಿಂಗ ಪೂಜೆಯು ಮುಖ್ಯವಾದುದು ಎಂದು ಎಷ್ಟು ಜನರಿಗೆ ತಿಳಿದಿದೆ? ಕೆಲವರಿಗೆ ಗೊತ್ತಿದ್ದರೂ ಎಷ್ಟು ಜನ ಆಚರಣೆಗೆ ತಂದಿದ್ದಾರೆ? ಅದರಲ್ಲೂ ಬೆಡ್‌ಕಾಫಿಗೆ ಅಂಟಿಕೊಂಡಿರುವ ಜನರಿಗೆ ಬೆಳಿಗ್ಗೆ ಎದ್ದ ಕೂಡಲೆ ಮುಖಮಾರ್ಜನ, ಸ್ನಾನ, ಪೂಜೆಗಳು ಮಾಡಲೇಬೇಕಾದ ಮುಖ್ಯವಾದ, ಆರೋಗ್ಯ ಮತ್ತು ಧಾರ್ಮಿಕ ದೃಷ್ಟಿಯಿಂದ ದೈನಂದಿನ ಸತ್ಕ್ರಿಯೆಗಳು ಎಂದು ಅನಿಸುವುದೇ ಇಲ್ಲ. ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಬಿಸಿ ಪಾನೀಯ ಕುಡಿಯುವುದರಿಂದ ಅಲ್ಸರ್ ಮುಂತಾದ ರೋಗಗಳಿಗೆ ಕಾರಣವಾಗುತ್ತದೆ ಎಂದು ವೈದ್ಯರು ಹೇಳುತ್ತಾರೆ. ಆದ್ದರಿಂದ ಪೂಜೆಯ ನೆಪದಲ್ಲಿ ಆದರೂ ಕರುಣೋದಕ ತೆಗೆದುಕೊಳ್ಳುವುದರಿಂದ ಇಂಥ ಪ್ರಾಥಮಿಕ ತೊಂದರೆಗಳಿಂದ ಪಾರಾಗಬಹುದು.

ಒಮ್ಮೆ ವಯೋವೃದ್ಧರೊಬ್ಬರ ಲಿಂಗೈಕ್ಯ ಸಂಸ್ಕಾರದಲ್ಲಿ ಭಾಗಿಯಾಗುವ ಅವಕಾಶ ಒದಗಿತ್ತು. ಧಾರ್ಮಿಕ ಕ್ರಿಯೆಗಳಲ್ಲಿ ಒಂದಾದ ಮೃತರ ಇಷ್ಟಲಿಂಗವನ್ನು ಪೂಜಿಸಿ ಕರುಣೋದಕ ಕರುಣಪ್ರಸಾದಗಳನ್ನು ಶವದ ಬಾಯಲ್ಲಿ ಹಾಕಬೇಕಾಗಿತ್ತು. ಅಂತೆಯೇ ಲಿಂಗೈಕ್ಯರ ಕರಡಿಗೆಯಲ್ಲಿದ್ದ ಇಷ್ಟಲಿಂಗವನ್ನು ತೆಗೆದಾಗ ಪಾಪ! ಬದುಕಿದ್ದಾಗ ಒಂದು ದಿನವಾದರೂ ಪೂಜಿಸಿದ್ದರೋ ಇಲ್ಲವೋ ?! ಅವರ ಇಷ್ಟಲಿಂಗ ಕುರೂಪಿಯಾಗಿ ಬೇಸಿಗೆಯಲ್ಲಿ ಬತ್ತಿದ ಕೆರೆ ಬಾಯಿ ಬಿಟ್ಟಂತೆ ಅಲ್ಲಲ್ಲಿ ಬಿರುಕು ಮೂಡಿತ್ತು!! ಭಕ್ತಿ, ಶ್ರದ್ಧೆ ನಿಷ್ಠೆಯಿಂದ ಪೂಜಿಸಿದಾಗ ಮುಖ ಕಾಣುವಷ್ಟು ಸ್ಪಷ್ಟವಾಗಿ ಇಷ್ಟಲಿಂಗ ಮಿಂಚುತ್ತದೆ. ಇಂಥವರನ್ನು ಕಂಡೇ ಧರ್ಮಪಿತ ಬಸವಣ್ಣನವರು "ಒಡೆಯನ ಬರವಿಂಗೆ ಕುನ್ನಿ ತನ್ನ ಬಾಲವ ಬಡಿದರೆ ವೆಚ್ಚವೇನು ಹತ್ತುವುದು ಲಿಂಗದೇವಾ?" ಎಂದು ವಿಡಂಬಿಸುತ್ತಿರುವುದು. ನಾಯಿಗೆ ಒಂದು ತುತ್ತು ಅನ್ನ ಹಾಕಿದರೆ ಸಾಕು ಅದು ಮರೆಯದೆ ತನ್ನ ಯಜಮಾನ (ಅನ್ನದಾತ)ನನ್ನು ಕಂಡಾಗಲೆಲ್ಲ ಬಾಲ ಅಲ್ಲಾಡಿಸುತ್ತದೆ. ಹತ್ತಿರ ಬರುತ್ತದೆ, ಕೃತಜ್ಞತೆ ಸೂಚಿಸುತ್ತದೆ. ಪ್ರೀತಿ ವ್ಯಕ್ತಪಡಿಸುತ್ತದೆ. ತನ್ನ ಪಾಲಿನ ಋಣವನ್ನು ತೀರಿಸುತ್ತದೆ. ಅದು ಇಂಥ ಸದ್ವರ್ತನೆಗಳನ್ನು ಯಾವ ಖರ್ಚು ಇಲ್ಲದೆ ಮಾಡುತ್ತದೆ. ಅಂದಾಗ ಅದೇ ರೀತಿ ತೆರಿಗೆ ಇಲ್ಲದೆ ನಮಗೆ ಬದುಕಲು ಬೇಕಾದ ಗಾಳಿ, ನೀರು, ಬೆಳಕು, ಇಳೆ, ಬೆಳೆ ಎಲ್ಲವನ್ನು ಕೊಟ್ಟಿರುವ ಮಹಾದಾತನನ್ನು ನಾವು ಮರೆತು, ಸ್ಮರಿಸಿ, ಪೂಜಿಸದಿದ್ದರೆ ನಾಯಿಗಿಂತಲೂ ಕಡೆಯಾಗುವುದಿಲ್ಲವೆ?! ಇನ್ನು ಕೆಲವರಿದ್ದಾರೆ. ಅವರು ಬೆಳಿಗ್ಗೆ ಎದ್ದು ಮೊದಲು ಗಂಡ ಮಕ್ಕಳಿಗೆಲ್ಲರಿಗೂ ಅಡುಗೆ ಮಾಡಿ, ಕ್ಯಾರಿಯರ್ ತುಂಬಿ ಅವರನ್ನೆಲ್ಲ ಶಾಲೆ-ಕಾಲೇಜು, ಆಫೀಸು ಇತರ ಕೆಲಸಗಳಿಗೆ ಕಳಿಸಿದ ಮೇಲೆ ತಾವು ಸ್ನಾನ ಮಾಡಿ ಪೂಜೆ ಮಾಡುವ ಅಭ್ಯಾಸ ಬೆಳೆಸಿಕೊಂಡಿರುತ್ತಾರೆ. ಈ ಹೊತ್ತಿಗಾಗಲೇ ಮಧ್ಯಾಹ್ನ 11 ರಿಂದ 12 ಗಂಟೆಯಾಗಿರುತ್ತದೆ. ಅಷ್ಟರೊಳಗೆ ಪೂಜೆಗೆ ಮೊದಲೇ ತಿಂಡಿ ಕಾಫಿಯು ಆಗಿರುತ್ತದೆ. ಇದನ್ನು ತಪ್ಪಿಸಿ ಬೆಳಿಗ್ಗೆ ಬೇಗ ಎದ್ದು ಸ್ನಾನ ಪೂಜೆ ಮುಗಿಸಿಯೇ ನಂತರ ಉಳಿದ ಕೆಲಸಗಳ ಕಡೆ ಗಮನ ಹರಿಸುವುದನ್ನು ರೂಢಿಸಿಕೊಳ್ಳಬೇಕು. ಇದರಿಂದ ಮನೆಯಲ್ಲಿರುವವರಿಗೆ ಒಳ್ಳೆಯ ಸಂಸ್ಕಾರಗಳನ್ನು ಬಿತ್ತಿದಂತಾಗುತ್ತದೆ. ಇಲ್ಲದಿದ್ದರೆ ಜೀವನ ಕೃತಕವಾಗಿ ಯಾವ ಆದರ್ಶಗಳಾಗಲಿ, ಮೌಲ್ಯಗಳಾಲಿ ಮಕ್ಕಳಲ್ಲಿ ಬೇರೂರುವುದಿಲ್ಲ. ಮಾತ್ರವಲ್ಲ ಭಕ್ತಿಪ್ರಧಾನದಿಂದ ಕೂಡಿದ ಸರಳವಾದ ಇಷ್ಟಲಿಂಗ ಪೂಜೆಯನ್ನು ತೊರೆದು ಆಡಂಬರ ವೈಭವಗಳಿಂದ ಕೂಡಿದ ಅನ್ಯದೇವತಾ ಪೂಜೆ, ವ್ರತಗಳನ್ನು ಮಾಡುತ್ತಿರುವುದರಿಂದಲೇ ಇಂದು

ಲಿಂಗಾಯತ ಸಮಾಜ ಅಂತಃಪತನದೊಂದಿಗೆ ಅವನತಿಯೆಡೆಗೆ ಸಾಗುತ್ತಿದೆ. ಇದನ್ನು ಕಂಡೇ ವ್ಯೋಮಕಾಯ ಸಿದ್ಧ ಅಲ್ಲಮಪ್ರಭುದೇವರು ಹೀಗೆ ನುಡಿಯುತ್ತಿರುವುದು:

ಸತ್ಯ ಶುದ್ಧ ದೇವರ ನಂಬಲರಿಯದೆ
ಮಿಥ್ಯ ದೈವಂಗಳನೆ ನಂಬಿ
ಸತ್ತುಹೋದರು ನಿತ್ಯವನರಿಯದೆ
ಎತ್ತಲೆಂದರಿಯರು ಗುಹೇಶ್ವರ ಲಿಂಗವನು ॥1577॥

ಎಂದು. ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣನಾದ ಲಿಂಗದೇವನನ್ನು ಮನಮುಟ್ಟಿ ಪೂಜಿಸಿ, ಧ್ಯಾನಿಸುವುದನ್ನು ಇಷ್ಟಲಿಂಗ ಜನಕರಾದ ಬಸವಣ್ಣನವರಿಂದಲೇ ಕಲಿಯಬೇಕು.

ನಶ್ವರವಾದ ರಕ್ತ ಮಾಂಸ, ಮೂಳೆಗಳಿಂದ ಕೂಡಿದ ಶರೀರ ಅಳಿದುಹೋಗುವ ಮುನ್ನವೇ ಸೃಷ್ಟಿಕರ್ತ ಲಿಂಗದೇವನನ್ನು ಪೂಜೆ ಮಾಡಬೇಕೆಂದು ಅಪ್ಪ ಬಸವಣ್ಣನವರು ಏಕೆ ಇಷ್ಟೊಂದು ಆಗ್ರಹ ಪಡಿಸುತ್ತಾ ತಮ್ಮ ಅನುಯಾಯಿಗಳನ್ನು ಒತ್ತಾಯಿಸುತ್ತಿದ್ದಾರೆ?! ಅಂದರೆ ಅವರಿಗೆ ಪ್ರತಿಯೊಬ್ಬನ ದಿನವೂ ದೇವನ ಸ್ಮರಣೆಯೊಂದಿಗೆ ಸದಾಚಾರದಿಂದ ಪ್ರಾರಂಭವಾಗಲಿ ಎಂಬ ಅಪೇಕ್ಷೆ. ಇದರಿಂದ ಮುಂದೆ ಎದುರಾಗಲಿರುವ ಅಪಮೃತ್ಯು, ಕಾಲಕರ್ಮಗಳನ್ನು ಗೆದ್ದು, ದಾಟಿ, ತಮ್ಮ ಮಕ್ಕಳು ಯಶೋವಂತರಾಗಿ ಬದುಕಲಿ ಎಂಬ ಹಾರೈಕೆ ಅಪ್ಪನವರದು. ಆದರೆ ಧರ್ಮಪಿತರ ಈ ಹೃದಯದಾಳದ ಕಳಕಳಿಯನ್ನು ಎಷ್ಟು ಜನ ಅರಿತುಕೊಳ್ಳಲು ಪ್ರಯತ್ನಿಸಿದ್ದಾರೆ?! ಪೂಜೆ, ಜಪ, ಧ್ಯಾನಗಳೆಲ್ಲ ಸನ್ಯಾಸಿಗಳಿಗೆ ಮಾತ್ರ ಸಂಸಾರಸ್ಥರಿಗಲ್ಲ ಎಂದು ಭಾವಿಸುತ್ತಾರೆ. ಅವರ ದೃಷ್ಟಿಯಲ್ಲಿ ಶರೀರ ಗಟ್ಟಿಮುಟ್ಟಾಗಿ ಇದ್ದಾಗಲೇ ಚೆನ್ನಾಗಿ ದುಡಿದು ಹಣ ಆಸ್ತಿಗಳಿಸಿ, ಜವಾಬ್ದಾರಿಗಳನ್ನೆಲ್ಲಾ ನಿರ್ವಹಿಸಬೇಕು. ಏಕೆಂದರೆ ಮುಂದೆ ಏನಾಗುತ್ತದೋ ಬಲ್ಲವರಾರು?! ಎಂಬ ತರ್ಕ ಅವರದು. ಮುಂದೆ ವಯಸ್ಸಾದ ಮೇಲೆ, ನಿವೃತ್ತಿ ಹೊಂದಿದ ಮೇಲೆ ಮಾಡಲು ಏನೂ ಕೆಲಸವಿಲ್ಲದಾಗ ಮತ್ತು ಕೈಯಲ್ಲಿ ಆಗದಿದ್ದಾಗ ಪೂಜೆಗೆ ಸಾಕಷ್ಟು ಸಮಯ ಇರುತ್ತದೆ. ಆಗ ಮಾಡಿದರಾಯಿತು. ಆದರೆ ಬಸವಾದಿ ಪ್ರಮಥರು ಇದನ್ನು ಒಪ್ಪುತ್ತಿಲ್ಲ. ಅಂಥವರನ್ನು ಉದಾಸೀನ ಮಾಡದೆ ಕರುಣಾಮಯಿ ಬಸವಣ್ಣನವರು ಹೀಗೆ ಬೋಧಿಸುತ್ತಿದ್ದಾರೆ

ಅಂದು ಇಂದು ಮತ್ತೊಂದು ಎನಬೇಡ
ದಿನವಿಂದೇ ಶಿವಶರಣೆಂಬವಂಗೆ!
ದಿನವಿಂದೇ ಹರಶರಣೆಂಬವಂಗೆ!
ದಿನವಿಂದೇ ನಮ್ಮ ಲಿಂಗದೇವನ ಮಾಣದೆ ನೆನೆವಂಗೆ ॥177॥

ಎಂದು ಈ ದಿನದ ಮಹತ್ವವನ್ನು ಮನಗಾಣಿಸುತ್ತಿದ್ದಾರೆ. ಈ ದಿನ ಈ ಕ್ಷಣ ಮಾತ್ರ ನಮ್ಮ ಕೈಯಲ್ಲಿದೆ. ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು? ಎಂಬಂತೆ ಮುಂದಿನ ಕ್ಷಣಗಳು, ದಿನಗಳು ನಮ್ಮದಾಗುತ್ತವೆ ಎಂದು ಹೇಳಿಕೊಳ್ಳಲು ಯಾವ ಧೈರ್ಯವೂ ನಮ್ಮಲ್ಲಿ ಉಳಿದಿಲ್ಲ. ಏಕೆಂದರೆ ಯಾವ ಕ್ಷಣದಲ್ಲಿ ಏನು ಬೇಕಾದರೂ ಅನಾಹುತ ಸಂಭವಿಸಬಹುದು?! ಆದ್ದರಿಂದ ಈ ಕ್ಷಣವೇ ಈ ದಿನವೇ ಪರಮಾತ್ಮನನ್ನು ನಂಬಿ, ಪೂಜಿಸಿ, ಧ್ಯಾನಿಸುವುದನ್ನು ಕಲಿಯಿರಿ ಎಂದು ಹೇಳಿಕೊಡುತ್ತಿದ್ದಾರೆ.

ನಿಜಸ್ಥಿತಿ ಹೀಗಿರುವಾಗ ಇನ್ನು ವಯಸ್ಸಾದ ಮೇಲೆ ಪೂಜೆ ಮಾಡಬೇಕೆಂಬ ಅಪೇಕ್ಷೆಯಿಂದ

ಪೂಜಿಸಲು ತೊಡಗಿದರೆ ಏನಾಗುತ್ತದೆ ಎಂದು ಈಗ ನೋಡೋಣ. ಕೂದಲು ಬೆಳ್ಳಗಾಗಿ, ಮುಖವೆಲ್ಲ ಸುಕ್ಕುಗಟ್ಟಿ, ಶರೀರದ ಮೂಳೆ ನರಗಳೆಲ್ಲ ಉಬ್ಬಿ ಬಂದು ದೇಹಕ್ಕೆ ಮುಪ್ಪು ಬಂದಿದೆ ಎಂಬುದನ್ನು ದೃಢಪಡಿಸುತ್ತದೆ. ಅಷ್ಟೆ ಅಲ್ಲ ಬಾಯಲ್ಲಿರುವ ಹಲ್ಲುಗಳೆಲ್ಲ ಬಿದ್ದು ಬೊಚ್ಚು ಬಾಯಿಯಾಗುತ್ತದೆ. ಇಂಥ ಬಾಯಿಂದ ಆಹಾರವನ್ನು ಜಗಿದು ತಿನ್ನುವುದು ಕಷ್ಟವಾಗಿ ಮಾತುಗಳು ಸಹ ಸ್ಪಷ್ಟವಾಗಿ ಬರದೆ, ತೊದಲಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮಂತ್ರಗಳನ್ನು ಸ್ಪಷ್ಟವಾಗಿ ಉಚ್ಛರಿಸಲು ಹೇಗೆ ಸಾಧ್ಯವಾಗುತ್ತದೆ ?! ವಯಸ್ಸಾದ ಮೇಲೆ ಸೊಂಟ ತನ್ನ ಶಕ್ತಿಯನ್ನು ಕಳೆದುಕೊಳ್ಳುವುದರಿಂದ ಬೆನ್ನು ಬಾಗಿ ಅನ್ಯರ ಹಂಗಿನಲ್ಲಿ ಬದುಕಬೇಕಾದ ದುಃಸ್ಥಿತಿ ಒದಗುತ್ತದೆ. ಅಷ್ಟೆ ಅಲ್ಲ ಪೂಜಿಸಿ, ಧ್ಯಾನಿಸುವಾಗ ನೇರವಾಗಿ ಕುಳಿತು ಉಸಿರಾಟ ಸುಲಲಿತವಾದರೆ ಮಾತ್ರ ಮಂತ್ರಾನುಸಂಧಾನದಿಂದ ನಿಜವಾದ ಆನಂದ ಪ್ರಾಪ್ತಿಯಾಗುತ್ತದೆ. ನೇರವಾಗಿ ಕುಳಿತುಕೊಳ್ಳಲು ಅಸಾಧ್ಯವಾಗುವ ಕಾರಣ ಇಂಥ ಆನಂದದಿಂದ ವಂಚಿತರಾಗಬೇಕಾಗುತ್ತದೆ. ಸೊಂಟ ಬೆನ್ನು ಬಗ್ಗಿರುವ ಕಾರಣ ಸರಿಯಾಗಿ ನಿಂತು ನಡೆಯಲು ಆಗದೆ ಶರೀರದ ಭಾರವನ್ನೆಲ್ಲ ಕಾಲ ಮೇಲೆ ಹಾಕಿ ಆಧಾರಕ್ಕೆಂದು ಒಂದು ಕೈಯಲ್ಲಿ ಕೋಲನ್ನು ಹಿಡಿದು ಇನ್ನೊಂದು ಕೈಯನ್ನು ಮಂಡಿಯ ಮೇಲೆ ಬಲವಾಗಿ ಊರಿ ನಡೆಯಬೇಕಾಗುತ್ತದೆ. ಅಂದರೆ ಇಲ್ಲಿ ತಮ್ಮ ವೈಯಕ್ತಿಕ ಕೆಲಸಕಾರ್ಯಗಳಿಗೆ ಓಡಾಡಲು ತೊಂದರೆಯಾಗಿರುವಾಗ ಇನ್ನು ಪೂಜೆಗೆಂದು ನೀರು, ಹೂ, ಪತ್ರೆ ಎಂದು ಓಡಾಡುತ್ತ ಜೋಡಿಸಿಕೊಳ್ಳುವುದು ಅಸಾಧ್ಯದ ಮಾತೆ ಸರಿ. ಇಂಥ ಮುಪ್ಪಾವಸ್ಥೆಯಲ್ಲಿ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ಬೇರೆಯವರಿಂದ ಸಹಾಯವನ್ನು ಅಪೇಕ್ಷಿಸುವುದಾಗಲಿ, ನಿರೀಕ್ಷಿಸುವುದಾಗಲಿ ತಪ್ಪಾಗುತ್ತದೆ. ಏಕೆಂದರೆ ಅವರಿಗೆಲ್ಲ ಇದಕ್ಕಿಂತಲೂ ಮುಖ್ಯವಾದ ಕೆಲಸಗಳಿರುವ ಕಾರಣ ಸಮಯಕ್ಕೆ ಯಾರು ಸಿಗುವುದಿಲ್ಲ, ಆದ್ದರಿಂದ ಇಂಥ ನರಕಸದೃಶವಾದ ಮುಪ್ಪು ಬರುವದಕ್ಕೆ ಮುನ್ನವೇ ಪೂಜಿಸಿದರೇ ಲೇಸಾದೀತು.

ಇಷ್ಟೆಲ್ಲ ಹೇಳಿದರು ಕೆಲವರು ಮುಪ್ಪಿಗೆ ಹೆದರುವುದಿಲ್ಲ, ಅಷ್ಟೆ ಅಲ್ಲ ಮುಪ್ಪು ಬಂದಿದೆ ಎಂದರೆ ಒಪ್ಪಿಕೊಳ್ಳಲು ಸಿದ್ದರಿರುವುದಿಲ್ಲ, ಏಕೆಂದರೆ ಕೂದಲು ಬೆಳ್ಳಗಾದರೆ ಕಪ್ಪು ಬಣ್ಣ ಇದೆಯಲ್ಲ ಎಂಬ ಧೈರ್ಯ ಅವರಿಗೆ. ಕಣ್ಣು ಮಬ್ಬಾದರೆ ಕನ್ನಡಕ ಹಾಕಿಕೊಂಡು ನೋಡಲು ಯತ್ನಿಸುತ್ತಾರೆ. ಹಲ್ಲು ಬಿದ್ದು ಹೋದರೆ ಕೃತಕ ಹಲ್ಲು ಕಟ್ಟಿಸಿಕೊಂಡು ಚಕ್ಕೂಲಿ, ಕೋಡುಬಳೆ ಸವಿಯಲು ಹೆಣಗುತ್ತಾರೆ. ಕಿವಿ ಕೇಳಿಸದಿದ್ದ ಹಿಯರಿಂಗ್ ಎಡ್ ಹಾಕಿಕೊಂಡು ಕೇಳಲು ಪ್ರಯತ್ನಿಸುತ್ತಾರೆ. ಯಾರಾದರೂ ಪ್ರೀತಿಯಿಂದಲೂ ವಯಸ್ಸಿಗೆ ಗೌರವ ಕೊಡಬೇಕೆಂಬ ಸದ್ಬುದ್ದಿಯಿಂದಲೂ ಅಜ್ಜ ಅಜ್ಜಿ ಎಂದು ಕರೆದರೆ ಕೋಪಗೊಳ್ಳುತ್ತಾರೆ. ಇಷ್ಟು ಬೇಗ ವಯಸ್ಸಾಯಿತೆ ಎಂದು ಮರುಗುತ್ತಾರೆ. ಅಂತು ಮುಪ್ಪನ್ನು ಓಡಿಸಲು, ದೂರ ಇಡಲು ಸರ್ವ ಪ್ರಯತ್ನವನ್ನು ಮಾಡುತ್ತಾರೆ. ಇಷ್ಟೊಂದು ದೇಹಾಭಿಮಾನದಿಂದ ಬದುಕುವವರನ್ನು ಕಂಡು ಬಸವಣ್ಣನವರು "ಮೃತ್ಯು ಮುಟ್ಟದ ಮುನ" ಎಂದು ಹೇಳಿ ಎಚ್ಚರಿಸುತ್ತಿದ್ದಾರೆ. ಏಕೆಂದರೆ ಮೃತ್ಯುವಿಗೆ ವಯಸ್ಸಾದ ಮೇಲೆಯೇ ಒಯ್ಯಬೇಕೆಂಬ ನಿಯಮವೇನೂ ಇಲ್ಲ, ಯಾವ ವಯಸ್ಸಿನವರಾಗಲಿ, ಯಾವ ಕ್ಷಣದಲ್ಲಾಗಲಿ ಪಕ್ಷಪಾತವಿಲ್ಲದೆ ಕರೆದೊಯ್ಯುತ್ತದೆ. ಆದ್ದರಿಂದ ಸಾವನ್ನು ಗಮನದಲ್ಲಿರಿಸಿಕೊಂಡಾದರೂ ಲಿಂಗದೇವನನ್ನು ಪೂಜಿಸಬೇಕೆಂದು ಬಸವಣ್ಣನವರು ಇಲ್ಲಿ ಸೂಚಿಸುತ್ತಾರೆ.

ಶರಣ ಬಂಧುಗಳೇ, ಇದನ್ನು ಓದಿದ ಮೇಲೆ "ಅಬ್ಬಾ!! ಮುಪ್ಪು, ಮೃತ್ಯು, ಪೂಜೆ ಎಂದು

ಅದೆಷ್ಟೊಂದು ತಲೆಕೊರೆದಿದ್ದಾರೆ; ಹೆದರಿಸುತ್ತಿದ್ದಾರೆ, ಹಾಗೆಂದು ದಿನವೆಲ್ಲ ಪೂಜೆಯಲ್ಲಿ ತೊಡಗಲು ಸಾಧ್ಯವೇ ?!" ಎಂದು ಅಂದುಕೊಳ್ಳುತ್ತಿರಲ್ಲವೇ ? ಹಾಗಿದ್ದರೆ ಹೆದರಬೇಡಿ, ಬನ್ನಿ ನಮ್ಮೆಲ್ಲರ ಸಹಾಯಕ್ಕೆ ಇಲ್ಲಿ ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭುದೇವರಿದ್ದಾರೆ. ಅವರ ವಾಣಿಯನ್ನು ನೆನೆಯೋಣ, ಮನನ ಮಾಡೋಣ, ಸತ್ಯವನ್ನು ಅರಿಯಲು ಯತ್ನಿಸೋಣ :

ಕಣೆಯ ಪೂಜಿಸಿ ದಿನವ ಕಳೆಯಲು ಬೇಡ
ಮಣಿಯ ನೆಣಿಸಿ ದಿನವ ಕಳೆಯಲು ಬೇಡ
ಕ್ಷಣವಾದರು ನಿಜದ ನೆನಹೇ ಸಾಕು!
ಕ್ಷಣದೊಳಗಣ ಅರ್ಧವಾದರೂ ನಿಜದ ನೆನಹೇ ಸಾಕು!
ಬೆಂಕಿಯೊಳಗಣ ಬಿಸಿ ನೀರೊಳಗುಂಟೆ ಗುಹೇಶ್ವರಾ ?!

ಜಂಗಮ ಜ್ಯೋತಿ

ಬಸವ ತತ್ವವ ಪುನಶ್ಚೇತನಗೊಳಿಸಲು ಧರೆಗೆ ಬಂದರು
ಬಸವ ಸಂದೇಶ ಸಾರಲು ಪ್ರವಚನಕಾರರಾದರು
ಬಸವ ಗುರುವ ತೋರಲೆಂದು ಬಸವಾತ್ಮಜೆಯಾದರು
ಲಿಂಗದೇವನ ಸತಿಯಾಗಿ ಲಿಂಗದೇವನ ಮೆರೆಸಿದರು
ಬಸವ ಪ್ರಭೆಯ ಬೆಳಗಲೆಂದು ಜಂಗಮಜ್ಯೋತಿಯಾದರು
ಬಸವ ಧರ್ಮ ಪೀಠಕ್ಕೆ ಮಹಾಜಗದ್ಗುರುವೆನಿಸಿದರು
ಇಂತೀ ಷಡ್ವಿಧವ ಬೆಳಗಲೆಂದು ನಮ್ಮೊಡನಿಹರು
ಬಸವ ಕಂದಳ ಪ್ರಿಯ ಸರ್ವೇಶಪ್ರಭುವೆ
ಈ ಬೆಳಗಿನೊಳಗೆ ಮಿಂದವರೆಲ್ಲ ಧನ್ಯರಾದರು.

* * *

ಬಸವ ಕಂದ

ನಿನಗೆ ವಿವಾಹ ಮಾಡಿಕೊಟ್ಟರು ನನ್ನನ್ನು
ಒಮ್ಮೆಯೂ ಕೂಡಿಲ್ಲ ಈವರೆವಿಗೂ ನಾನು ನಿನ್ನನ್ನು
ಬಸವ ತಂದೆಯ ಕಂದಳಾಗಿಯೆ ಇರಬಯಸುವೆ ಇನ್ನೂ
ಅಪ್ಪನ ಮಮತೆಯಲ್ಲಿ ಮೀಯುವ ಬಯಕೆ ತೀರಿಲ್ಲ ಇನ್ನೂ
ನಿನ್ನನ್ನು ಕೂಡಲು ಕಾದಿರಿಸಿರುವೆ ಮುಂದಿನ ಜನ್ಮವನ್ನು
ಬೇಡುವೆನು ನನಗಾಗಿ ಕಾಯುವ ತಾಳ್ಮೆ ತಂದುಕೋ ನೀನು
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವೆ
ನಿನಗೆ ತಕ್ಕವಳಾಗಲು ಕಾಲ ಮಾಗಿಲ್ಲ ಇನ್ನು

- ಶರಣೆ. ಸರೋಜಮ್ಮ ನಾಗರಾಜ್, ರಾ.ಬ.ದ
ಮೈಸೂರು.

ಬೀದರನಲ್ಲಿ ಬಸವ ಪಂಚಮಿ. ಆಚರಣೆ

ಮನುಕುಲೋದ್ಧಾರಕ, ವಿಶ್ವಗುರು ಬಸವಣ್ಣನವರ 808ನೇ ಲಿಂಗೈಕ್ಯ ದಿನಾಚರಣೆಯನ್ನು 2-8-2003 ರಂದು ವಿಶೇಷ ಪೂಜೆ ಪ್ರಾರ್ಥನೆಗಳೊಂದಿಗೆ ಸಂಭ್ರಮದಿಂದ ಆಚರಿಸಲಾಯಿತು.

ಅಂದು ಜಿಲ್ಲಾ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಾಲು ಹಣ್ಣು ವಿತರಿಸಿ, ರೋಗಿಗಳು ಬೇಗನೆ ಗುಣಮುಖರಾಗಲೆಂದು ಸೃಷ್ಠಿಕರ್ತ ಲಿಂಗದೇವನನ್ನು ಮತ್ತು ಧರ್ಮಪಿತ ಬಸವಣ್ಣನವರನ್ನು ಪ್ರಾರ್ಥಿಸಲಾಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶರಣರಾದ ಡಾ|| ಕೆ.ಜಿ. ಪಾಟೀಲರು ಮಾತನಾಡುತ್ತಾ ಇಂದಿನ ವೈಜ್ಞಾನಿಕ ಯುಗದಲ್ಲಿ ಮೂಢನಂಬಿಕೆಯಿಂದ ನಾಗರ ಕಲ್ಲಿಗೆ ಹಾಲೆರೆಯುವುದರ ಬದಲಿಗೆ ಹಸಿವನ್ನು ಹಿಂಗಿಸಲು ಅಮೂಲ್ಯವಾದ ಆಹಾರ ಪದಾರ್ಥಗಳನ್ನು ಹಾಳು ಮಾಡುವ ಕೆಟ್ಟ ಸಂಪ್ರದಾಯಕ್ಕೆ ಮಂಗಳ ಹಾಡುವ ಇಂಥ ಕ್ರಮಗಳು ಜಾರಿಗೆ ಬರಬೇಕೆಂದು ಶ್ಲಾಘಿಸಿದರು. ಶರಣರಾದ ಬಸವರಾಜ ಸಂಗಮದ ಪ್ರಸ್ತಾವಿಕ ಭಾಷಣ ಮಾಡಿದರು. ಶರಣ. ಗಂಗಶೆಟ್ಟಿ ಪಾಟೀಲರು ಶರಣು ಸಮರ್ಪಣೆ ಮಾಡಿದರು. ಅಧ್ಯಕ್ಷತೆಯನ್ನು ಶರಣೆ. ಚಂದ್ರಮ್ಮ ಪಾಟೀಲರು ವಹಿಸಿದ್ದರು.

ವೇದಿಕೆಯ ಮೇಲೆ ಪೂಜ್ಯ ಶ್ರೀ ಮಾತೆ ನಿಶ್ಚಲಾಂಬಾ, ಪೂಜ್ಯ ಶ್ರೀ ಚನ್ನಯ್ಯ ಸ್ವಾಮೀಜಿ, ಶರಣ. ಕುಶಾಲರಾವ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ವರದಿ - ಶರಣ. ಬಸವರಾಜ ಸಂಗಮದ

ಅದ್ಭುತ ಯಶಸ್ಸಿನ ಚನ್ನಪಟ್ಟಣದ ವಿಶ್ವಧರ್ಮ ಪ್ರವಚನ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನ ಪಟ್ಟಣದಲ್ಲಿ ನಗರಸಭೆ ಆವರಣದಲ್ಲಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿಯವರಿಂದ ತಾ|| 28-6-03 ರಂದು ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ಯಶಸ್ವಿಯಾಗಿ ಆರಂಭವಾಯಿತು.

ಸುಮಾರು 45 ದಿನಗಳ ಕಾಲ ನಿರಂತರವಾಗಿ ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಕೂಡಲಸಂಗಮದ ಬಸವ ಧರ್ಮ ಪೀಠದ ಲಿಂ|| ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ 9ನೇ ಸಂಸ್ಮರಣೆಯನ್ನು ಜೂನ್ 30 ರಂದು ಆಚರಿಸಲಾಯಿತು. ಅಲ್ಲದೆ ಆಗಸ್ಟ್ 2 ರಂದು ಬಸವ ಪಂಚಮಿ, ಆಗಸ್ಟ್ 3 ರಂದು ನೀಲಮ್ಮ ಷಷ್ಠಿ ಮತ್ತು ಆಗಸ್ಟ್ 15 ರಂದು ಸ್ವಾತಂತ್ರ್ಯೋತ್ಸವಗಳನ್ನು ಸಂಭ್ರಮದಿಂದ ಆಚರಿಸಲಾಯಿತು.

ಆಗಸ್ಟ್ 6 ರಂದು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು ಆಗಮಿಸಿ ವಿಶೇಷ ಆಶೀರ್ವಚನ ನೀಡಿದರು. ದೈನಂದಿನ ಜೀವನದಲ್ಲಿ ಪೂಜೆ, ಪ್ರಾರ್ಥನೆಗಳ ಪ್ರಾಮುಖ್ಯತೆಯನ್ನು ವಿವರಿಸಿದರು. ಆಗಸ್ಟ್ 10 ಮುಕ್ತಾಯಗೊಂಡ ಸಮಾರಂಭದಲ್ಲಿ ಬೀದರ್ ಜಿಲ್ಲೆಯ ಬಸವ ಕಲ್ಯಾಣದ ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರು ಪಾದಾರ್ಪಣೆ ಮಾಡಿ ಶಾಂತಿ ಸಂವೃದ್ಧಿಯ ಜತೆಗೆ ಸಹೋದರತ್ವ ಸಮಾನತೆ, ಸಾಮರಸ್ಯದಿಂದ ಬಾಳಿದರೆ ಮಾತ್ರ ಸಾಮಾಜಿಕ ಜೀವನ ಸಾರ್ಥಕಗೊಳ್ಳಲು ಸಾಧ್ಯವೆಂದು ನುಡಿದರು. ಚನ್ನಪಟ್ಟಣದ ಶರಣ ಬಂಧುಗಳ ತುಂಬು ಹೃದಯದ ಸಹಕಾರದಿಂದ ವಿಶ್ವಧರ್ಮ ಪ್ರವಚನ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ವರದಿ - ಶರಣ. ಮಹಾಂತೇಶ ರಾಜಗೋಳಿ

||ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಬಸವ ಧರ್ಮದ ಮಹಾಜಗದ್ಗುರು ಪೀಠದ
ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯದ ಆಶ್ರಯದಲ್ಲಿ

ಬಸವ ತತ್ತ್ವ ಪರೀಕ್ಷೆಗಳು

ಬಸವ ಧರ್ಮದ ಮಹಾಜಗದ್ಗುರು ಪೀಠದ ಆಶ್ರಯದಲ್ಲಿ ಧರ್ಮಪಿತ ಬಸವಣ್ಣನವರ ಮತ್ತು ಅವರ ಸಮಕಾಲೀನರ ದಿವ್ಯ ಸಂದೇಶ, ತತ್ತ್ವಗಳು ಹಾಗೂ ಶರಣ ಪರಂಪರೆ-ಇವುಗಳ ಪರಿಚಯ ಮಾಡಿಕೊಡುವ ಉದ್ದೇಶದಿಂದ ಬಸವ ತತ್ತ್ವ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ವಿವರ ಮತ್ತು ನಿಯಮಾವಳಿ

ಭಾಗ - 1 ಸಂಚಾಲಕರಿಗೆ

1. ಪರೀಕ್ಷೆಗಳನ್ನು ನಡೆಸಲು ಬಯಸುವ ಶರಣರು ಕೇಂದ್ರ ನೋಂದಣಿ ವಾರ್ಷಿಕ ಶುಲ್ಕ (ಪ್ರತಿ ವರ್ಷವೂ ನವೀಕರಿಸಬೇಕು). ರೂ. 35/-ಅನ್ನು ಕಳಿಸಿ ಅರ್ಜಿ ಸಲ್ಲಿಸಬೇಕು. ಶುಲ್ಕ ತುಂಬಿ ಅರ್ಜಿ ಪತ್ರ ತರಿಸಿಕೊಳ್ಳಬೇಕು.

2. ಅರ್ಜಿಯನ್ನು ಪರಿಶೀಲಿಸಿ ಪರೀಕ್ಷೆ ನಡೆಸಲು ಅನುಮತಿಯನ್ನು ನೀಡಲಾಗುವುದು.

3. ಪರೀಕ್ಷೆ ನಡೆಸಲು ಅನುಮತಿ ಪಡೆದವರು ಯಾವ ಯಾವ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಕುಳ್ಳಿರಿಸುವರೋ ಅವರಿಂದ ನಿಗದಿತ ಶುಲ್ಕವನ್ನು ಪಡೆದು, ಕೊಟ್ಟಿರುವ ವಿಳಾಸಕ್ಕೆ ಕಳುಹಿಸಿ ನಿಯಮಾವಳಿ, ಪಾವತಿ ಹಾಗೂ ಅರ್ಜಿ ಪತ್ರಗಳನ್ನು ಪಡೆಯಬೇಕು. ಅರ್ಜಿ ಪತ್ರವನ್ನು ತುಂಬಿಸಿ, ಪರಿಶೀಲಿಸಿ, ಕೇಂದ್ರ ಸಂಚಾಲಕರ ಸಹಿಯೊಡನೆ ನಮಗೆ ಕಳಿಸಿಕೊಡಬೇಕು.

4. ಪರೀಕ್ಷೆಗೆ ಕುಳಿತ ಅಭ್ಯರ್ಥಿಗಳಿಗೆ ಶೇ. 15 ರಷ್ಟು ರಿಯಾಯಿತಿ ದರದಲ್ಲಿ ಹಣ ಪಡೆದು ನಿಗದಿತ ಪುಸ್ತಕಗಳನ್ನು ಒದಗಿಸಲಾಗುವುದು. ಪರೀಕ್ಷೆಗಳನ್ನು ನಡೆಸಲು ಅನುಮತಿ ಪಡೆದವರು ಶೇ.20% ರಿಯಾಯಿತಿ ದರದಲ್ಲಿ ಸಾಹಿತ್ಯವನ್ನು ನಮ್ಮಿಂದ ಖರೀದಿಸಿ ಶೇ. 15% ದರದಲ್ಲಿ ಅಭ್ಯರ್ಥಿಗಳಿಗೆ ಕೊಡಬೇಕು. ನಿಯಮಾವಳಿಯಲ್ಲಿರುವ ಪುಸ್ತಕ ಯಾದಿಯಲ್ಲಿರುವ ಬೆಲೆಯಲ್ಲಿ 1/5 ಅಂತ 20% ಮುರಿದುಕೊಂಡು ಉಳಿದ ಹಣವನ್ನು ವ್ಯವಸ್ಥಾಪಕರು, ವಿಶ್ವಕಲ್ಯಾಣ ಮಿಷನ್ ಹೆಸರಿಗೆ ಡಿ.ಡಿ./ಎಂ.ಓ ಮೂಲಕ ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, ಎರಡನೆಯ ವಿಭಾಗ, ರಾಜಾಜಿನಗರ, ಬೆಂಗಳೂರು-560010 ಈ ವಿಳಾಸಕ್ಕೆ ಕಳಿಸಿದರೆ ಪಾರ್ಸಲ್ ಮೂಲಕ ಅಂಚೆಯಲ್ಲಿ ಅಥವಾ ಟ್ರಾನ್ಸ್‌ಪೋರ್ಟ್ ಮೂಲಕ ಕಳಿಸಿಕೊಡ ಲಾಗುವುದು. ವಿ.ಪಿ.ಪಿ ಮೂಲಕ ಕಳಿಸಲಾಗುವುದಿಲ್ಲ. ಈಗಾಗಲೇ ಖರೀದಿಸಿದ ಪುಸ್ತಕಗಳು ಇದ್ದರೆ ಅವುಗಳನ್ನೇ ಉಪಯೋಗಿಸ ಬಹುದು.

5. ಶಾಲೆ ಕಾಲೇಜುಗಳ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಗಮನದಲ್ಲಿ ಇರಿಸಿಕೊಂಡು ಸೆಪ್ಟೆಂಬರ್ ತಿಂಗಳಲ್ಲಿ ಪರೀಕ್ಷೆ ನಡೆಸಲು ಉದ್ದೇಶಿಸಲಾಗಿದೆ.

6. ವಿವಿಧ ಕೇಂದ್ರಗಳಿಂದ ಎಷ್ಟು ಜನ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಟ್ಟಿಸುವರೋ ಅಷ್ಟು ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆಗೆ ಮುಂಚೆ ಕಳುಹಿಸಿಕೊಡಲಾಗುವುದು.

7. ಉತ್ತರ ಪತ್ರಿಕೆಗೆ ಕೇಂದ್ರ ಸಂಚಾಲಕರು ಸಹಿ ಮಾಡಿದ ಕಾಗದಗಳನ್ನು ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸಲು ಪರವಾನಗಿ ಪಡೆದವರೇ ಒದಗಿಸಬೇಕು.

8. ಪರೀಕ್ಷೆ ಮುಗಿದ ಕೂಡಲೇ ಅಭ್ಯರ್ಥಿಗಳ ಹೆಸರು, ಸಹಿ, ಕೇಂದ್ರ ಸಂಚಾಲಕರ ಸಹಿ ಉಳ್ಳ ಯಾದಿಯೊಂದಿಗೆ ಉತ್ತರ ಪತ್ರಿಕೆಗಳನ್ನು ಕೆಳಗಿನ ವಿಳಾಸಕ್ಕೆ ರಿಜಿಸ್ಟರ್ಡ್ ಪಾರ್ಸಲ್ ಮೂಲಕ ನಮಗೆ ಕಳುಹಿಸಿ ಕೊಡಬೇಕು.

9. ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ಮಾಡುವಾಗ ವಯಸ್ಸು, ಶೈಕ್ಷಣಿಕ ಅರ್ಹತೆ, ಮಾತೃಭಾಷೆ, ವೃತ್ತಿ ಕರ್ನಾಟಕದ ವಿವಿಧ ಭಾಗ, ಹೊರ ರಾಜ್ಯ ಈ ಮುಂತಾಗಿ ಗಮನದಲ್ಲಿಟ್ಟುಕೊಂಡು ಅಂಕಗಳನ್ನು ಕೊಡಲಾಗುವುದು.

10. ಮೊದಲ ನಾಲ್ಕು ಪರೀಕ್ಷೆಗಳನ್ನು ಅಭ್ಯರ್ಥಿಗಳು ಇರುವ ಊರುಗಳಲ್ಲಿಯೇ ನಡೆಸಲಾಗುವುದು. ಅಲ್ಲಿ ಕೇಂದ್ರ ಇರದಿದ್ದರೆ ಹತ್ತಿರದ ಕೇಂದ್ರಕ್ಕೆ ಬರಲು ತಿಳಿಸಲಾಗುವುದು

11. ತೇರ್ಗಡೆಯಾದವರಿಗೆ ಪ್ರಮಾಣ ಪತ್ರಗಳನ್ನು ಕೊಡಲಾಗುವುದು. ಮೊದಲ ಮೂರು ರ‍್ಯಾಂಕ್‌ಗಳಿಸುವವರಿಗೆ (ಪಡೆದ ಅಂಕಗಳು ಪ್ರತಿ ಶತ 75ಕ್ಕೆ ಮೇಲ್ಪಟ್ಟು ಇರಬೇಕು) ವಿಶೇಷ ಬಹುಮಾನಗಳು ಉಂಟು. ವಿಶೇಷ ಬಹುಮಾನಗಳನ್ನು ಶರಣ ಮೇಳದಲ್ಲಿ ಕೊಡಲಾಗುವುದು. ಪರೀಕ್ಷೆಗಳನ್ನು ಕಟ್ಟಲು ಯಾವುದೇ ಜಾತಿ, ಮತ, ಪಂಥಗಳ ಭೇದವಿಲ್ಲ. ಆಸಕ್ತರೆಲ್ಲ ಭಾಗವಹಿಸಬಹುದು.

12. ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಅಭ್ಯರ್ಥಿಗಳ ಬೇಡಿಕೆಯ ಮೇರೆಗೆ ಇದಲ್ಲದೆ ಬೇರೆ ದಿನಾಂಕಗಳಲ್ಲೂ ಪರೀಕ್ಷೆ ನಡೆಸಲು ಅವಕಾಶ ಕಲ್ಪಿಸಲಾಗುವುದು.

ಭಾಗ - 2 ಪರೀಕ್ಷೆಯ ವಿವರಗಳು

ಬಸವ ತತ್ತ್ವ ಪ್ರವೇಶ - ಮೊದಲನೆಯ ಪರೀಕ್ಷೆ

ಅ) ವಯೋಮಿತಿ 13 ವರ್ಷಕ್ಕೆ ಮೇಲ್ಪಟ್ಟವರು, ನೋಂದಣಿ ಶುಲ್ಕ ರೂ. 20-00.

ಬ) ಪ್ರಶ್ನೆ ಪತ್ರಿಕೆ 2, ಒಟ್ಟು ಅಂಕಗಳು 200, ಪಠ್ಯಪುಸ್ತಕಗಳು ಆರು.

1. ವಿಶ್ವಜ್ಯೋತಿ ಬಸವಣ್ಣ	ರೂ. 12-00	ಪತ್ರಿಕೆ - 1
2. ವಚನಾಮೃತ	ರೂ. 18-50	
3. ಬಸವ ವಚನ ಸುಧಾ	ರೂ. 18-00	

(1-25 ವಚನ ಕಂಠಪಾಠ)

4. ಲಿಂಗಾಯತ ಧರ್ಮ ಸಾರ	ರೂ. 17-00	ಪತ್ರಿಕೆ - 2
5. ಬಸವ ಧರ್ಮೀಯರ ಹಬ್ಬ ಹುಣ್ಣಿಮೆ	ರೂ. 06-00	
6. ಸಾಮೂಹಿಕ ಪ್ರಾರ್ಥನೆ	ರೂ. 12-00	

ಬಸವ ತತ್ತ್ವ ಪರಿಚಯ - ಎರಡನೆಯ ಪರೀಕ್ಷೆ

ಅ) ವಯೋಮಿತಿ 14 ವರ್ಷಕ್ಕೆ ಮೇಲ್ಪಟ್ಟವರು. ನೋಂದಣಿ ಶುಲ್ಕ ರೂ. 20-00.

ಬ) ಪ್ರಶ್ನೆ ಪತ್ರಿಕೆ 2, ಒಟ್ಟು ಅಂಕಗಳು 200, ಪಠ್ಯಪುಸ್ತಕಗಳು 6.

1. ವಿಶ್ವಗುರು ಬಸವಣ್ಣ	ರೂ. 24-00	ಪತ್ರಿಕೆ - 1
2. ವಚನ ನವನೀತ	ರೂ. 24-00	
3. ಬಸವ ವಚನ ಸುಧಾ	ರೂ. 18-00	

(1-50 ವಚನ ಕಂಠಪಾಠ)

4. ಲಿಂಗಾಯತ ಧರ್ಮ ಕೈಪಿಡಿ	ರೂ. 15-00	ಪತ್ರಿಕೆ - 2
5. ದೃಷ್ಟಾಂತ ಸರಸಿ	ರೂ. 24-00	
6. ವೀರಮಾತೆ ಅಕ್ಕನಾಗಲಾಂಬಿಕೆ	ರೂ. 10-00	

ಬಸವ ತತ್ತ್ವ ಪ್ರವೀಣ - ಮೂರನೆಯ ಪರೀಕ್ಷೆ

ಅ) ವಯೋಮಿತಿ 18 ವರ್ಷಕ್ಕೆ ಮೇಲ್ಪಟ್ಟವರು. ನೋಂದಣಿ ಶುಲ್ಕ ರೂ. 25-00.

ಬ) ಪ್ರಶ್ನೆ ಪತ್ರಿಕೆ 3. ಒಟ್ಟು ಅಂಕಗಳು 300, ಪಠ್ಯಪುಸ್ತಕಗಳು 9.

1. ವಿಶ್ವವಿಭೂತಿ ಬಸವಣ್ಣ	ರೂ. 20-00	ಪತ್ರಿಕೆ - 1
2. ವಚನ ರಶ್ಮಿ	ರೂ. 15-00	
3. ಒಲಿದು ಹಾಡಿದ ಗೀತೆ	ರೂ. 16-00	
4. ವೀರ ಶಿರೋಮಣಿ ಕೆಳದಿ ಚೆನ್ನಮ್ಮ	ರೂ. 50-00	ಪತ್ರಿಕೆ - 2
5. ದೇವರ ಮಕ್ಕಳು	ರೂ. 18-00	
6. ಅಧ್ಯಾತ್ಮ ಮತ್ತು ಮಹಿಳೆ	ರೂ. 05-00	
7. ಚುಳುಕಾದ ಚೇತನ	ರೂ. 30-00	ಪತ್ರಿಕೆ - 3
8. ಕಲ್ಯಾಣ ಕ್ರಾಂತಿ	ರೂ. 30-00	
9. ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಣ್ಣ	ರೂ. 15-00	

ಬಸವ ತತ್ತ್ವ ಪ್ರಕಾಶ - ನಾಲ್ಕನೆಯ ಪರೀಕ್ಷೆ

ಅ) ವಯೋಮಿತಿ 20 ವರ್ಷಕ್ಕೆ ಮೇಲ್ಪಟ್ಟವರು, ನೋಂದಣಿ ಶುಲ್ಕ ರೂ. 35-00.

ಬ) ಪ್ರಶ್ನೆ ಪತ್ರಿಕೆ 3, ಒಟ್ಟು ಅಂಕಗಳು 300, ಪಠ್ಯಪುಸ್ತಕಗಳು 9.

1. ಪರಿಪೂರ್ಣ ಮಾನವ ಬಸವಣ್ಣ	ರೂ.	45-00	ಪತ್ರಿಕೆ - 1
2. ಡಾ|| ಚಿ.ಮೂ. ಅವರಿಗೊಂದು ಕೈಗನ್ನಡಿ	ರೂ.	36-00	
3. ಬಸವ ಧರ್ಮದ ಸಂಸ್ಕಾರಗಳು	ರೂ.	45-00	
4. ತರಂಗಿಣಿ	ರೂ.	160-00	ಪತ್ರಿಕೆ - 2
5. ಪೂರ್ಣಾವತಾರಿ ಬಸವಣ್ಣ	ರೂ.	15-00	
6. ದೇವರು	ರೂ.	13-00	
7. ಅಕ್ಕನ ಪ್ರವಚನ	ರೂ.	95-00	ಪತ್ರಿಕೆ - 3
8. ಪತಿತೋದ್ಧಾರಕ ಬಸವಣ್ಣ	ರೂ.	08-00	
9. ಹಿಂದೂ ಯಾರು?	ರೂ.	18-00	

ಬಸವ ತತ್ತ್ವ ಭಾಸ್ಕರ - ಐದನೆಯ ಪರೀಕ್ಷೆ

1. ವಯೋಮಿತಿ 25 ವರ್ಷಕ್ಕೆ ಮೇಲ್ಪಟ್ಟವರು, ನೋಂದಣಿ ಶುಲ್ಕ ರೂ. 60-00.
2. ಪ್ರೌಢ ಪ್ರಬಂಧ ಬರೆಯುವುದು ಅಂಕಗಳು 600.
3. ಅಭ್ಯರ್ಥಿಯಾಗಬಯಸುವವರು ಮೊದಲಿನ 4 ಪರೀಕ್ಷೆಗಳಲ್ಲಿ ತೇರ್ಗಡೆ ಆಗಿರಬೇಕು ಹಾಗೂ ರೂ. 60 ತುಂಬಿ ನಿಯಮಾವಳಿ ಪಡೆದು ಅದರಲ್ಲಿಯ ಅರ್ಜಿ ಪತ್ರವನ್ನು ತುಂಬಿ ಕಳುಹಿಸಬೇಕು.
4. ಇದು ಸಂಶೋಧನಾತ್ಮಕ ಪ್ರೌಢ ಪ್ರಬಂಧವನ್ನು ಬರೆಯಲಿಕ್ಕೆ ಯೋಜಿತವಾದುದು.
5. ಪ್ರೌಢ ಪ್ರಬಂಧದ ಬರವಣಿಗೆಗೆ ಬೇಕಾದ ವಿಷಯವೊಂದನ್ನು ಆರಿಸಿ ಕೊಡುವುದೇ ಅಲ್ಲದೆ, ಅದಕ್ಕೆ ಸೂಕ್ತ ಮಾರ್ಗದರ್ಶನ ಸಹ ಮಾಡಲಾಗುವುದು. ಬರವಣಿಗೆಗೆ ಬೇಕಾದ ಗ್ರಂಥಗಳ ಸೌಲಭ್ಯವನ್ನು ಬಸವ ಧರ್ಮ ಪೀಠದಲ್ಲಿ ಒದಗಿಸಿ ಕೊಡುವುದೇ ಅಲ್ಲದೆ ಕೂಡಲ ಸಂಗಮದ ಮಹಾಮನೆಯಲ್ಲಿ ಇದ್ದು ಅಧ್ಯಯನ ಮಾಡಲಿಕ್ಕೆ ಊಟ-ವಸತಿಗಳ ಸೌಲಭ್ಯವನ್ನು ಒದಗಿಸಲಾಗುವುದು.
6. ಗ್ರಂಥವು ಒಪ್ಪಿಗೆಯಾದಲ್ಲಿ ಪದವಿಯನ್ನು ಕೊಡಲಾಗುವುದು. 1001 ರೂ.ಗಳ ನಗದು ಬಹುಮಾನದೊಡನೆ ಚಿನ್ನದ ಪದಕ ಕೊಟ್ಟು ಆ ಗ್ರಂಥವನ್ನು ಪ್ರಕಟಿಸಲಾಗುವುದು. •

ವ್ಯವಹರಿಸುವ ವಿಳಾಸ :
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ನಿರ್ದೇಶಕರು, ಶ್ರೀ ಬಸವೇಶ್ವರ ದಿವ್ಯ ಜ್ಞಾನ ವಿದ್ಯಾಲಯ
ಬಸವ ಗಂಗೋತ್ರಿ
ಮೈಸೂರು ರಸ್ತೆ, ಕುಂಬಳಗೋಡು-560074
ಬೆಂಗಳೂರು ದಕ್ಷಿಣ, ದೂರವಾಣಿ : 8437234

ಆರಾರ ಸಂಗವೇನೇನ ಮಾಡದಯ್ಯಾ?

- ಶರಣೆ. ಸರೋಜಮ್ಮ ನಾಗರಾಜ್

ಕುಂಡಲಿಗನೊಂದು ಕೀಡೆಯ ತಂದು
ತನ್ನಂತೆ ಮಾಡಿತಲ್ಲಾ ಎಲೆ ಮಾನವ
ಕೇಳಿ ನಂಬಯ್ಯಾ, ನೋಡಿ ನಂಬಯ್ಯಾ, ಎಲೆ ಮಾನವಾ
ಲಿಂಗದೇವನ ಶರಣರ ಅನುಭಾವ
ಇದರಿಂದ ಕಿರುಕುಳವೆ, ಎಲೆ ಮಾನವಾ?

- ಧರ್ಮಪಿತ ಬಸವಣ್ಣನವರು

ಹನ್ನೆರಡನೆ ಶತಮಾನವನ್ನು, ಅಂದು ಇದ್ದ ಬಸವಾನುಯಾಯಿ ಶರಣರನ್ನು ಕಟೆದ ರೂಹಾರಿ ವಿಶ್ವಗುರು, ಮಹಾಮಾನವತಾವಾದಿ, ಶಕಪುರುಷ ಗುರು ಬಸವಣ್ಣನವರು. ಇವರ ಹೆಸರನ್ನು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು.

ಗುರು ಬಸವಣ್ಣನವರು- ಪರಮಾತ್ಮನ ಸೃಷ್ಟಿಯ ಪ್ರತಿಯೊಂದು ವಸ್ತುವನ್ನು, ಪ್ರತಿಯೊಂದು ಜೀವಿಯನ್ನು, ಅದರ ಇತಿಹಾಸವನ್ನು, ಅದರ ನಡೆಗಳನ್ನು ಕುತೂಹಲದಿಂದ ವೀಕ್ಷಿಸಿದ್ದಾರೆ. ಅವುಗಳನ್ನು ತಮ್ಮ ವಚನಗಳಲ್ಲಿ ಉಪಮೆಗಳಾಗಿ, ಉದಾಹರಣೆಗಳಾಗಿ ಬಳಸಿಕೊಂಡಿದ್ದಾರೆ.

ಮೇಲಿನ ವಚನದಲ್ಲಿ ಕುರುಡಿ ಕುಟಾರ ಹುಳುವನ್ನು ಪೂಜಾರಿ, ಪುರೋಹಿತಶಾಹಿ, ಪಟ್ಟಭದ್ರರಿಗೆ, ಜಾತಿವಾದಿಗಳಿಗೆ, ಸಂಪ್ರದಾಯವಾದಿ ಮಡಿವಂತರಿಗೆ ತೋರಿಸಿ ಹೇಳುತ್ತಿದ್ದಾರೆ. ಏಕೆ ಹೇಳುತ್ತಿರಬಹುದೆಂದು ಚಿಂತಿಸಿದಾಗ ಅಪ್ಪ ಬಸವಣ್ಣನವರು ಎನ್ನ ಒಳಹೊಕ್ಕು ಈ ರೀತಿ ಹೇಳಿದರು -

ಧರ್ಮಪಿತ ಬಸವಣ್ಣನವರು ಕಟ್ಟಿದ್ದ ಆದರ್ಶ ಸಮಾಜ, ಶರಣ ಸಮಾಜ (ಕಲ್ಯಾಣ ರಾಜ್ಯ) ಹೀಗಿತ್ತು ಅಲ್ಲಿ ಜಾತಿ, ವರ್ಣ, ವರ್ಗ, ಲಿಂಗ ಭೇದಗಳಿರಲಿಲ್ಲ. ಮೂಢಾಚಾರ, ಕಂದಾಚಾರಗಳಿರಲಿಲ್ಲ. ಪೂಜಾರಿ, ಪುರೋಹಿತಶಾಹಿಗಳಿಗೆ ಪ್ರವೇಶವಿರಲಿಲ್ಲ. ಶೋಷಣೆರಹಿತವಾದ, ಸರ್ವಸ್ವತಂತ್ರವುಳ್ಳ, ಸರ್ವ ಸಮಾನತೆಗಳಿರುವ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ, ವಿಶ್ವವಿನೂತನ ತತ್ತ್ವಗಳಿಂದ ಕೂಡಿದ ಪ್ರಜಾಸತ್ತಾತ್ಮಕ ಸಮಾಜವಾಗಿತ್ತು.

ಗುರು ಬಸವಣ್ಣನವರು ಕಟ್ಟಬಯಸಿದ ಈ ರಾಜ್ಯಕ್ಕೆ ಅಥವಾ ಈ ಸಮಾಜಕ್ಕೆ ಸೇರಬಯಸಿ ಬಂದವರು ಅಸಂಖ್ಯಾತರು. ಅವರಲ್ಲಿ ಎಲ್ಲಾ ಜಾತಿಯ, ಎಲ್ಲಾ ಜನಾಂಗದ ಜನರೂ ಇದ್ದರು. ಹಾರುವನಿಂದ ಹಿಡಿದು ಅಂತ್ಯಜನರವರೆಗೆ ಎಲ್ಲಾ ಜನಾಂಗದವರು ಗುರು ಬಸವಣ್ಣನವರಿದ್ದ ಕಲ್ಯಾಣದತ್ತ ಧಾವಿಸಿ ಬಂದರು.

ಅವರೆಲ್ಲರನ್ನು ಗುರು ಬಸವಣ್ಣನವರು ಅಪ್ಪ, ಬೊಪ್ಪ, ಅವ್ವ, ಅಕ್ಕ ಎಂದು ಅಪ್ಪಿಕೊಂಡರು. ಅವರಿಗೆ ಬಸವ ಸಂವಿಧಾನ (ವಚನ ಸಾಹಿತ್ಯ)ವನ್ನು ತಿಳಿಸಿ, ದೀಕ್ಷಾ ಸಂಸ್ಕಾರವನ್ನು ಕೊಟ್ಟು ತಮ್ಮಂತೆ ಮಾಡಿದರು. ಧರ್ಮವಂತರನ್ನಾಗಿ ಮಾಡಿದರು, ಶರಣರನ್ನಾಗಿ ಮಾಡಿದರು. ಇದನ್ನು ಸಹಿಸದ ಪಟ್ಟಭದ್ರರು ಗುರು ಬಸವಣ್ಣನವರನ್ನು ಪ್ರಶ್ನಿಸಿದ್ದಾರೆ. ಕೆಳಸ್ತರದ ಜನಾಂಗದಲ್ಲಿ ಜನಿಸಿದ ಇವರು, ಮೇಲ್ವರ್ಗದಲ್ಲಿ ಜನಿಸಿದ ನಿಮ್ಮ, ನಮ್ಮ ಸರಿಸಮಾನರಾಗಲು ಹೇಗೆ ಸಾಧ್ಯ? ಎಂದು.

ಆಗ ಕುಂಡಲಿಗನ ಉದಾಹರಣೆಯನ್ನು ಕೊಟ್ಟು, ಸಾಮಾನ್ಯ ಕೀಡೆಯೊಂದು ಒಂದು ಹುಳುವನ್ನು ತಂದು, ಅದಕ್ಕೆ ಒಂದು ಗೂಡು ಕಟ್ಟಿ ಇರಿಸಿ, ಅದರ ಸುತ್ತ ಸುತ್ತುತ್ತಾ, ಗುಯಿಗುಯಿ ಗಾನವನ್ನು ಮಾಡುತ್ತಾ ಅದನ್ನು ತನ್ನಂತೆ, ತನ್ನ ಸ್ವರೂಪದಂತೆ ಮಾಡುತ್ತದೆ. ಇದನ್ನು ನೋಡಿ ನಂಬಯ್ಯಾ, ಕೇಳಿ ನಂಬಯ್ಯಾ ಮಾನವ. ಮಾನವನಾಗಿ ನಮ್ಮ ನಿಮ್ಮಂತೆ ರಕ್ತ, ಮಾಂಸ, ಅವಯವಗಳನ್ನು ಹೊಂದಿದ ಸಂಸ್ಕಾರವಿಲ್ಲದ ಮಾನವರಿಗೆ ಸಂಸ್ಕಾರ ಕೊಟ್ಟರೆ ಅವರೇಕೆ ಶರಣರಾಗರು ? ಮಾನವರಾಗಿ ಹುಟ್ಟಿದ ನಾವು ಕೀಡೆಗಿಂತ ಕಡೆಯಾಗಬೇಕೆ ?

ಗುರು ಬಸವಣ್ಣನವರು ಕಬ್ಬಿಣವನ್ನು ಮುಟ್ಟಿ ಚಿನ್ನವನ್ನಾಗಿ ಮಾಡುವ ಪರುಷ ಮಣಿಯಂತಿರಲಿಲ್ಲ. ಕಬ್ಬಿಣದ ನಾಯಿಯನ್ನು ಮುಟ್ಟಿ ಚಿನ್ನದ ನಾಯಿಯನ್ನಾಗಿ ಮಾಡಿದರೆ ಅದು ನಾಯಿಯೇ ವಿನಃ ಬೇರೇನಾಗಲೂ ಸಾಧ್ಯವಿಲ್ಲ. ಆದರೆ ಗುರು ಬಸವಣ್ಣನವರು ನರರನ್ನು ಹರನನ್ನಾಗಿ, ಶರಣರನ್ನಾಗಿ ಮಾಡಿದ, ಮಹಂತರು, ಅವತಾರಿಕರು, ಪವಾಡಪುರುಷರು.

ವಿಶ್ವದ ಇತಿಹಾಸದ ಪುಟಗಳನ್ನು ತೆಗೆದು ನೋಡಿದಾಗ ಗುರು ಬಸವಣ್ಣನವರಂತಹ ಇನ್ನೊಬ್ಬ ಪ್ರವಾದಿ, ಮಹಾತ್ಮ, ಸಂತ ಕಾಣಸಿಗುವುದಿಲ್ಲ. ಎಲ್ಲಾ ಪ್ರವಾದಿಗಳೂ, ಮಹಾತ್ಮರು, ಸಂತರು, ತಮ್ಮ ಆಶ್ರಯಕ್ಕೆ ಬಂದವರನ್ನು ತಮ್ಮ ಅನುಯಾಯಿಗಳನ್ನಾಗಿ, ಶಿಷ್ಯರನ್ನಾಗಿ, ಆಪ್ತರನ್ನಾಗಿ ಮಾಡಿಕೊಂಡರೇ ವಿನಃ ತಮ್ಮಂತೆ ಮಾಡಿಕೊಳ್ಳಲಿಲ್ಲ. ತಾವು ದೊಡ್ಡವರಾಗೇ ಉಳಿದು, ಇತರರನ್ನು ತಮ್ಮ ಅನುಯಾಯಿಗಳನ್ನಾಗಿ ಮಾಡಿಕೊಂಡರು.

ಆದರೆ ಅಪ್ಪ ಬಸವಣ್ಣನವರು ತಾವೂ ದೊಡ್ಡವರು, ಮಹಾತ್ಮರು, ಧರ್ಮಪಿತರು ಎಂದು ಭಾವಿಸದೆ ಇತರ ಶರಣರನ್ನು ಹಿರಿಯರನ್ನಾಗಿ, ಶ್ರೇಷ್ಠರನ್ನಾಗಿ ಕಂಡರು.

ಉದಾ ಭಕ್ತಿಭಂಡಾರಿಯಾದ ಗುರು ಬಸವಣ್ಣನವರು -

ಭಕ್ತಿಯಿಲ್ಲದ ಬಡವನಾನಯ್ಯ, ಕಕ್ಕಯ್ಯನ ಮನೆಯಲು ಬೇಡಿದೆ
ಚನ್ನಯ್ಯನ ಮನೆಯಲು ಬೇಡಿದೆ, ದಾಸಯ್ಯನ ಮನೆಯಲು ಬೇಡಿದೆ
ಎಲ್ಲಾ ಪುರಾತರು ನೆರೆದು ಭಕ್ತಿ ಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಲಿಂಗದೇವಾ.

ಆಗ ಉತ್ತಮರೆನಿಸಿಕೊಂಡ ಜನಾಂಗದಲ್ಲಿ ಜನಿಸಿದ್ದ ಗುರು ಬಸವಣ್ಣನವರು

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ
ದಾಸಯ್ಯ ಶಿವದಾನವ ನೆರೆಯ ನೋಡಯ್ಯಾ
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ
ಉನ್ನತ ಮಹಿಮ ಲಿಂಗದೇವಾ, ಶಿವಧೋ! ಶಿವಧೋ ॥

ಇಂತಹ ಹಲವಾರು ಮಾತುಗಳನ್ನು ಅವರ ವಚನಗಳಲ್ಲಿ ಕಾಣಬಹುದು. ಇಂತಹ ಪ್ರವಾದಿ ಗುರು ಬಸವಣ್ಣನವರು ಒಬ್ಬರೆ. ಇವರಂತಹವರು ಇನ್ನೊಬ್ಬರು ಹಿಂದೆ ಆಗಿರಲಿಲ್ಲ, ಮುಂದೆ ಆಗುವುದಿಲ್ಲ

"ಏಕೋ ಗುರುಬಸವ ನ ದ್ವಿತೀಯ, ನ ದ್ವಿತೀಯ"

ಸಾಮಾನ್ಯವಾಗಿ ಒಬ್ಬ ಗುರು ತನ್ನ ಶಿಷ್ಯರನ್ನು ತಮ್ಮಂತೆ ಮಾಡುವುದಿಲ್ಲ, ತಮ್ಮಂತೆ ಕಾಣುವುದಿಲ್ಲ. ಏಕೆಂದರೆ ತಮ್ಮ ಸ್ಥಾನಕ್ಕೆ, ಗೌರವಕ್ಕೆ ಚ್ಯುತಿ ಬರುತ್ತದೆಂದು ತಿಳಿದಿರುತ್ತಾರೆ. ಹೇಗೆ ಒಬ್ಬ ಜಟ್ಟಿ ಎಲ್ಲಾ ಪಟ್ಟುಗಳನ್ನು ತನ್ನ ಶಿಷ್ಯರಿಗೆ ಕಲಿಸುವುದಿಲ್ಲ, ಏಕೆಂದರೆ ಅವರು ಶಿಷ್ಯರು, ತಾನು ಗುರು, ಅವರು ಶಿಷ್ಯರಾಗೆ ಇರಬೇಕು, ತಾನು ಗುರುವಾಗಿಯೇ ಇರಬೇಕು ಎಂದು.

ಆದರೆ ಗುರು ಬಸವಣ್ಣನವರು ತಮ್ಮಲ್ಲಿಗೆ ಬಂದವರನ್ನು ತಮ್ಮಂತೆ, ತಮಗಿಂತ ಹೆಚ್ಚಿನವರನ್ನಾಗಿ ಕಂಡರೂ, ಆದರೆ ಅವರಾರು ತಾವು ಗುರು ಬಸವಣ್ಣನವರಿಗಿಂತ ಹಿರಿಯರು, ಶ್ರೇಷ್ಠರೆಂದು ಭಾವಿಸಲಿಲ್ಲ. ಅಂತೆಯೆ ಅವರು ಗುರು ಬಸವಣ್ಣನವರನ್ನು ಹೇಗೆ ಕಂಡರೆಂಬುದನ್ನು ಅವರ ವಚನಗಳಲ್ಲಿ ಇಂದಿಗೂ ಕಾಣಬಹುದು.

ಅವಕಾಶ ವಂಚಿತರಾದ ಜನ, ಅವಕಾಶ, ಅನುಕೂಲ ದೊರೆತಾಗ ಹೇಗೆ ಬೆಳೆಯಬಲ್ಲರೆಂಬುದಕ್ಕೆ ಅಂದಿನ ಬಸವ ಧರ್ಮದ ಒಂದು ಲಕ್ಷದ ತೊಂಬತ್ತಾರು ಸಾವಿರ ಅನುಯಾಯಿಗಳಲ್ಲಿ, ಬಸವ ತತ್ತ್ವ ನಿಷ್ಠರಾದ ಏಳುನೂರಾ ಎಪ್ಪತ್ತು ಜನ ಅಮರಗಣಂಗಳಲ್ಲಿ 330 ಜನ ವಚನಕಾರರ ವಚನಗಳನ್ನು ಓದಿದರೆ ತಿಳಿಯುತ್ತದೆ ಅವರು ಹೇಗೆ ಎತ್ತರಕ್ಕೆ ಬೆಳೆದಿದ್ದರೆಂಬುದು. ಅದನ್ನೇ ಅಪ್ಪ ಬಸವಣ್ಣನವರು ಹೇಳುತ್ತಾರೆ, ಸರಿಯಾದ ಸಂಗಸಿಕ್ಕರೆ ಎಂತಹವರೂ ಬದಲಾಗಬಲ್ಲರೆಂದು:

ಆರಾರ ಸಂಗವೇನೇನ ಮಾಡದಯ್ಯಾ ?
ಕೀಡೆ ಕುಂಡಲಿಗನಾಗದೇ ಅಯ್ಯಾ ?
ಚಂದನದ ಸನ್ನಿಧಿಯಲ್ಲಿ ಪರಿಮಳತಾಗಿ,
ಬೇವು, ಜೊಬ್ಬುಲಿ ತೆರೆಯೆ ಗಂಧಂಗಳಾಗವೆ ?
ನಮ್ಮ ಲಿಂಗದೇವನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ ?

ಅಂದು ಅಪ್ಪ ಬಸವಣ್ಣನವರು ಮಾಡಿದ ಪವಾಡವನ್ನು, ತೋರಿದ ಆದರ್ಶವನ್ನು ಇಂದು ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು ಮಾಡಿದರು. ಅದನ್ನು ಶ್ರೀಮನ್ ನಿರಂಜನ ಮಹಾಜಗದ್ಗುರು ಪೂಜ್ಯ ಮಾತಾಜಿಯವರು ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಅವರು ಚೆಲ್ಲುತ್ತಿರುವ ಬಸವ ಬೆಳಗಿನಲ್ಲಿ ನಮ್ಮ ಬಾಳಿನ ಹಣತೆಗಳನ್ನು ಹಚ್ಚಿಕೊಂಡು, ನಮ್ಮಲ್ಲಿ ತುಂಬಿರುವ ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿಕೊಂಡರೆ, ನಾವು ಮಾನವರಾಗಿ ಹುಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ನಾವಿಂದು ಬಸವ ಭಕ್ತರು, ಬಸವ ಧರ್ಮಾನುಯಾಯಿಗಳು, ಬಸವ ಸಂತಾನಿಗಳು ಎಂದು ಹೇಳಲು ಹೆಮ್ಮೆಪಡುತ್ತೇವೆ. ಇದಕ್ಕೆ ಕಾರಣ ಕರ್ತರು ಪೂಜ್ಯ ಅಪ್ಪಾಜಿಯವರು ಹಾಗೂ ಪೂಜ್ಯ ಮಾತಾಜಿಯವರು.

ಈಗ ಎಲ್ಲೆಲ್ಲೂ ಬಸವ ನಾಮದ ಅಲೆ ಎದ್ದಿದೆ ಎಂದು ಕೇವಲ ನಾವು ಹೇಳಿದರೆ ಸಾಲದು, ಗುರು ಬಸವಣ್ಣನವರು ನಡೆದ, ನುಡಿದ ಹಾದಿಯಲ್ಲಿ ನಡೆದಾಗ ನಿಜ ಸಂತಾನಿಗಳು ನಾವಾಗುತ್ತೇವೆ, ಆದ್ದರಿಂದ ನಾವು ಈ ರೀತಿ ಆಗಲು ಪ್ರಯತ್ನಿಸೋಣ ಮತ್ತು ಆಗೋಣ.

* * *

ಪ್ರವಚನ - ಒಂದು ಅನುಭವ

- ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಸೃಷ್ಟಿಕರ್ತ ಲಿಂಗದೇವನು ಒಂದೊಂದು ಪ್ರಾಣಿಗಳಿಗೆ ಒಂದೊಂದು ವಿಶೇಷ ಶಕ್ತಿ ಕೊಟ್ಟಿದ್ದಾನೆ. ಮಧುರ ಗುಣವನ್ನು ಇರುವೆಗೆ, ವೇಳೆಯ ಗುಣವನ್ನು ಕೋಳಿಗೆ, ಗೋತ್ರದ ಗುಣವನ್ನು ಕಾಗೆಗೆ, ಹೀಗೆ ನಾವು ಸೂಕ್ಷ್ಮವಾಗಿ ಗ್ರಹಿಸುತ್ತಾ ಹೋದಾಗ ಯಾವುದೇ ಪ್ರಾಣಿಯಾಗಲಿ ಅಥವಾ ಎಂಥ ವ್ಯಕ್ತಿಯೇ ಆಗಿರಲಿ ಅವನಲ್ಲಿ ಒಂದಾದರು ದೇವದತ್ತ ಗುಣ-ಪ್ರತಿಭೆ ಇದ್ದೇ ಇರುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಸಮರ್ಥನಾದ ಗುರು ಮಾಡುತ್ತಾನೆ. ಅಂಥ ಯೋಗ್ಯವಾದ ಗುರುವನ್ನು ಅರಸಿ ಶರಣಾಗುವವರೆಗು ಮುಕ್ತಿಯೂ ಇಲ್ಲ; ಶಕ್ತಿಯೂ ಇಲ್ಲ. ನಾವು ಯಾವುದೇ ಸಾಧನೆ ಮಾಡಬೇಕಾದರು ಮೊದಲು ಗುರುವಿಗೆ ಮತ್ತು ಜಗತ್ತನ್ನು ಯಂತ್ರವಾಹಕನಂತೆ ಆಡಿಸುತ್ತಿರುವ ಪರಮೋನ್ನತ ಶಕ್ತಿಗೆ ಶರಣಾಗಬೇಕು.

ಕೋಳಿಯು ತತ್ತಿಗಳಿಗೆ ಕಾವು ಕೊಟ್ಟು ಮರಿಗಳನ್ನು ಮಾಡುವಂತೆ ಗುರುಗಳು ಸಹ ಮಾಂಸದ ಮುದ್ದೆಯಂತಿರುವ ಮುಮುಕ್ಷುಗಳನ್ನು, ಜಿಜ್ಞಾಸುಗಳನ್ನು, ಆಧ್ಯಾತ್ಮ ಜೀವಿಗಳನ್ನು ತಮ್ಮ ಆಶ್ರಯದಲ್ಲಿರಿಸಿಕೊಂಡು ಜ್ಞಾನ-ವಾತ್ಸಲ್ಯಗಳ ಧಾರೆಯೆರೆದು, ಪೋಷಿಸಿ, ದೀಕ್ಷೆ, ಮಂತ್ರ ಸಂಸ್ಕಾರ, ಅನುಗ್ರಹ ಎಂಬ ಕಾವು ಕೊಡುವ ಮೂಲಕ ಮಂತ್ರ ಪಿಂಡವನ್ನಾಗಿ ಮಾಡುತ್ತಾರೆ. ಆಗ ಸಾಧಕನು ನರಜನ್ಮವನ್ನು ಕಳೆದುಕೊಂಡು ಹರಜನ್ಮಕ್ಕೆ ಪ್ರವೇಶ ಪಡೆಯುತ್ತಾನೆ. ಸಾಧನೆಯ ಹಾದಿಯಲ್ಲಿ ಗುರುವಿನ ಶಕ್ತಿ ಮತ್ತು ಶಿಷ್ಯನ ಭಕ್ತಿ-ಶರಣಾಗತಿ ಜತೆಗೂಡಿದಾಗ ಮಾತ್ರ ಯಶಸ್ಸು ಸುಲಭ ಸಾಧ್ಯವಾಗುತ್ತದೆ ಎಂಬುದಕ್ಕೆ ಇತ್ತೀಚೆಗೆ ನಡೆದ ಚನ್ನಪಟ್ಟಣದ ಪ್ರವಚನವೇ ಜ್ವಲಂತ ಉದಾಹರಣೆಯಾಗಿದೆ.

ಶರಣರ, ಮಹಾತ್ಮರ, ತ್ಯಾಗಿಗಳ ಸತ್ಸಂಕಲ್ಪಗಳು ಶತಮಾನಗಳು ಉರುಳಿದರೂ ಎಂದಿಗೂ ವ್ಯರ್ಥವಾಗುವುದಿಲ್ಲ ಎಂಬುದನ್ನು ಅನುಭವದಿಂದ ತಿಳಿಯಬಹುದು. ಹೇಗೆಂದರೆ ಈ ಗಾಳಿಯಲ್ಲಿ ಸಂಕಲ್ಪ ತರಂಗಗಳು ಸದಾ ಸುತ್ತುತ್ತಿರುತ್ತವೆ. ದೂರದರ್ಶನದ ದೃಶ್ಯ ತರಂಗಗಳು ಮತ್ತು ಆಕಾಶವಾಣಿಯ ಧ್ವನಿ ತರಂಗಗಳು ಗಾಳಿಯ ಮೂಲಕವೇ ಹರಿದು ಬರುತ್ತವೆ. ಯಾರ ಮನೆಯ ಟಿ.ವಿ ಅಥವಾ ರೇಡಿಯೋ ಕ್ರಿಯಾ ಶೀಲವಾಗಿರುವುದೋ ಅಲ್ಲಿ ಮಾತ್ರ ದೂರದರ್ಶನದಲ್ಲಿ ಚಿತ್ರಗಳು ಕಾಣುತ್ತದೆ, ರೇಡಿಯೋದಲ್ಲಿ ಧ್ವನಿಯೂ ಕೇಳುತ್ತದೆ. ರೇಡಿಯೋ ಆರಿಸಿದಾಗ ಕೇಳಲು ಸಾಧ್ಯವಿಲ್ಲ. ಹಾಗೆಯೇ ಶರಣರ, ಮಹಾತ್ಮರ ಸಂಕಲ್ಪಗಳು ತಮ್ಮ ಧ್ಯೇಯೋದ್ದೇಶಕ್ಕೆ ಅನುಗುಣವಾದ ಮನಸ್ಸು, ಹೃದಯಗಳ ಮೂಲಕ ಕೆಲಸ ಮಾಡಿಸಿಕೊಳ್ಳುತ್ತವೆ ಎಂಬುದು ಅನುಭಾವ ಜಗತ್ತಿನ ಸತ್ಯ.

ಇಷ್ಟೆಲ್ಲ ಪೀಠಿಕೆ ಏಕೆಂದರೆ ಪೂಜ್ಯ ಮಾತಾಜಿಯವರು ಅಮೆರಿಕಾಕ್ಕೆ ತೆರಳುವಾಗ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಹಾಗೂ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮೀಜಿಯವರಿಗೆ ತಿಳಿಸಿ ಹೋಗಿದ್ದರು ಏನೆಂದರೆ ಎಲ್ಲ ಸ್ವಾಮಿಗಳು ಬೆಂಗಳೂರು ಬಸವ ಮಂಟಪದಲ್ಲಿಯೇ ಇದ್ದುಕೊಂಡು ವಿವಿಧ ಬಡಾವಣೆಗಳಲ್ಲಿ ಪ್ರವಚನ ಮಾಡ್ತಾ ಇರಲಿ ಎಂದು. ಅದರಂತೆ ಕೆ.ಆರ್. ಪುರಂನಲ್ಲಿ ಪೂಜ್ಯ ಚನ್ನಬಸವರಾಜ ಸ್ವಾಮೀಜಿಯವರ ಪ್ರವಚನ, ಟಿ. ದಾಸರಹಳ್ಳಿಯಲ್ಲಿ ಪೂಜ್ಯ ಬಸವಕುಮಾರ ಸ್ವಾಮೀಜಿಯವರ ಪ್ರವಚನ ಆರಂಭವಾಯಿತು. ನನಗೋಸ್ಕರ ಸಾಕಷ್ಟು ಮೈದಾನಗಳನ್ನು ಶೋಧಿಸಿ

ಕೊನೆಗೆ ಬೆಂಗಳೂರಿನ ಪೇರೆವಿಟ್ಸ್ ಶಾಲೆ ಹತ್ತಿರದ ಒನಕೆ ಓಬವ್ವ ಮೈದಾನದಲ್ಲಿ ಮಾಡಬೇಕೆಂದು ನಿರ್ಧಾರವಾಯಿತು, ಅದಕ್ಕೆ ಅನುಮತಿಯನ್ನು ಪಡೆದಾಯಿತು. ಇನ್ನೇನು ಅಂದು ಸಾಯಂಕಾಲ ಕರಪತ್ರ ಮುದ್ರಿಸಿಕೊಂಡು ಪ್ರಚಾರಮಾಡಿ ಮಾರನೆಯ ದಿನದಿಂದ ಪ್ರವಚನ ಪ್ರಾರಂಭಿಸಬೇಕಾಗಿತ್ತು ಅಷ್ಟರಲ್ಲಿ ಒಂದು ವಿಶೇಷ ಘಟನೆ ನಡೆಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಚನ್ನಪಟ್ಟಣದ ಕೋಟೆ ಬಸವರಾಜ ಎಂಬುವವರು ಬೆಂಗಳೂರು ಬಸವಮಂಟಪಕೆ ಬಂದು ಪೂಜ್ಯ ಅಲ್ಲಮಪ್ರಭು ಸ್ವಾಮೀಜಿಯವರನ್ನು ಭೇಟಿಯಾಗಿದ್ದಾರೆ. ಮೊದಲು ನಿಗದಿತವಾಗಿದ್ದ ಒನಕೆ ಓಬವ್ವ ಮೈದಾನ ನಮ್ಮ ಪ್ರವಚನಕ್ಕೆ ಸೂಕ್ತವಲ್ಲ, ಅಲ್ಲಿ ಪ್ರವಚನ ಮಾಡುವುದು ಬೇಡ ಎಂದು ಈ ಮುಂಚೆಯೇ ಪೂಜ್ಯ ಸ್ವಾಮೀಜಿ ಹೇಳಿದ್ದರು. ಶರಣ. ಬಸವರಾಜ ಅವರು 8 ವರ್ಷಗಳ ಹಿಂದೆ ಚನ್ನಪಟ್ಟಣದಲ್ಲಿ ಪೂಜ್ಯ ಅಪ್ಪಾಜಿಯವರ ಪ್ರವಚನ ಕೇಳಿ ತಮ್ಮಷ್ಟಕ್ಕೆ ತಾವು ತುಂಬಾ ನಿಷ್ಠೆಯಿಂದ ಆಚರಣೆ ಮಾಡುತ್ತಾ ಬಂದಿದ್ದಾರೆ. ಅಂದು ಅವರು ಬಸವ ಮಂಟಪಕ್ಕೆ ಬಂದ ಕಾರಣವೇ ಒಂದು ದೊಡ್ಡ ಪವಾಡ.

ಬಸವರಾಜ ಅವರು ಒಂದು ತಳ್ಳುವ ಗಾಡಿಯಲ್ಲಿ ಇಡ್ಲಿ ಮಾಡಿ ವ್ಯಾಪಾರ ಮಾಡುವ ಪವಿತ್ರ ಕಾಯಕ ಮಾಡುತ್ತಾರೆ. ಪ್ರತಿನಿತ್ಯ ಸಾಯಂಕಾಲ 6 ರಿಂದ ರಾತ್ರಿ 11 ಗಂಟೆವರೆಗೆ ಮಾತ್ರ ಅವರ ಕಾಯಕ. ದಿನಾಂಕ 26-6-03 ರಂದು ಸಾಯಂಕಾಲ ಗಾಡಿ ತೆಗೆದುಕೊಂಡು ವ್ಯಾಪಾರಕ್ಕೆ ಹೊರಡಲು ಸಿದ್ಧರಾದರು. ಅವರ ಒಂದು ವಿಶೇಷ ಗುಣವೆಂದರೆ ಕಾಯಕಕ್ಕೆ ಹೊರಡುವ ಮೊದಲು ತಮ್ಮ ಚಿಕ್ಕದಾದರೂ ಚೊಕ್ಕವಾದ ಮನೆಯಲ್ಲಿ ಬಾಗಿಲ ನೇರಕ್ಕೆ ತೂಗು ಹಾಕಿರುವ ಗುರು ಬಸವಣ್ಣನವರ ಭಾವಚಿತ್ರ ಹಾಗೂ ಮನೆಯ ಮೇಲೆ ಕಟ್ಟಿರುವ ಧ್ವಜವನ್ನು ಸಂಜೆ 7-00ಗಂಟೆಗೆ ನೆನಹು ಮುಗಿದ ನಂತರ ಕಣ್ಣಾರೇ ಕಂಡು ಭಕ್ತಿಯಿಂದ ವಂದಿಸಿ ತಮ್ಮ ಇಡ್ಲಿ ಬಂಡಿಯನ್ನು ತೆಗೆದುಕೊಂಡು ಹೋಗಿ ಮುಖ್ಯರಸ್ತೆಯ ಒಂದು ಸ್ಥಳದಲ್ಲಿ ವ್ಯಾಪಾರ ಮಾಡುವುದು. ಅಂದು ಧ್ವಜವನ್ನು ನೋಡುತ್ತಾರೆ ಅದು ಹರಿದು ತುಂಡಾಗಿತ್ತು. ಅದನ್ನು ಕಂಡು ಗಾಬರಿ ಎನಿಸಿ, ಹೊಸ ಧ್ವಜವನ್ನು ತಂದು ಹಾರಿಸಬೇಕೆಂದು ತಿಳಿದು ಬೆಂಗಳೂರಿನ ಬಸವ ಮಂಟಪಕ್ಕೆ ಧಾವಿಸಿ ಬಂದರು. ಪೂಜ್ಯ ಅಲ್ಲಮಪ್ರಭು ಸ್ವಾಮೀಜಿಯವರಿಗೆ ಮೊದಲಿನಿಂದಲೂ ಇವರ ಪರಿಚಯವಿತ್ತು, ಆದ್ದರಿಂದ ಸ್ವಾಮೀಜಿಯವರು ಸಹಜವಾಗಿಯೇ ಮಾತನಾಡುತ್ತ "ಚನ್ನಪಟ್ಟಣದಲ್ಲಿ ಪ್ರವಚನವಾಗಿ ಎಂಟು ವರ್ಷ ಆಯಿತು. ಈಗ ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರ ಪ್ರವಚನವನ್ನು ಅಲ್ಲಿ ಮಾಡಿಸಿ" ಎಂದು ನುಡಿದರು. ಪೂಜ್ಯರ ಮಾತಿಗೆ ಒಪ್ಪಿಗೆ ಸೂಚಿಸಿ, ಬಾವುಟ ಕೊಂಡುಕೊಂಡು ಬಸವರಾಜ ಅವರು ಚನ್ನಪಟ್ಟಣಕ್ಕೆ ಹೋಗಿದ್ದೇ ತಡ ಮುನ್ಸಿಪಲ್ ಕಛೇರಿಯ ಮೈದಾನ ಫಿಕ್ಸ್ ಮಾಡಿಯೇ ಬಿಟ್ಟರು. ಎರಡು ದಿವಸದಲ್ಲಿಯೇ ಪ್ರಚಾರ ಮಾಡಿ ಪ್ರವಚನವನ್ನು ಜೂನ್. 28 ರಿಂದ ಆರಂಭಿಸಲಾಯಿತು. ಪೂಜ್ಯ ಅಪ್ಪಾಜಿಯವರು ತಾವು ಹಿರಿಯೂರಲ್ಲಿ ಲಿಂಗೈಕ್ಯರಾಗುವ ಮುಂಚೆ ಚನ್ನಪಟ್ಟಣದ ಇದೇ ವೇದಿಕೆಯ ಮೇಲೆ 43 ದಿನಗಳ ಕಾಲ ಪ್ರವಚನ ಮಾಡಿದ್ದರೆಂಬುದು ಇಲ್ಲಿ ಗಮನಾರ್ಹ.

ಈ ರೀತಿ ಆರಂಭಗೊಂಡ ಪ್ರವಚನ ದಿನ ದಿನವೂ ಹೆಚ್ಚು ಜನರನ್ನು ಜಾತಿ-ಮತ-ಪಂಥ-ಧರ್ಮ-ಲಿಂಗ ಭೇದವಿಲ್ಲದೆ ಆಕರ್ಷಿಸಿತು. ಅಷ್ಟೇ ಅಲ್ಲ ಪ್ರವಚನ ಕಾಲದಲ್ಲಿ ಒಂದು ದಿನವೂ ತಪ್ಪದೆ ಸುಮಾರು 30-40 ಹಸು,ಗೂಳಿ,ಹೋರಿಗಳ ಹಿಂಡು ಸಮಯಕ್ಕೆ ಸರಿಯಾಗಿ ಬಂದು ಪ್ರವಚನ ಮುಗಿದ ಮೇಲೆ ಆ ಜಾಗದಿಂದ ನಿರ್ಗಮಿಸುತ್ತಿದ್ದುದು ವಿಶೇಷವಾಗಿ ತೋರಿತು.

ಪ್ರವಚನದಿಂದ ಪ್ರಭಾವಿತರಾದ ಸದ್ಭಕ್ತರು ಜಾತಿ ಮತ ಪಂಥಗಳ ಭೇದವಿಲ್ಲದೆ ಮಂತ್ರ ದೀಕ್ಷೆ - ಲಿಂಗ ದೀಕ್ಷೆ ಪಡೆದರು. ಪ್ರವಚನ ಯಶಸ್ವಿಯಾಗಲು ತುಂಬುಹೃದಯದ ಪ್ರೋತ್ಸಾಹ-ಸಹಕಾರ ನೀಡಿದರು.

ಬಸವ ಧರ್ಮ ಪೀಠದ ವತಿಯಿಂದ ನಾನು ಚರಜಂಗಮನಾಗಿ ಸಂಚರಿಸಲು ಪ್ರಾರಂಭಿಸಿದ ಮೇಲೆ ಮೊಟ್ಟ ಮೊದಲ ಬಾರಿಗೆ ನಲವತ್ತೈದು ದಿನಗಳಷ್ಟು ದೀರ್ಘಕಾಲ ಪ್ರವಚನ ಮಾಡಿ ಯಶಸ್ವಿಯಾಗಿದ್ದು ನನಗೆ ಅಪೂರ್ವವಾದ ಆತ್ಮಬಲವನ್ನು-ಆನಂದವನ್ನು ತಂದುಕೊಟ್ಟಿದೆ ಎಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆಲ್ಲ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಸಂಕಲ್ಪ, ಪೂಜ್ಯ ಮಾತಾಜಿಯವರ ಆಶೀರ್ವಾದ ಬಲವೇ ಕಾರಣ ಎಂದರಿತು ನಮ್ರತೆಯಿಂದ ಗುರುತ್ರಯರನ್ನು ಸ್ಮರಿಸಿಕೊಂಡು, ಎಲ್ಲಾ ರೀತಿಯಿಂದಲೂ ಸಹಾಯ ಸಹಕಾರ ನೀಡಿದ ಚನ್ನಪಟ್ಟಣದ ಶರಣ ಬಂಧುಗಳಿಗೆ ಸೃಷ್ಟಿಕರ್ತ ಲಿಂಗದೇವ, ಮಂತ್ರಪುರಷ ಬಸವಣ್ಣನವರು ಸಕಲ ಸಂಪತ್ತನ್ನು ಕರುಣಿಸಲಿ ಎಂದು ಹಾರೈಸುವೆವು. * * *

ದಾಸೋಹಿಗಳ ಮತ್ತು ಕಲ್ಯಾಣ ಕಿರಣ ಮಾಸ ಪತ್ರಿಕೆ ಚಂದಾದಾರರ ಗಮನಕ್ಕೆ

ಪ್ರವಚನ ಕಾಲದಲ್ಲಿ ಭಕ್ತಿ ಅಭಿಮಾನಗಳಿಂದ ಬಸವ ಧರ್ಮ ಪೀಠ ಮತ್ತು ವಿಶ್ವ ಕಲ್ಯಾಣ ಮಿಷನ್‌ನ ವಿವಿಧ ಯೋಜನೆಗಳಿಗೆ ಸಾಕಷ್ಟು ಶರಣ ಬಂಧುಗಳು ವಾಗ್ದಾನ ಮತ್ತು ಕ್ರಿಯಾದಾನ ಮಾಡಿರುವುದು ಸಂತೋಷ. ಅದರಲ್ಲೂ ಪೂಜಾನಿಧಿಗೆ ಮತ್ತು ದಾಸೋಹ ನಿಧಿಗೆ ಧನ ಸಹಾಯ ಮಾಡಿದ ಸದ್ಭಕ್ತರಿಂದ ಪ್ರಸಾದ ಸರಿಯಾಗಿ ತಲುಪುತ್ತಿಲ್ಲವೆಂದು ಮತ್ತು ಚಂದಾದಾರರಿಂದ ಕಲ್ಯಾಣ ಕಿರಣ ಮಾಸ ಪತ್ರಿಕೆಗಳು ಸರಿಯಾಗಿ ತಲುಪದ ಬಗ್ಗೆ ದೂರುಗಳು ನಮ್ಮ ಕಾರ್ಯಾಲಯಕ್ಕೆ ಬರುತ್ತಿವೆ. ಇದಕ್ಕೆ ಮುಖ್ಯವಾದ ಒಂದು ಕಾರಣ ಎಂದರೆ ಈಗಾಗಲೇ ಬರೆದು ಕಳಿಸುತ್ತಿರುವ ಹೆಸರು ಮತ್ತು ವಿಳಾಸಗಳು ಸ್ಪಷ್ಟವಾಗಿ ಅರ್ಥವಾಗದೆ ದೋಷಗಳಿಂದ ತುಂಬಿದ್ದು ಕಂಡು ಬಂದಿದೆ. ಆದರೂ ಆ ವಿಳಾಸಗಳಿಗೆ ಕಳಿಸಿದ ಪ್ರಸಾದ, ಪತ್ರಿಕೆ ಮತ್ತು ಬರೆದ ಪತ್ರಗಳು ಸಂಬಂಧ ಪಟ್ಟವರಿಗೆ ತಲುಪದೆ ನಮಗೆ ವಾಪಸ್ಸು ಬರುತ್ತಿವೆ. ಅಂಥವರು ದಯವಿಟ್ಟು ತಮ್ಮ ಅಡ್ಡ ಹೆಸರಿನೊಂದಿಗಿರುವ ಪೂರ್ಣಹೆಸರು ಮತ್ತು ವಿಳಾಸವನ್ನು ತಾವು ಪಡೆದಿರುವ ರಸೀತಿ ಸಂಖ್ಯೆಯೊಂದಿಗೆ ಸ್ಪಷ್ಟವಾಗಿ, ಗುಂಡಾಗಿ ಬರೆದು ಅಥವಾ ಡಿ.ಟಿ.ಪಿ. ಮಾಡಿಸಿ ಕೆಳಗಿನ ವಿಳಾಸಕ್ಕೆ ಕಳಿಸಬೇಕೆಂದು ಕೋರುತ್ತೇವೆ.

ಬಸವ ಮಂಟಪ, ಕಂಪ್ಯೂಟರ್ ವಿಭಾಗ
ನಂ. 2035, 20ನೇ ಮೇನ್, 2ನೇ ಬ್ಲಾಕ್
ರಾಜಾಜಿನಗರ,
ಬೆಂಗಳೂರು-560010
ದೂ : 3325335

ಗುರು ವಾಣಿ

ಸ್ಥೂಲ ಸೃಷ್ಟಿಯ ಜ್ಞಾನವೇ ವಿಜ್ಞಾನ, ಸೂಕ್ಷ್ಮ ಸೃಷ್ಟಿಯ ಪರಿಜ್ಞಾನವೇ ತತ್ತ್ವಜ್ಞಾನ, ಕಾರಣ ಸೃಷ್ಟಿಯ ಅಪರೋಕ್ಷ ಜ್ಞಾನವೇ ಸುಜ್ಞಾನ ಅಥವಾ ಧರ್ಮ - ಸ್ವಾಮಿ ಲಿಂಗಾನಂದ

ಬಸವ ಧರ್ಮ ಪೀಠದ ಯೋಜನೆಗಳಿಗೆ ದಾಸೋಹ ಮಾಡಿದ ಶರಣ ಬಂಧುಗಳು

ಕಟ್ಟಡ ನಿಧಿಗೆ : ಶರಣರುಗಳಾದ :

		ರೂ.
ಗಂಗಮ್ಮ ಜಿ. ಚನ್ನಯ್ಯ	ಚಳ್ಳಕೆರೆ	81,000-00
ಬಿ.ಟಿ. ಚಾಮರಾಜ	,,	,,
ಕೊಟ್ರಬಸಮ್ಮ	,,	51,000-00
ಸಿ. ಆರ್. ವೀರಭದ್ರಯ್ಯ	,,	,,
ನಾಗರತ್ನಮ್ಮ ಮೋಹನನಾಥ್	,,	5,001-00
ದೇವಿರಮ್ಮ ಕದರಪ್ಪ	,,	,,

ಬಸವ ಮೂರ್ತಿಗಾಗಿ
ಶರಣರುಗಳಾದ :

ಜಿ.ಹೆಚ್. ಹನುಮಂತಪ್ಪ, ಗಿರಿಯಮ್ಮನ ಹಳ್ಳಿ	11,101-00
ಭ್ರಮರಾಂಬ ಎಸ್. ಮಂಜುನಾಥ್, ಚಳ್ಳಕೆರೆ	1,800-00
ಕೊಟ್ರಬಸಮ್ಮ ಬಿ. ಎಂ. ಈಶ್ವರಪ್ಪನವರು, ಗಾಂಧಿನಗರ,	1,001-00

ಬಸವ ಜಯಂತಿಗೆ ಪುದುವಟ್ಟು
ಶರಣರುಗಳಾದ :

ಸಾವಿತ್ರಮ್ಮ ಬಿ. ಅಜ್ಜಣ್ಣ	ಚಳ್ಳಕೆರೆ	5,000-00
ಜಿ. ಹೆಚ್. ಹನುಮಂತಪ್ಪ	,,	,,

ಬಸವ ಕಲ್ಯಾಣದ ದಾಸೋಹ ನಿಧಿಗೆ ರೂ. 1,200 ಕೊಟ್ಟವರು
ಶರಣರುಗಳಾದ :

ಜಿ. ವಿ. ವೀರಣ್ಣ ಮತ್ತು ಅಮೃತಮ್ಮ	ಚಳ್ಳಕೆರೆ
ಬಿ. ಜೊಮ್ಮಣ್ಣ	,,
ಋ. ಕೊಟ್ರೇಶ್ ತಾಯಿ ಸಿದ್ರಾಮಕ್ಕ	,,
ಸಿ.ವೈ. ಶಿವರುದ್ರಪ್ಪ	ಗಾಂಧಿನಗರ
ಬಿ. ಶ್ಯಾಮಪ್ಪ ನಿ. ಶಿಕ್ಷಕರು	ಚಳ್ಳಕೆರೆ
ಎಂ. ಶಿವಮೂರ್ತಿ	ಗಾಂಧಿನಗರ
ಬಿ.ಕೆ. ರಾಜಶೇಖರಪ್ಪ	ಚಳ್ಳಕೆರೆ
ವೀರಣ್ಣ ತುಪ್ಪದ	ಹಳೇ ನಗರ
ಟಿ. ಎಂ. ಬಸವರಾಜಪ್ಪ	,,
ಚಾಮಾಮಣಿ ಜಿ. ತಿಪ್ಪೇಸ್ವಾಮಿ	ಚಳ್ಳಕೆರೆ
ಎಸ್. ಜಯ ಶಂಕರಪ್ಪ ಮತ್ತು ಮಕ್ಕಳು	ಚಳ್ಳಕೆರೆ
ಟಿ.ಪಿ. ರವಿಕುಮಾರ್	ಗಾಂಧಿನಗರ
ಟಿ. ಆರ್. ಬಸವರಾಜ್	,,
ಎಸ್.ವಿ. ನಾಗರಾಜು	ಚಳ್ಳಕೆರೆ
ಬಿಸಿನೀರು ಬಸಣ್ಣ ಮತ್ತು ಮಕ್ಕಳು	ಚಳ್ಳಕೆರೆ
ಎಸ್.ಎಚ್. ಬಜಂತ್ರಿ ಫಕೀರಪ್ಪ ಬಜಂತ್ರಿ	,,
ಸಿದ್ದಗಂಗಮ್ಮ ಭೀಮಣ್ಣನವರು	,,
ಪಾರ್ವತಮ್ಮ ತಿಪ್ಪೇಸ್ವಾಮಿ	,,
ವಿಕಲಕ್ಷ್ಮಮ್ಮ ಭೃಂಗಿ ಈಶ್ವರಪ್ಪ	ತ್ಯಾಗರಾಜನಗರ
ಭ್ರಮರಾಂಬ ಎಸ್. ಮಂಜುನಾಥ ಮತ್ತು ಮಕ್ಕಳು	ಚಳ್ಳಕೆರೆ
ಶ್ರೀವೆಂಕಟೇಶ್ವರ ಆಯಿಲ್ ಮಿಲ್	ಚಳ್ಳಕೆರೆ
ಶ್ರೀ ಸಿದ್ದಲಿಂಗೇಶ್ವರ ರೈಸ್ ಮತ್ತು ಆಯಿಲ್ ಮಿಲ್	ಚಳ್ಳಕೆರೆ
ಟಿ. ವಿರೂಪಾಕ್ಷಪ್ಪ	ತ್ಯಾಗರಾಜನಗರ
ಕೆ.ಪಿ. ಕೊಲ್ಹಾರಪ್ಪ	ಚಳ್ಳಕೆರೆ
ಲಕ್ಷ್ಮಮ್ಮ ಸಿ.ಎಂ. ಚಂದ್ರಶೇಖರ	ತ್ಯಾಗರಾಜನಗರ
ಟಿ. ಎಸ್. ರಾಜಶೇಖರಯ್ಯ	ತ್ಯಾಗರಾಜನಗರ
ಬಿ.ಟಿ. ಗೌರಮ್ಮ	
ಸಿ.ಎ. ಶಿವಣ್ಣ ಮತ್ತು ಮಕ್ಕಳು	,,
ಬಿ.ಟಿ. ಜಯಣ್ಣ	ಚಳ್ಳಕೆರೆ
ಕೆ.ಆರ್. ನಾಗರಾಜ್	ಚಳ್ಳಕೆರೆ
ಕೆ.ಪಿ. ರುದ್ರಪ್ಪ	,,
ಎ. ಮಲ್ಲಿಕಾರ್ಜುನ	,,
ವೆಂಕಟೇಶರೆಡ್ಡಿ	ನಾಯಕನ ಹಟ್ಟಿ

ಕೂಡಲಸಂಗಮದ ಪೂಜಾ ನಿಧಿಗೆ ರೂ. 501-00 ಕಾಣಿಕೆ ಸಲ್ಲಿಸಿದವರು

ಶರಣ. ಬಸಣ್ಣ ಸಣ್ಣ ಪಾಪಣ್ಣ	ಚಳ್ಳಕೆರೆ

ಬಸವ ಕಲ್ಯಾಣದ ಪೂಜಾನಿಧಿಗೆ ರೂ. 601-00 ಕಾಣಿಕೆ ಸಲ್ಲಿಸಿದವರು

ಶರಣರುಗಳಾದ :

ಪಾರ್ವತಮ್ಮ ಮದಕರಿ ನಗರ
ಬಿ. ಬಸವರಾಜಪ್ಪ ಚಳ್ಳಕೆರೆ
ಆರ್. ಎಸ್. ಪಟ್ಟರುದ್ರಪ್ಪ ಚಳ್ಳಕೆರೆ
ಗುರುಸ್ವಾಮಿ ನಗರಂಗೆರೆ
ಮಾಣಿಕ್ಯ ಪಿ.ಎಸ್. ಸತ್ಯನಾರಾಯಣ ಚಳ್ಳಕೆರೆ
ನಾಗರತ್ನ ಪದ್ಮನಾಭಗುಪ್ತ ಚಳ್ಳಕೆರೆ
ಪಿ. ಶಂಕರಪ್ಪ ಮತ್ತು ಮಕ್ಕಳು ''
ತಿಪ್ಪಮ್ಮ ಲಿ॥ ತಿಪ್ಪೆಸ್ವಾಮಿ ''
ಈ. ಸಿದ್ಧಯ್ಯ ನಾಯಕನಹಟ್ಟಿ
ಕೊಟ್ರಬಸಮ್ಮ ಬಿ.ಎಂ. ಈಶ್ವರಪ್ಪ ಗಾಂಧಿನಗರ
ಪರ್ವತಮ್ಮ ಮತ್ತು ಟಿ. ಮುದ್ದಾರೆಡ್ಡಿ ಚಳ್ಳಕೆರೆ
ತಿರುಮಲ ವೆಂಕಟೇಶ್ವರ ಜುವೆಲರ್ ''
ಹೂಗಾರ ಸಣ್ಣಪ್ಪ ''

ಗುರು ಕಾಣಿಕೆ :

ಶರಣರುಗಳಾದ :

ತಿಪ್ಪಮ್ಮ ಚಳ್ಳಕೆರೆ 5,001-00
ಎಸ್.ಟಿ. ತಿಪ್ಪೇಸ್ವಾಮಿ '' 3,001-00
ವೀರಮ್ಮ ಎಸ್. ಹಾಲಪ್ಪ, ತ್ಯಾಗರಾಜನಗರ ''
ಶರಣಪ್ಪ ಚಳ್ಳಕೆರೆ ''
ಕಲ್ಪನಾ ಕೆ.ಜಿ. ಅಶೋಕ ಕುಮಾರ್, ''3,000-00
ಸುಭದ್ರಮ್ಮ ಡಾ॥ ಕೆ.ಟಿ. ಸ್ವಾಮಿ ''2,001-00
ತುಳಜಮ್ಮ ಸಿ. ವೆಂಕಟಸ್ವಾಮಿ '' ''
ಕೆ.ಬಿ. ಗಂಗಾಧರ, ನಾಯಕನಹಟ್ಟಿ ''1,001-00
ಎಂ.ಬಿ. ಗೋಕರ್ಣ, ಶಿಕ್ಷಕರು, ಮದಕರಿನಗರ ''
ಕೆ.ಟಿ. ಜಗದೀಶ್ ಚಳ್ಳಕೆರೆ ''
ತಿಪ್ಪೇಸ್ವಾಮಿ '' ''
ಪಾರ್ವತಮ್ಮ ಪರಮೇಶ್ವರಪ್ಪಜಿಜಿ ''
ಬಿ.ಕೆ. ರಾಜಶೇಖರಪ್ಪ '' 1,000-00
ಹೆಚ್. ಮಚ್ಚೇಂದ್ರಪ್ಪ, ದೊಡ್ಡಉಳ್ಳಾರ್ತಿ 501-00
ಟಿ. ಆರ್. ಪಿ. ಇಂಡಸ್ಟ್ರೀಸ್ ಚಳ್ಳಕೆರೆ ''
ಶ್ರೀ ತಿಪ್ಪೇರುದ್ರ ಸ್ವಾಮಿ ಟ್ರೇಡರ್ಸ್ ನರಹರಿನಗರ ''
ಕೌಸಲ್ಯ ಸಿ.ಎ. ರುದ್ರಾಚಾರ್ ಗಾಂಧಿನಗರ ''
ಎಸ್. ನಿರಂಜನ ಜೆ.ಇ. ಚಳ್ಳಕೆರೆ ''
ಅಶೋಕ ಕುಮಾರ್ '' ''
ತಾಳಕೇರಪ್ಪ '' ''
ಸಿದ್ಧಗಂಗಾ ಇಂಡಸ್ಟ್ರೀಸ್ '' ''

ಮುಂದುವರಿಯುವುದು........

ಬಸವ ವಚನಾಮೃತ

ಭಕ್ತಿಯುಕ್ತಿಯನರಿಯೆ, ಷೋಡಶೋಪಚಾರವನರಿಯೆ,
ಭಾವನಿರ್ಭಾವವನರಿಯೆ, ಜ್ಞಾನಮಹಾಜ್ಞಾನವನರಿಯೆ,
ಲಿಂಗದೇವಯ್ಯಾ, ಮಡಿವಾಳ ತಂದೆಗಳ ಪಾದಕ್ಕೆ
ನಮೋ ನಮೋ ಎನುತಿರ್ದೆನು. (ಬ.ವ.ದೀ - 1146)

ಓದಿಸುವಣ್ಣಗಳೆನ್ನ ಮಾತಾಡ ಕಲಿಸಿದರಲ್ಲದೆ
ಮನಕ್ಕೆ ಮಾತಾಡ ಕಲಿಸಲಿಲ್ಲವಯ್ಯಾ.
ಧನಕ್ಕೆ ಮುನಿವರಲ್ಲದೆ, ಎನ್ನ ಮನಕ್ಕೆ ಮುನಿವರಿಲ್ಲಯ್ಯಾ.
ಧನಕ್ಕೆ ಮುನಿವರಿಗೆ ಮುನಿದು ಎನ್ನ ಮನಕ್ಕೆ ಮುನಿದ,
ಲಿಂಗದೇವಾ, ಮಡಿವಾಳ ಮಾಚಯ್ಯನು. (ಬ.ವ.ದೀ - 1149)

ಬಸವ ಭಕ್ತರ ನವರಾತ್ರಿ ಆಚರಣೆ

ಲಿಂಗಾಯತ ಧರ್ಮಾನುಯಾಯಿಗಳು ಯಾವುದೇ ಹಬ್ಬವನ್ನು ತಾತ್ತ್ವಿಕವಾಗಿ, ವೈಚಾರಿಕವಾಗಿ, ಭಾಕ್ತಿಕವಾಗಿ ಆಚರಿಸಬೇಕು. ಆಡಂಬರ, ವೈಭವ, ಮೂಢನಂಬಿಕೆಗಳಿಂದ ಹೊರತಾಗಿ ಹಬ್ಬವನ್ನು ಆಚರಿಸಬೇಕು. ಆಶ್ವಯುಜ ಮಾಸದ ಅಮವಾಸ್ಯೆಯು ದಿ.25-10-2003ರಂದು ಬರುತ್ತಿದ್ದು, ಪ್ರತಿಪದೆ ದಿ.26-10-2003ದಂದು ಪ್ರಾರಂಭವಾಗುತ್ತದೆ. ವಿಜಯ ದಶಮಿಯು ಅಕ್ಟೋಬರ್ 5 ರಂದು ಒದಗಿ ಬಂದಿದೆ. ಸಾಂಪ್ರದಾಯಿಕವಾಗಿ ಈ ದಿನಗಳನ್ನು ನವರಾತ್ರಿ ಎಂದು ಆಚರಿಸಲಾಗುವುದು. ದೇವಿಗೆ ಸಂಬಂಧಿಸಿದ ಹಬ್ಬವನ್ನಾಗಿ ಹಿಂದುಗಳು ಆಚರಿಸುವರು. ದೇವಿಯ ಸಂಕೇತವಾಗಿ ಘಟ್ಟ ಕೂಡ್ರಿಸುವುದು ಎಂದು ಕೆಲವರು, ಮತ್ತೆ ಕೆಲವರು ದೇವಿ ಪುರಾಣ ಪಾರಾಯಣ ಮಾಡುವರು. ಈ ಯಾವ ಪದ್ಧತಿಯೂ ಬಸವ ಪಥಿಕರಿಗೆ ಮಾನ್ಯವಲ್ಲ. ಏಕಲಿಂಗ ನಿಷ್ಠಾಪರರಾದ ಶರಣರು ತ್ರಿತತ್ತ್ವ (Trinity)ಗಳಾದ ಗುರು-ಲಿಂಗ-ಜಂಗಮದ ಆರಾಧನೆಯ ಹೊರತು ಬೇರಾವ ಕಾಲ್ಪನಿಕ ದೇವತೆಗಳನ್ನು ಪೂಜಿಸಬಾರದು.

ಸಾಂಪ್ರದಾಯಿಕವಾಗಿ ನವರಾತ್ರಿಯನ್ನು ಆಚರಿಸಿಕೊಂಡು ಬಂದ ಜನರು ಪರ್ಯಾಯವಾಗಿ ಹೀಗೆ ಪೂಜೆಯನ್ನು ಮಾಡಬೇಕು.

1. ಪ್ರತಿಪದೆಯ ದಿವಸ ಒಂದು ಮಂಟಪ ಮಾಡಿ ಧರ್ಮಪಿತ ಬಸವಣ್ಣನವರ ಭಾವಚಿತ್ರವನ್ನು ಪ್ರತಿಷ್ಠಾಪಿಸಬೇಕು.
2. ಪ್ರತಿಪದೆಯಂದು ಮತ್ತು ವಿಜಯದಶಮಿಯಂದು ಇಷ್ಟಲಿಂಗಧಾರಣೆಯ ನಂತರ ಪೂರ್ತಿ ಬಸವೇಶ್ವರ ಪೂಜಾವ್ರತ ಮಾಡಬೇಕು.
3. ಲಿಂಗಾಯತೇತರ ಬಸವ ಭಕ್ತರು ಇಷ್ಟಲಿಂಗಧಾರಣೆ ಇಲ್ಲದಿರುವುದರಿಂದ ಬಸವೇಶ್ವರ ಪೂಜಾವ್ರತ ಮಾಡಬೇಕು.
4. ಉಳಿದ ದಿನ 108 ಬಸವ ಮಂತ್ರ ಹೇಳಿ ಪುಷ್ಪಾರ್ಚನೆ ಮಾಡಬೇಕು.
5. ಧರ್ಮಪಿತ ಬಸವಣ್ಣನವರ ವಚನಗಳ ಸಂಗ್ರಹವಾದ ಬಸವ ವಚನ ದೀಪ್ತಿ, ಬಸವ ದರ್ಶನ ಕೃತಿಗಳನ್ನು ಎರಡೂ ಹೊತ್ತು ಓದಬೇಕು.
6. ಚಿಕ್ಕ ಚಿಕ್ಕ ಕಾಗದದ ತುಂಡುಗಳನ್ನು ಮಾಡಿ ಅದರಲ್ಲಿ ವಚನಗಳನ್ನು 9 ದಿವಸಗಳಕಾಲ ಬರೆಯಬೇಕು. ವಚನದ ಕೆಳಗೆ ಕೊಡುಗೆ ಎಂದು ಬರೆದು, ನಿಮ್ಮ ಹೆಸರು ಬರೆದಿರಬೇಕು.
7. ವಿಜಯದಶಮಿಯ ದಿನ ಬಸವಣ್ಣನವರ ಭಾವಚಿತ್ರಕ್ಕೆ ವಚನಗಳನ್ನು ಬರೆದಿಟ್ಟ ಹಾಳೆಗಳನ್ನೇ ಪುಷ್ಪದೊಡನೆ ಏರಿಸಿ, ನಂತರ ಸಂಗ್ರಹಿಸಿ ಇಟ್ಟುಕೊಂಡು, ಬನ್ನಿ ಕೊಡುವುದರ ಬದಲಿಗೆ (ಅಥವಾ ಬನ್ನಿಯ ಜೊತೆಗೆ) ಆ ವಚನಗಳನ್ನು ನೆನಪಿನ ಕೊಡುಗೆಯಾಗಿ ಕೊಡಬೇಕು.
8. ವಿಜಯ ದಶಮಿಯ ದಿನ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾಗಿ, ಅಲ್ಲಿಯೂ ಶರಣ ಬಂಧುಗಳಿಗೆ ವಚನಗಳನ್ನು ವಿತರಿಸಿ, ಸಂಜೆ ತಮ್ಮ ಗುರು-ಹಿರಿಯರು, ಬಂಧು-ಬಳಗ-ಮಿತ್ರರನ್ನು ಸಂದರ್ಶಿಸಲು ಹೋಗಿ ವಚನಗಳನ್ನು ಜೊತೆಗೆ ಕಲ್ಲುಸಕ್ಕರೆ ಸಿಹಿ ಒಯ್ದು ಅದನ್ನು ವಿತರಿಸಿ ಬರಬೇಕು.
9. ಅಂದು ಬೆಳಿಗ್ಗೆ ಸಾಮೂಹಿಕವಾಗಿ ಶರಣ ಬಂಧುಗಳೆಲ್ಲ ಸೇರಿ ಅಕ್ಕನಾಗಲಾಂಬಿಕಾ ಸಂಸ್ಮರಣೆ, ಬಸವ ಧರ್ಮ ವಿಜಯೋತ್ಸವವನ್ನು ಆಚರಿಸಬೇಕು.

- ಮಾತಾಜಿ.

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಬೆಂಗಳೂರು ವಿಜಯನಗರದ 5ನೇ ಮೇನ್ ಸುಬ್ಬಣ್ಣ ಗಾರ್ಡನ್, ಬಿ.ಟಿ.ಎಸ್. ಗ್ಯಾರೇಜ್ ಹಿಂಭಾಗದಲ್ಲಿರುವ, ಶನಿದೇವರ ದೇವಸ್ಥಾನ ಪಕ್ಕದ ಆವರಣದಲ್ಲಿ ಬಸವ ಕಲ್ಯಾಣ ಶೂನ್ಯ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ ಅವರಿಂದ ದಿ.27-8-2003ರ ಚನ್ನ(ಬುಧ)ವಾರದಿಂದ ನಾಲ್ಕು ವಾರಗಳವರೆಗೆ ಪ್ರತಿದಿನ ಸಂಜೆ 6-30 ರಿಂದ 8-30 ಗಂಟೆವರೆಗೆ ಪ್ರವಚನವನ್ನು ಏರ್ಪಡಿಸಲಾಗಿದೆ. ವಿಜಯನಗರದ ಸುತ್ತಮುತ್ತಲಿರುವ ಆಸಕ್ತ ಶರಣಬಂಧುಗಳು ಇಂಥ ಅಮೂಲ್ಯವಾದ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಬಸ್ ಮಾರ್ಗ : ನವರಂಗಿನಿಂದ 75 ಎಫ್, 176, ಮೆಜೆಸ್ಟಿಕ್‌ನಿಂದ 63, ವಿಜಯನಗರದ ಮೇನ್ ರಸ್ತೆಯಲ್ಲಿ ಸಂಚರಿಸುವ ಎಲ್ಲಾ ಬಿ.ಟಿ.ಎಸ್ ಬಸ್ಸುಗಳು ವಿಜಯನಗರದ ಬಿ.ಟಿ.ಎಸ್. ಗ್ಯಾರೇಜ್.ಬಳಿ ನಿಲ್ಲುತ್ತದೆ.

- ವಿಶ್ವಧರ್ಮ ಪ್ರವಚನ ಸಮಿತಿ

ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಬರುವ ಶರಣರ ಹಬ್ಬ-ಹುಣ್ಣಿಮೆ-ಉತ್ಸವಗಳು

ಮಹಾತ್ಮಗಾಂಧಿ ಜಯಂತಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಜಯಂತಿ	ಅಕ್ಟೋಬರ್ 2
ವಿಜಯದಶಮಿ-ಅಕ್ಕನಾಗಲಾಂಬಿಕಾ ಸಂಸ್ಮರಣೆ ಮತ್ತು ಬಸವ ಧರ್ಮ ವಿಜಯೋತ್ಸವ	ಅಕ್ಟೋಬರ್ 5
ನಾಗಲಾಂಬಿಕಾ ಪೌರ್ಣಮೆ	ಅಕ್ಟೋಬರ್ 10
ಚನ್ನಬಸವ ಜಯಂತಿ(ದೀಪಾವಳಿ)	ಅಕ್ಟೋಬರ್ 26
ವಚನ ದೀಪೋತ್ಸವ	ಅಕ್ಟೋಬರ್ 26
ಕನ್ನಡ ರಾಜ್ಯೋತ್ಸವ	ನವೆಂಬರ್ 1
ಚನ್ನ ಬಸವಣ್ಣನವರ ಲಿಂಗೈಕ್ಯ ದಿನ - ಕಾರ್ತಿಕ ಹುಣ್ಣಿಮೆ	ನವೆಂಬರ್ 8
ವಚನ ಪೌರ್ಣಮೆ	ನವೆಂಬರ್ 8
ಗುರುನಾನಕ್ ಜಯಂತಿ	ನವೆಂಬರ್ 8

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **"ಕಲ್ಯಾಣ ನಗರ"** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.


ವ್ಯವಹರಿಸಬೇಕಾದ ವಿಳಾಸ:- ದೂ : 080 - 332 5335/332 2790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ, ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦


ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೫೭, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.



ಟ್ರ್ಯಾಕ್ಟರ್‌ನಲ್ಲಿ ನಿರ್ಮಿಸಲಾದ ಭವ್ಯ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಚನ್ನಬಸವಾನಂದ ಸ್ವಾಮಿಗಳು ಹಾಗೂ ಚನ್ನಪಟ್ಟಣದ ಕುಡಿನೀರು ಕಟ್ಟೆ ವಿರಕ್ತ ಮಠದ ಪೂಜ್ಯ ಶಿವರುದ್ರ ಸ್ವಾಮಿಗಳು



ಚನ್ನಪಟ್ಟಣದ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾಗಿ ನೇಮಕಗೊಂಡ ಶರಣ ಜಗದೀಶ್ ಅವರನ್ನು ಪೂಜ್ಯ ಅಲ್ಲಮಪ್ರಭು ಸ್ವಾಮೀಜಿಯವರು ಆಶೀರ್ವದಿಸುತ್ತಿರುವುದು

CPMG/KA/BGW -50/2003-2005
WPP (W)-17 R.No. 19980/70

